Over 25 Years of Celebrating the Arts

India Foundation for the Arts

I F A

ಕಲಿ-ಕಲಿಸು

AN ARTS EDUCATION TEACHER INITIATIVE

KALI-KALISU

ಹೆಜ್ಜೆಗಳು

ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಪ್ರಯೋಗಗಳು

2019–20 : 2022–23

This Publication is supported by the Singhal Iyer Family Foundation (SIFF)
www.siff.in

ಕಲಿ-ಕಲಿಸು
AN ARTS EDUCATION TEACHER INITIATIVE
KALI-KALISU

ಹೆಜ್ಜೆಗಳು

ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಪ್ರಯೋಗಗಳು
2019–20 : 2022–23

Over 25 Years of Celebrating the Arts

I F A

India Foundation for the Arts

Kali Kalisu - Hejjegalu:
A snapshot of our arts integrated interventions in
Government School Karnataka during 2019-2023
Complied by: Jahan Ara & Mounesh Vishwakarma

India Foundation For the Arts
'Apurva' Ground Floor, No 259, 4th Cross,
Raj Mahal Vilas 2nd Stage, 2nd Block, Bengaluru
India - 560 094
Tel: 91-80-2341 4681 / 82 / 83

ಸಂಪಾದಕರು	:	ಜಹಾನ್ ಆರಾ, ಮೌನೇಶ ವಿಶ್ವಕರ್ಮ
ಪ್ರಥಮ ಮುದ್ರಣ	:	2023
ಹಕ್ಕುಗಳು	:	ಐಎಫ್ಎ, ಬೆಂಗಳೂರು
ಪುಟಗಳು	:	104
ಆಕಾರ	:	1/8 ಡೆಮಿ
ಕಾಗದ	:	100 ಜಿ.ಎಸ್.ಎಂ ಆರ್ಟ್ ಪೇಪರ್
ಪುಸ್ತಕ ವಿನ್ಯಾಸ ಮತ್ತು ಮುದ್ರಣ	:	ಆರ್ವಿ ಇಂಟರ್‌ಗ್ರಾಫಿಕ್ಸ್, ಪುತ್ತೂರು ಮೊ. 8970802040

ಮಕ್ಕಳ ಮನ ತಣಿಸುವ ಕವಿತೆಗಳು

ಸಂಜೆವಾಣಿ ಪತ್ರಿಕೆ

ವಿಜಯನಗರ ಜಿಲ್ಲೆಯಲ್ಲಿ ಕಲಾಯಾತ್ರೆ ಆರಂಭ:

ಕಲೆಗೆ ಕೌದಿಯನ್ನೇ ಮೂಲ ಸಾಧನ ಮಾಡಿಕೊಂಡಿದ್ದ ಶಿಕ್ಷಕಿ

ಸರ್ಕಾರಿ ಶಾಲೆಗಳನ್ನು ಸಬಲೀಕರಣಗೊಳಿಸುವ ಉದ್ದೇಶ

ಶಿಕ್ಷಕರಿಗೆ ಕಲಿ, ಕಲಿಸು ತರಬೇತಿ

ಮುಖ್ಯಾಂಶಗಳು

'ಪ್ರಶ್ನೋಪ' ಪತ್ರಾಕಾರ ಪತ್ರಿಕೆ ಬಿಡುಗಡೆ:

ಪತ್ರವ್ಯವಹಾರದಿಂದ ಕಲಿಕೆ ಸುಲಭ –ಟಿ.ಎನ್.ಕೃಷ್ಣಮೂರ್ತಿ

ಪತ್ರವ್ಯ ಪತ್ರಿಕೆಯಿಂದ ಕಲಿಕೆ ಸುಲಭ –ಟಿ.ಎನ್.ಕೃಷ್ಣಮೂರ್ತಿ

ಸಂಗತ

ಜಲ ಸಂಚಯ: ಗದ್ದಲವಿಲ್ಲ, ಸಪ್ಪಾನ್ಸಾಗಿಲ್ಲ!

ಶಿಕ್ಷಕರಾದ ಗಂಗಾಧರ ಲಮಾಣಿಯವರಿಂದ "ರದ್ದಾಲ್ ಮತ್ತು ಕಲಾ ಅಂತರ್ಗತ ಕಲಿಕೆ" ವಿನೂತನ ಪ್ರಯೋಗ

'ರದ್ದಾಲ್, ಕಲಾ ಅಂತರ್ಗತ ಕಲಿಕೆ ವಿನೂತನ ಪ್ರಯೋಗದ ಕಾರ್ಯಾಗಾರ

ಕಲಿಕಾ ಪ್ರಕ್ರಿಯೆ

ಕೌದಿ ಕಲೆ ಶಿಕ್ಷಣದ ಸೆಲೆ

ಕಲಿಕೆಯನ್ನು ನಿರಂತರ ಕ್ರಿಯೆಯನ್ನಾಗಿಸಿ

ಪ್ರಜಾವಾಣಿ

ನಾವೀನ್ಯ ಪ್ರಯೋಗ ಇರಲಿ'

Vanavil trust organises art show in Nagapattinam

The Hindu Bureau

NAGAPATTINAM

Young nomads' artistic flair on display

NOMAD ART SHOW

ಶಿಕ್ಷಣ

ಶಾಲಾ ಪತ್ರಿಕೆಗಳೇ ಮಕ್ಕಳ ಪತ್ರಿಕೆಯಾದರೆ?

ಪರಿವಿಡಿ

ಶುಭ ಸಂದೇಶ

vi ಮೇನಕಾ

ಅವಲೋಕನ

viii ಕೃಷ್ಣಮೂರ್ತಿ ಟಿ.ಎನ್.

x ರಾಧಿಕಾ ಭಾರದ್ವಾಜ್

ಸಂಪಾದಕೀಯ

xii ಜಹಾನ್ ಆರಾ
ಮೌನೇಶ ವಿಶ್ವಕರ್ಮ

ಯೋಜನೆಗಳು 2019–20

3 ಸುನಿಲ ಕುಮಾರ್ ಎ.ಎಂ.

5 ಜಹಾನ್ ಆರಾ

7 ರಾಣಿ ಮಂಜುಳಾದೇವಿ

9 ಮಮತಾ ಹೆಚ್ ಜೆ.

11 ತಾರಾನಾಥ್.ಪಿ

13 ಸಂದೇಶ್ ಡಿ ಪಿ

15 ಕೃಷ್ಣಮೂರ್ತಿ ಗಾಂವ್ಕರ್

17 ಶ್ರೀಕಾಂತ ಪವಾಡೇಪ್ಪ ನವಲಗಿರಿ

19 ಎಸ್ಎಫ್ ಹುಸೇನಿ

21 ಮೌನೇಶ ವಿಶ್ವಕರ್ಮ

23 ಕೆ.ವಿ.ನಾಯಕ

25 ಸುನೀತ ಆರ್

27 ವಿಶ್ವನಾಥ ಈ

29 ವಾನವಿಲ್ ಟ್ರಸ್ಟ್, ತಮಿಳುನಾಡು

31 ಕಮ್ಯೂನಿಟಿ ಡೆವೆಲಪ್‌ಮೆಂಟ್
ಸೆಂಟರ್, ಮಧ್ಯಪ್ರದೇಶ

**ಕೋವಿಡ್ 19 ಕಾರಣದಿಂದ 2020–21 ರಲ್ಲಿ
ಕಲಾ ಶಿಕ್ಷಣ ಯೋಜನೆಯಡಿ ಯಾವುದೇ ಪ್ರಸ್ತಾವನೆ ಆಹ್ವಾನಿಸಿಲ್ಲ.**

ಯೋಜನೆಗಳು 2021–22

35 ಸೋಮಪ್ಪ ಕುದರಿಹಾಳ
37 ರಂಗನಾಥ ಎಸ್.ಆರ್
39 ಕೆ.ಎಂ. ಗುರುಪ್ರಸಾದ
41 ಪರಮೇಶ್ವರಯ್ಯ ಸೊಪ್ಪಿಮಠ
43 ಸಿದ್ದಯ್ಯ ಮಠಪತಿ
45 ಡಾ.ಎಂ.ಬೈರೇಗೌಡ
47 ಸೈಯದ್ ಸಾದಿಕ್
49 ಮಂಜುನಾಥ್ ಎ
51 ವೆಂಕಟೇಶ್ ಪ್ರಸಾದ್
53 ರಾಜಶೇಖರ ಮೂರ್ತಿ

ಯೋಜನೆಗಳು 2022–23

57 ಗೀತಾ ಕೆ.ಹೆಚ್
59 ಸುಭಾಷ್ ಚಂದ್ರ ಭಜಂತ್ರಿ
61 ಗಂಗಪ್ಪ ಎಸ್.ಎಲ್
63 ಸೂರ್ಯಕಾಂತ್ ನಂದೂರು
65 ಅರವಿಂದ ಕುಡ್ಲ
67 ರಮೇಶ್ ವಿ. ಬಳ್ಳಾ
69 ದರ್ಶನ್ ಆರ್. ಶೇಟ್
71 ತಾಜುದ್ದೀನ್ ಆಜಾದ್
73 ರಾಣಿ ಡಿ.ಎಂ.
75 ಸಂತೋಷ್ ದಿಂಡಗೂರು
77 ಶಿವಕ್ಕ ಕುರುವತಿ
79 ಕಿಡ್ಡಿ ಕಿಂಗ್ಡಮ್ ಅಕಾಡೆಮಿ ಸಮಿತಿ, ಲಕ್ನೋ
81 ಮುಸ್ಕಾನ್ ಸಂಸ್ಥೆ ಭೋಪಾಲ್ ಮಧ್ಯಪ್ರದೇಶ
83 ಕಲಕೇರಿ ಸಂಗೀತ ವಿದ್ಯಾಲಯ ಧಾರವಾಡ

ಪ್ರಕಟಣೆ

85 ಕಲಿ–ಕಲಿಸು ಆಹ್ವಾನ
89 SIFF ವೆಂಚರ್ಸ್

ಶುಭ ಸಂದೇಶ

ಮೇನಕಾ
ಮುಖ್ಯಸ್ಥರು
ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್
ಬೆಂಗಳೂರು

ಐಎಫ್ಎ ನಲ್ಲಿ ಕಲಾ ಶಿಕ್ಷಣವನ್ನು ಉತ್ತೇಜಿಸುವ ಕಲಿ–ಕಲಿಸು ಕಾರ್ಯಕ್ರಮ ಪರಸ್ಪರ ಕಲಿಕೆಯ ಸಾಮೂಹಿಕ ಪ್ರಕ್ರಿಯೆಯಾಗಿದೆ.

ನಮ್ಮ ಕಾರ್ಯಕ್ರಮದಾದ್ಯಂತ ವೈವಿಧ್ಯಪೂರ್ಣ ಯೋಜನೆಗಳು ತರಗತಿಯಲ್ಲಿ ಕಾರ್ಯೋನ್ಮುಖವಾಗಿದ್ದು ಸಂತಸದಾಯಕ ಕಲಿಕೆಯ ಜೊತೆಯಲ್ಲಿ ವಿವಿಧ ಕಲಾ ಸಾರಗಳನ್ನು ತರಗತಿಗೆ ಕೊಂಡೊಯ್ಯಲಾಗಿದೆ. ಈ ಕಾರ್ಯಕ್ರಮವು ಇತಿಹಾಸ ಮತ್ತು ಸಮುದಾಯಗಳೊಂದಿಗೆ ಜೀವಿತಾನುಭವಗಳನ್ನು ಕಲಿಯಲು ಸಂಪರ್ಕವನ್ನು ಒದಗಿಸಿದೆ. ಈ ಮೂಲಕ ಕಲಿಕೆಯನ್ನು ಉತ್ಕೃಷ್ಟಗೊಳಿಸುವುದರೊಂದಿಗೆ ಪಠ್ಯವನ್ನು ಸಮುದಾಯ ಮತ್ತು ಶಾಲೆಯನ್ನು ಸಮನ್ವಯಿಸಿ ಮಕ್ಕಳನ್ನು ಅವುಗಳ ಜೊತೆಗೆ ಬೆಸೆಯುತ್ತಾ ಪೋಷಿಸುವ ಕೆಲಸ ಮಾಡುತ್ತಿದೆ.

ಜೀವಿತಾವಧಿಯ ಕಲಿಕೆಗಾಗಿ ಒಂದು ಪಾರದರ್ಶಕ ಮಾರ್ಗವನ್ನು ರಚಿಸಲು ಪ್ರಯತ್ನಿಸುತ್ತಿದ್ದೇವೆ. ಕಲಾ ಸಂಯೋಜಿತ ಯೋಜನೆಗಳ ಮೂಲಕ ಶಿಕ್ಷಕರು ಕಲಾವಿದರು ಹಾಗೂ ವಿದ್ಯಾರ್ಥಿಗಳನ್ನು ಅನ್ವೇಷಣೆಯ ಪ್ರಯಾಣಕ್ಕೆ ಕರೆದೊಯ್ಯುತ್ತ ಕುತೂಹಲವನ್ನು ತುಂಬುತ್ತಿದ್ದಾರೆ. ನಮ್ಮ ಅಸ್ಮಿತೆಯ ಬಗ್ಗೆ ಅರಿಯುತ್ತಾ ಸಮಗ್ರ ಕಲಿಕೆಯನ್ನು ಅನುಭವಿಸುವ ನೂತನ ಸಾಧ್ಯತೆಗಳನ್ನು ಸೃಷ್ಟಿಸುತ್ತಾರೆ.

ನಮ್ಮ ಎಲ್ಲಾ ಸಹಭಾಗಿ ಶಿಕ್ಷಕರು ಮತ್ತು ಕಲಾವಿದರು ತಮ್ಮ ಯೋಜನೆಗಳನ್ನು ಅತ್ಯುತ್ತಮವಾಗಿಸುತ್ತಿದ್ದೀರಿ ಎಂದು ನಾನು ಬಯಸುತ್ತೇನೆ.

ಈ ಸಂಚಿಕೆಯ ಸಂಪಾದನೆ ಮತ್ತು ವಿನ್ಯಾಸದ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಜಹಾನ್ ಆರಾ ಮತ್ತು ಮೌನೇಶ್ ವಿಶ್ವಕರ್ಮ ರವರಿಗೆ ನಾನು ಕೃತಜ್ಞಳಾಗಿದ್ದೇನೆ. ಐ ಎಫ್ ಎ ತಂಡದಲ್ಲಿರುವ ಎಲ್ಲರಿಗೂ ಮತ್ತು ವಿಶೇಷವಾಗಿ ಕೃಷ್ಣ ಮತ್ತು ರಾಧಿಕಾರವರಿಗೂ ಶುಭಾಶಯಗಳನ್ನು ಕೋರುತ್ತೇನೆ.

ಅವಲೋಕನ

ಕೃಷ್ಣಮೂರ್ತಿ ಟಿ.ಎನ್.
ಕಾರ್ಯಕ್ರಮ ಅಧಿಕಾರಿ – ಕಲಾಶಿಕ್ಷಣ
ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್
ಬೆಂಗಳೂರು
krishna@indiaifa.org

ನಮ್ಮ 'ಹೆಜ್ಜೆಗಳ'ನ್ನು ಅರಿಯಲು ಈ ಪುಸ್ತಕವನ್ನು ತಮ್ಮ ಕೈಯಲ್ಲಿ ಹಿಡಿದ್ದೀರಿ. ಕಲಾ ಅಂತರ್ಗತ ಯೋಜನೆಗಳ ಹೂರಣ ಇದು. ಕುತೂಹಲದಿಂದ ಓದಿಸಿಕೊಂಡು ಹೋಗುವ ಇಲ್ಲಿನ ವಿದ್ಯಾರ್ಥಿ ಕೇಂದ್ರಿತ ಯೋಜನೆಗಳನ್ನು ತಿಳಿದು, ನಮ್ಮ ಪ್ರಯತ್ನಗಳನ್ನು ಪ್ರೋತ್ಸಾಹಿಸುವಿರಿ ಎಂಬ ವಿಶ್ವಾಸ ನಮಗಿದೆ. ಸುಸ್ಥಿರ ಆಶಯಗಳಿಗೆ ಒಂದು ಮಾದರಿ ಪ್ರಯೋಗಗಳು.

ಬರೋಬ್ಬರಿ 39 ಯೋಜನೆಗಳ ಸಂಕ್ಷಿಪ್ತ ಮಾಹಿತಿಯನ್ನು ಈ ಪುಸ್ತಕವು ಅನಾವರಣಗೊಳಿಸುತ್ತದೆ. ಹಾಗೆಂದೇ , ಭೌಗೋಳಿಕವಾಗಿಯೂ ಈ ಯೋಜನೆಯು ರಾಜ್ಯದ ಬಹುತೇಕ ಜಿಲ್ಲೆಗಳಿಗೆ ತಲುಪಿರುವುದು ತಮ್ಮ ಅರಿವಿಗೆ ಬರುತ್ತದೆ. ಭಾಷೆ, ಮಕ್ಕಳ ಸಾಹಿತ್ಯ, ನಾಟಕ, ಜಾನಪದ, ಸಮಾಜ ವಿಜ್ಞಾನ, ಗಣಿತ, ಸಂಗೀತವಲ್ಲದೆ, ಪತ್ರಿಕೋದ್ಯಮ, ಪ್ರಕಟಣೆ, ಸಂಶೋಧನೆ, ಕೈಮಗ್ಗ ಹೀಗೆ ಇನ್ನೂ ಹಲವಾರು ಬದುಕುಗಳನ್ನು ಕಟ್ಟಿಕೊಡುವ ಕಲಾ ಅಂತರ್ಗತ ಯೋಜನೆಗಳ ಫಲಿತಾಂಶಗಳನ್ನು ನಾವಿಲ್ಲಿ ನೋಡಬಹುದು.

ಈ ಶಾಲೆಗಳಲ್ಲಿ ನಡೆದಿರುವ ಯೋಜನೆಗಳ ಆಯ್ಕೆಯು ಅಷ್ಟು ಸುಲಭದ ಮಾತಲ್ಲ. ವರ್ಷದಿಂದ ವರ್ಷಕ್ಕೆ ವಿವಿಧ ಕಲಾಪ್ರಕಾರಗಳನ್ನು ಸಂಯೋಜಿತಗೊಳಿಸುವ ಪ್ರಸ್ತಾವನೆಗಳನ್ನು ಸಲ್ಲಿಸುವವರ ಸಂಖ್ಯೆ ಹೆಚ್ಚುತ್ತಿದೆ. ನಮ್ಮ ಸಂಪನ್ಮೂಲವನ್ನು ಆಧರಿಸಿ ಯೋಜನೆಗಳನ್ನು ಆಯ್ಕೆ ಮಾಡಿದ್ದೇವೆ.

ಕರೋನ ಸಂದರ್ಭದಲ್ಲಿ ಹಲವಾರು ಯೋಜನೆಗಳನ್ನು ರದ್ದುಪಡಿಸಬೇಕಾಗಿ ಬಂತು. ಪರಿಸರ, ನದಿ ಪಾತ್ರ, ಆಹಾರ ಸಂಸ್ಕೃತಿ, ಜೈವಿಕ ವ್ಯವಸ್ಥೆ, ಸ್ಥಳೀಯ ಇತಿಹಾಸ, ಸ್ವಾತಂತ್ರ್ಯ ಹೋರಾಟದಂತಹ ಬಹು ಮುಖ್ಯ ಅಂಶಗಳನ್ನು ಒಳಗೊಂಡಿದ್ದು ಆ ಯೋಜನೆಗಳು ನಡೆದಿದ್ದರೆ ಅದೆಷ್ಟೋ ವಿದ್ಯಾರ್ಥಿಗಳಿಗೆ ತಮ್ಮ ಸುತ್ತಲಿನ ವಿಸ್ಮಯ ಜಗತ್ತಿನ ಅನುಭವವಾಗುತ್ತಿತ್ತು.

ತಮಿಳುನಾಡುವಿನ ನಾಗಾಪಟ್ಟಮ್‌ನ ವಾನವಿಲ್ ಶಾಲೆ ಮತ್ತು ಮಧ್ಯಪ್ರದೇಶದ ಬಾಲಘಾಟ್‌ನ ಉತ್ಕರ್ಷ ವಿದ್ಯಾಲಯಗಳು ತಮ್ಮ ಪ್ರಯೋಗಗಳನ್ನು ಆ ವಿಷಮ ಸಂದರ್ಭದಲ್ಲೂ ಮುಂದುವರಿಸುವ ಸಾಹಸಕ್ಕೆ ಮುಂದಾಗಿದ್ದು, ಒಂದಷ್ಟು ಸಮಾಧಾನದ ಸಂಗತಿ.

ಪ್ರಯೋಗಗಳ ವಿವರಗಳನ್ನು ಸರಳವಾದ ಕನ್ನಡದಲ್ಲಿ ಅತ್ಯುತ್ತಮವಾಗಿ ಸಂಕಲಿಸಿ – ಸುಂದರವಾದ ವಿನ್ಯಾಸದೊಂದಿಗೆ ತಮಗೆ ತಲುಪಿಸಲು ಸಂಪಾದಕರಾಗಿ ಕಾರ್ಯನಿರ್ವಹಿಸಿದ ಶ್ರೀಮತಿ ಜಹಾನ್ ಆರಾ ಮತ್ತು ಶ್ರೀ ಮೌನೇಶ್ ವಿಶ್ವಕರ್ಮ ಅವರಿಗೆ ಅಭಿನಂದನೆಗಳು.

ಹಾಗೆಯೇ ಈ ಎಲ್ಲ ಪ್ರಯೋಗಗಳನ್ನು ಪ್ರೋತ್ಸಾಹಿಸುತ್ತ ತಂಡವನ್ನು ಮುನ್ನಡೆಸಿದ, ಹಿಂದಿನ ನಿರ್ದೇಶಕರಾದ ಅರುಂಧತಿ ಘೋಷ್ ಅವರಿಗೂ, ಸಹೋದ್ಯೋಗಿ ರಾಧಿಕಾ ಅವರಿಗೂ ಸಹ ಅಭಿಮಾನದ ನಮಸ್ಕಾರಗಳು.

ಅವಲೋಕನ



ರಾಧಿಕಾ ಭಾರದ್ವಾಜ್
ಕಾರ್ಯಕ್ರಮ ಅಧಿಕಾರಿ – ಕಲಾ ಶಿಕ್ಷಣ
ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್
ಬೆಂಗಳೂರು
radhika@indiaifa.org

ಹೆಜ್ಜೆಗಳು ಪುಸ್ತಕ, ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆಯ ದ್ವೈವಾರ್ಷಿಕ ಪ್ರಕಟಣೆ. ನಮ್ಮ ಸಂಸ್ಥೆಯ ಕಲಾ ಶಿಕ್ಷಣದ ಕಲಿ ಕಲಿಸು ಯೋಜನೆಯಡಿಯಲ್ಲಿ ನಡೆದ ಶಿಕ್ಷಕರ, ಕಲಾವಿದರ ಹಾಗೂ ಶಾಲೆಗಳ ಕಲಾ ಅಂತರ್ಗತ ವಿಚಾರಗಳನ್ನು ಹೊತ್ತ ಒಂದು ಪರಿಚಯಾತ್ಮಕ ಪುಸ್ತಕ. ಕರ್ನಾಟಕದ ಪ್ರಾದೇಶಿಕ ಇತಿಹಾಸ, ಸಾಹಿತ್ಯ, ಸಂಸ್ಕೃತಿ ಸಂಪನ್ಮೂಲಗಳನ್ನು ಆಧರಿಸಿ ಸಾಗಿದ ಈ ಯೋಜನೆಗಳು ಮಕ್ಕಳನ್ನು ಒಂದು ಹೊಸ ಕಲಾ ಜಗತ್ತಿಗೆ ಪರಿಚಯಿಸುವ ಪ್ರಾಮಾಣಿಕ ಪ್ರಯತ್ನ ಮಾಡಿವೆ. ಮನೆಯಿಂದ ಶಾಲೆಗೆ ಬರುವ ಮಗುವು ದಾರಿಯುದ್ದಕ್ಕೂ ನೋಡುವ, ಆಲಿಸುವ, ಗ್ರಹಿಸುವ ವಿಷಯಗಳನ್ನು ಕಲೆಯ ಮೂಲಕ ಅನುಭವಾತ್ಮಕ ಕಲಿಕೆಯನ್ನು ಸಾಧಿಸುವ ಸಣ್ಣ ವೇದಿಕೆಯಾಗಿದೆ. ರಾಮನಗರದ ಬೆಟ್ಟಗಳಿಂದ ಹಿಡಿದು ಬಾಗಲಕೋಟೆಯಲ್ಲಿ ಮುಳುಗಡೆಗೊಂಡ ಹಳ್ಳಿಗಳ ವರೆಗೂ ಕರ್ನಾಟಕದಾದ್ಯಂತ ಮಕ್ಕಳ ನಿರಂತರ ಅಧ್ಯಯನ ಈ 3 ವರ್ಷಗಳಲ್ಲಿ ನಡೆದು ಬಂದಿದೆ.

ಒಂದು ವರ್ಷದ ಯೋಜನೆಗಳು ಕರೋನ ಸಾಂಕ್ರಾಮಿಕದ ಸಂದರ್ಭದಲ್ಲಿ ಎರಡು ವರ್ಷಕ್ಕೂ ಹೆಚ್ಚು ಸಮಯ ಹಿಡಿದವು ಹಾಗು ಕೆಲವು ಯೋಜನೆಗಳನ್ನು ಅನಿವಾರ್ಯ ಕಾರಣದಿಂದ ರದ್ದುಗೊಳಿಸಬೇಕಾಯಿತು. ಆದರೂ ಮಕ್ಕಳ ಕಲಿಕಾ ಪ್ರಕ್ರಿಯೆಗಳು ವಿನೂತನವಾಗಿ ನಡೆಯಲು ಕಾರಣವಾದ ಎಲ್ಲಾ ಶಿಕ್ಷಕರಿಗೆ ಮತ್ತು ಕಲಾವಿದರಿಗೆ ಹೃತ್ಪೂರ್ವಕ ವಂದನೆಗಳು.

ಚಿತ್ರಕಲೆ, ದೃಶ್ಯಕಲೆ, ಪ್ರದರ್ಶನಾ ಕಲೆಗಳ ನೆಲೆಗಳಲ್ಲಿ ಈ ಯೋಜನೆಗಳು ಸ್ಥಳೀಯ ಕಥೆ, ಹಾಡುಗಳನ್ನು ಹುಡುಕುವ ಪ್ರಯತ್ನ ಮಾಡಿವೆ. ಇದರ ಫಲಿತಾಂಶಗಳು ಪ್ರಕಟಣೆ, ಪ್ರದರ್ಶನಗಳ ರೂಪದಲ್ಲಿ

ಹೊರಬಂದಿದೆ. ಕಲಿ ಕಲಿಸು ಆವರಣದ ಒಂದು ಭಾಗ ಕಲಾ ಅಂತರ್ಗತ ಯೋಜನೆಗಳಾದರೆ, ಇನ್ನೊಂದು ಭಾಗದಲ್ಲಿ ರಾಜ್ಯದ ಕೊಪ್ಪಳ, ದಕ್ಷಿಣ ಕನ್ನಡ, ಯಾದಗಿರಿ, ಶಿರಸಿ, ಬಾಗಲಕೋಟೆಯಲ್ಲಿ ಶಿಕ್ಷಕರ ಸನಿವಾಸ ತರಬೇತಿಗಳು ಈ 3 ವರ್ಷಗಳಲ್ಲಿ ಸಾಗಿವೆ ಹಾಗು ಉಡುಪಿ, ಚಾಮರಾಜನಗರ, ಚಿಕ್ಕಬಳ್ಳಾಪುರ, ಹಾವೇರಿ, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಲಾ ಯಾತ್ರೆ ಕಾರ್ಯಕ್ರಮಗಳು ನಡೆದಿವೆ. ಶಿಕ್ಷಕರ ಪಠ್ಯ ಬೋಧನಾ ಕ್ರಮಗಳಲ್ಲಿ ಕಲಾ ಅಂತರ್ಗತ ಸಾಧ್ಯತೆಗಳನ್ನು ಪರಿಚಯ ಮಾಡಿಕೊಟ್ಟ ನಮ್ಮ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಈ ಮೂಲಕ ಆತ್ಮೀಯ ಧನ್ಯವಾದಗಳು. ಸರಕಾರಿ ಶಾಲೆಯ ಸೊಗಡನ್ನು ನನಗೆ ಇನ್ನಷ್ಟು ಹತ್ತಿರದಿಂದ ಅವಲೋಕಿಸಲು ದಾರಿ ಮಾಡಿಕೊಟ್ಟ ಕೃಷ್ಣಮೂರ್ತಿಯವರಿಗೆ ಹಾಗೂ ಅರುಂಧತಿ ಅವರಿಗೂ ಪ್ರೀತಿಯ ಕೃತಜ್ಞತೆಗಳು ಹಾಗೂ ನಮ್ಮ ಸಂಸ್ಥೆಯ ಮುಂದಿನ ನಿರ್ದೇಶಕರಾದ ಮೇನಕಾ ಅವರಿಗೆ ಅಭಿನಂದನೆಗಳು. ರಾಜ್ಯ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ, ಮುಖ್ಯೋಪಾಧ್ಯಾಯರಿಗೆ ಮತ್ತು ಎಲ್ಲಾ ಶಿಕ್ಷಕರಿಗೆ ಧನ್ಯವಾದಗಳು.

ಸಂಪಾದಕೀಯ

ಜಹಾನ್ ಆರಾ
ಸಹಶಿಕ್ಷಕಿ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಎಮ್.ಗುಡದೂರ
jahanarahussain3@gmail.com
9844703797

ಮೌನೇಶ ವಿಶ್ವಕರ್ಮ
ಕಲಾವಿದರು, ಪತ್ರಕರ್ತರು
ಪುತ್ತೂರು
mouneshv82@gmail.com
9481017606

'ಕಲಿಸು' ಎನ್ನುವುದು ಕಲಿಯುವಿಕೆಯ ಮತ್ತೊಂದು ವಿಧಾನ. ಹಾಗಾಗಿಯೇ 'ಕಲಿ–ಕಲಿಸು' ಎನ್ನುವ ಪದ ಬಹಳ ಆಪ್ತವಾಗುವುದು. ಬೆಂಗಳೂರಿನಲ್ಲಿರುವ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆ ಈ ಶೀರ್ಷಿಕೆಯ ಮೂಲಕ ಕಳೆದ ಹಲವು ವರ್ಷಗಳಿಂದ ದೇಶದ ವಿವಿಧೆಡೆಗಳಲ್ಲಿ ನಡೆಸಿರುವ ಕಲಿಕಾ ಪ್ರಯೋಗಗಳು ಮಕ್ಕಳಲ್ಲಿ ಶೈಕ್ಷಣಿಕ ಉತ್ಸಾಹವನ್ನು ಇಮ್ಮಡಿಗೊಳಿಸಿದೆ.

ದಿನವೂ ನಮ್ಮ ಕಣ್ಣಿಗೆ ಕಾಣಿಸಿಗುವ ವಸ್ತು, ವಿಷಯ, ಪ್ರಾಕೃತಿಕ ವಿಚಾರಗಳು ಮಕ್ಕಳ ಕಲಿಕೆಯ ಮಾಧ್ಯಮವಾದರೆ..? ಅಲ್ಲಿ ಮಕ್ಕಳ ತೊಡಗಿಸುವಿಕೆಯ ಸಂಭ್ರಮವೇ ಬೇರೆ. ತರಗತಿ ವಾತಾವರಣದಲ್ಲಿ ಕಲೆ ಮತ್ತು ಕಲಿಕೆ ಪರಸ್ಪರ ಜೊತೆಯಾಗಿ ಸಾಗುವಂತಹ ತಾರ್ಕಿಕ ಪ್ರಕ್ರಿಯೆ ಬೋಧನೆ ಕಲಾ ಕೇಂದ್ರಿತವಾದಾಗ ಅಲ್ಲಿ ವಿವಿಧ ವಿಷಯಗಳಾದ ಭಾಷೆ, ಗಣಿತ, ವಿಜ್ಞಾನ, ಸಮಾಜವಿಜ್ಞಾನ ವಿಷಯಗಳ ಅಮೂರ್ತ ಪರಿಕಲ್ಪನೆಗಳ ನಡುವೆ ಸಂಬಂಧ ಮೂಡಿ ಕಲ್ಪನೆ ಮೂರ್ತ ರೂಪ ಮತ್ತು ಪ್ರಾಯೋಗಿಕ ಕಲಿಕೆಗೆ ಅವಕಾಶ ನೀಡಿದಂತಾಗುತ್ತದೆ. ಮಗುವು ಕಲಿಕಾ ಸಾಮರ್ಥ್ಯಗಳ ಸಾಧಿಸುವುದರ ಜೊತೆ ಜೀವನ ಮೌಲ್ಯವನ್ನು ಕಲಿತು ತನ್ನ ಸುತ್ತಮುತ್ತಲಿನ ಜನ ಸಂಸ್ಕೃತಿಯ ಬಗ್ಗೆ ಅರಿಯುವುದು ಮುಖ್ಯವಾಗಿದೆ. ಅಳಿವಿನಂಚಿನಲ್ಲಿ ಇರುವ ನಮ್ಮ ಜನಪದ ಕಲೆಗಳನ್ನು ಮತ್ತು ಸಂಸ್ಕೃತಿಯನ್ನು ಪಠ್ಯದೊಂದಿಗೆ ಸಮೀಕರಿಸಿ ಕಲಾ ಅಂತರ್ಗತ ಶಿಕ್ಷಣ ನೀಡುವುದರಲ್ಲಿ ಅನೇಕ ಶಿಕ್ಷಕರು, ಕಲಾವಿದರು ಪ್ರಯೋಗದ ಹಾದಿಯಲ್ಲಿ ನಡೆಸುತ್ತಿದ್ದಾರೆ. ಇಂತಹ ಪ್ರಯೋಗಶೀಲರಿಗೆ ಇಂಡಿಯಾ ಫೌಂಡೇಶನ್ ಫಾರ್ ಆರ್ಟ್ಸ್ ಸಂಸ್ಥೆಯು ಕಲಿ ಕಲಿಸು ಎಂಬ ಕಾರ್ಯಕ್ರಮದ ಮೂಲಕ ಪ್ರೋತ್ಸಾಹಿಸುತ್ತಿದೆ.

ತಮ್ಮ ಊರಿನ ಸುತ್ತಮುತ್ತಲ ಕಾಡುಮೇಡುಗಳಲ್ಲಿ ಸ್ವರಗಟ್ಟುವ ಪಕ್ಷಿಗಳ ಬಗ್ಗೆ ಬಣ್ಣ ಬಣ್ಣದ ಚಿಟ್ಟೆಗಳ ಬಗ್ಗೆ ಶಿಕ್ಷಕರು ಮಕ್ಕಳಿಗೆ ತಿಳಿಸುತ್ತಿದ್ದಾರೆ ಮತ್ತು ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಎಂಬ ಕಾದಂಬರಿಯನ್ನು ಆಧಾರವಾಗಿಟ್ಟುಕೊಂಡು ಹಿಂದಿನ ಇಂದಿನ ಜೀವನ ಶೈಲಿಯ ಅಧ್ಯಯನ ನಡೆಸುತ್ತಿದ್ದಾರೆ. ಕಾಫಿ ಬೀಜಗಳನ್ನು ಮಕ್ಕಳ ಮುಂದಿಟ್ಟು ವಲಸಿಗರ ಅಹವಾಲುಗಳನ್ನು ಆಲಿಸುವ ಶಿಕ್ಷಕರು ಒಂದು ಕಡೆಯಾದರೆ ಬಡವರ ರತ್ನ ಕಂಬಳಿಯಾದ ಕೌದಿಯನ್ನು ಬೋಧನಾ ಪರಿಕರವನ್ನಾಗಿಸಿಕೊಂಡು ಅಕ್ಷರದ ನೆರಳಿನಲ್ಲಿ ಬಾಂಧವ್ಯ ಬೆಸೆಯುವ ಕೆಲಸವನ್ನು ನಿರ್ವಹಿಸಿ ಮತ್ತೊಬ್ಬರು ಯಶಸ್ವಿಯಾಗಿದ್ದಾರೆ. ಹೋಳಿ ಹುಣ್ಣಿಮೆಯ ಜನಪದ ಕಲೆಯಾದ ರುದ್ಮಾಲ್ ಕಲೆಗೆ ಪಠ್ಯ ಸಂಯೋಜಿತವಾಗಿ ಹೆಜ್ಜೆ ಹಾಕುತ್ತಿದ್ದಾರೆ ಮತ್ತೊಂದು ಕಡೆ ಮೂಡಲ್‌ಪಾಯ ಯಕ್ಷಗಾನ ಪ್ರಕಾರವನ್ನು ಮತ್ತೆ ವೇದಿಕೆಯ ಮೇಲೆ ಮಕ್ಕಳೇ ತಂದು ನಿಲ್ಲಿಸಿದ್ದಾರೆ. ಶಿಕ್ಷಕ ತನ್ನ ಊರಿನ ಜನಪದ ಕಲಾವಿದರನ್ನು ಶಾಲೆಗೆ ತಂದು ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಜನಪದ ಹಾಡು ಪ್ರಾಮುಖ್ಯತೆ ತಿಳಿಸಿದ್ದಾರೆ. ಮಕ್ಕಳಲ್ಲಿ ಐತಿಹಾಸಿಕ ಆಧಾರಗಳ ಅವಶ್ಯಕತೆಯ ಜೊತೆ ಕಪ್ಪೆ ಅರಭಟ್ಟ ಯಾರು? ಎಂಬ ಕುತೂಹಲ ಪ್ರಶ್ನೆಗಳು ಐತಿಹಾಸಿಕ ಪರಂಪರೆಯ ಜ್ಞಾನ ಮತ್ತು ಶಾಸನಗಳ ಸಂರಕ್ಷಣೆಯ ಹೊಣೆಗಾರಿಕೆಯನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುತ್ತಿದ್ದಾರೆ. ಮಾತ್ರವಲ್ಲ ಬಿದಿರು, ಬೆಂಕಿಪೆಟ್ಟಿಗೆ, ನಾಣ್ಯಗಳು, ಬೆಟ್ಟಗುಡ್ಡಗಳು, ಆಗಿ ಹೋದ ಘಟನೆಗಳು ಇಲ್ಲಿ ಕಲಿಕೆಗೆ ಹೊಸ ರೂಪ ನೀಡುತ್ತಾ ಸಾಗುತ್ತಿದೆ. ಸಮುದಾಯದ ಅಸ್ಮಿತೆಯನ್ನು ಕಾಪಿಡುವ ಹೊಣೆಗಾರಿಕೆಯನ್ನು ಹೊತ್ತ ಕೆಲವು ಸಂಘ ಸಂಸ್ಥೆಗಳೂ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸುತ್ತಿವೆ.

ಈ ಎಲ್ಲಾ ಕಾರ್ಯ ಯೋಜನೆಗಳ ಅಧ್ಯಯನದೊಂದಿಗೆ ಈ "ಹೆಜ್ಜೆಗಳು" ಕೃತಿಯ ಸಂಪಾದಕೀಯ ಜವಬ್ದಾರಿಯನ್ನು ನಮಗೆ ನೀಡಿದ ಐಎಫ್ ಎ ಸಂಸ್ಥೆಗೆ ನಾವು ಸದಾ ಶರಣು...

ಹೆಜ್ಜೆಗಳು

ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಪ್ರಯೋಗಗಳು

2019–20 : 2022–23

ಕಲಿ-ಕಲಿಸು

ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಪ್ರಯೋಗಗಳು

2019–20

ರಂಗಭೂಮಿಯ ಮೂಲಕ ಇಂಗ್ಲಿಷ್ ಕಲಿಕೆ

ಸುನಿಲ ಕುಮಾರ್ ಎ.ಎಂ.
ಸಹಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಸುಳ್ಯ
9686795847

ಅಮರ ಸುಳ್ಯದ ದಂಗೆಯನ್ನು ಯಾರು ಮರೆಯಲು ಸಾಧ್ಯ ಹೇಳಿ? ಸ್ಥಳೀಯ ಇತಿಹಾಸವಾಗಿರುವ ಅಮರ ಸುಳ್ಯ ದಂಗೆಯನ್ನೇ ಯೋಜನೆಗೆ ಮುಖ್ಯವಾಗಿಸಿಕೊಂಡು ಆ ಮೂಲಕ ಮಕ್ಕಳು ಪಾತ್ರಧಾರಿಗಳಾಗಿ, ಪರಾಕಾಯ ಪ್ರವೇಶ ಮಾಡಲು ಪ್ರೇರಣೆ ನೀಡಿ ನಾಟಕದ ಮೂಲಕ ಮಕ್ಕಳಿಗೆ ಅರಿವಿಲ್ಲದಂತೆ ಇಂಗ್ಲಿಷ್ ಭಾಷೆ ಕಲಿಸುವುದರಲ್ಲಿ ಯಶಸ್ವಿಯಾದವರು ಸುಳ್ಯದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಸುನಿಲ ಕುಮಾರ್ ಎ.ಎಂ.

ಮಕ್ಕಳ ಬೌದ್ಧಿಕ ಮಟ್ಟ ಅಳೆಯಲು ಅಂಕಗಳೇ ಮಾನದಂಡ ಎಂಬ ನಿಲುವನ್ನು ಬದಲಾಯಿಸಿ 'ರಂಗಭೂಮಿಯ ಮೂಲಕ ಇಂಗ್ಲಿಷ್ ಕಲಿಕೆ' ಎಂಬ ಯೋಜನೆ ಹಾಕಿಕೊಂಡಿದ್ದರು. ಈ ಭಾಗದಲ್ಲಿ ಬಹು ಬಳಕೆ ಇಲ್ಲದ ಹಾಗೂ ಅಷ್ಟೊಂದು ಪರಿಚಯವೂ ಇಲ್ಲದ ಇಂಗ್ಲೀಷ್ ಭಾಷೆ ಎಂದರೆ ವಿದ್ಯಾರ್ಥಿಗಳಿಗೆ ಕಬ್ಬಿಣದ ಕಡಲೆಯೇ ಸರಿ.

ಇಂತಹ ಸಂದರ್ಭದಲ್ಲಿ ತಮ್ಮ ಶಾಲೆಯ ಐದನೇ ತರಗತಿಯ ಇಪ್ಪತ್ತೈದು ಮಕ್ಕಳಿಗೆ ಇಂಗ್ಲಿಷ್ ಪದಗಳು, ವಾಕ್ಯಗಳು, ಪದ್ಯಗಳು, ವ್ಯಾಕರಣ, ಭಾಷಾ ಪ್ರಯೋಗಗಳನ್ನು ಕಲಿಸುತ್ತಾ ಇಂಗ್ಲಿಷ್ ಭಾಷೆಯನ್ನು ಇನ್ಫಾರ್ಮಲ್ ವಿಧಾನದಲ್ಲಿ ಕಲಿಸಲು ರಂಗಭೂಮಿ ಆಯ್ಕೆ ಮಾಡಿಕೊಂಡಿದ್ದರು.

ಸ್ಥಳೀಯ ಇತಿಹಾಸದೊಂದಿಗೆ ಆಂಗ್ಲ ಭಾಷಾ ತಳುಕು ಹಾಕಿ ಮಕ್ಕಳಿಗೆ ಹೊಸ ರೀತಿಯಲ್ಲಿ ರಂಜನೆ ನೀಡಿದರು, ಸ್ಥಳೀಯ ಇತಿಹಾಸದ ಬಗ್ಗೆ ಕೇಳಿ ತಿಳಿದುಕೊಂಡರು. ಅಮರ ದಂಗೆಯ ಕುರುಹುಗಳನ್ನು ಶಾಸನಗಳಿಂದ, ಬರಹ ಸಾಹಿತ್ಯದಿಂದ, ಹಿರಿಯರಿಂದ ಸಂಗ್ರಹಿಸಿ ಮಕ್ಕಳ ಮೂಲಕ ರಂಗವೇದಿಕೆಗೆ ತಂದಿದ್ದಾರೆ. ಈಗಾಗಲೇ ಇಂಗ್ಲಿಷ್ ಭಾಷೆಯ ಹಲವು ನಾಟಕಗಳು ಪ್ರದರ್ಶಿಸಿದ್ದಾರೆ.

"ವಿದ್ಯಾರ್ಥಿಗಳು ಕಲಿಕೆಯಲ್ಲಿ ತೊಡಗಿಸಿಕೊಳ್ಳುವಿಕೆಯ ಬಗ್ಗೆ ನನಗಿದ್ದ ಜ್ಞಾನವನ್ನು ಬಹು ವಿಸ್ತಾರವಾಗಿ ಹರಡಿಕೊಳ್ಳಲು ಈ ಯೋಜನೆ ನನಗೆ ಸಹಕಾರಿಯಾಯಿತು. ಅಲ್ಲದೆ ಕಲೆಯು ವಿದ್ಯಾರ್ಥಿಗಳಲ್ಲಿ ಉಂಟುಮಾಡುವ ಕೌತುಕ, ಆಸಕ್ತಿ ಹಾಗೂ ಸಹಕಾರ ಮನೋಭಾವ ನನಗೆ ಮುಂದಿನ ವೃತ್ತಿ ಜೀವನದುದ್ದಕ್ಕೂ ದಾರಿದೀಪವಾಗಿದೆ".

– ಸುನಿಲ ಕುಮಾರ್ ಎ.ಎಂ.

“ನನ್ನೂರ ಕೌದಿ”

ಜಹಾನ್ ಆರಾ
ಸಹಶಿಕ್ಷಕಿ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಎಮ್.ಗುಡದೂರು
9844703797

ಕಲಿಕೆಗೆ ಕೌದಿಯನ್ನೇ ಮೂಲವಾಗಿಟ್ಟುಕೊಂಡು ಆ ಮೂಲಕ ಕೌದಿಯ ಕಥೆ, ಹಾಡು, ಜನಪದಿಗರ ನಡುವಿನ ಬಾಂಧವ್ಯ ಬೆಸೆಯುವುದರ ಮೂಲಕ, ಕಲಿಕೆಯಲ್ಲಿ ಕೌದಿಯನ್ನು ಸಮ್ಮಿಲನ ಮಾಡಿ ‘ನನ್ನೂರ ಕೌದಿ’ ಎಂಬ ಶೀರ್ಷಿಕೆಯಡಿ ಯೋಜನೆ ಹಾಕಿಕೊಂಡು ಮಕ್ಕಳಿಂದ ಅಕ್ಷರ ಕೌದಿಗೆ ಹೊಲಿಗೆ ಹಾಕಿಸುತ್ತಿರುವವರು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಎಂ.ಗುಡದೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಜಹಾನ್ ಆರಾ ಅವರು.

ಈ ಗ್ರಾಮದಲ್ಲಿನ ಬಹುತೇಕ ಕೌದಿ ತಯಾರಿಸುವ ಕುಟುಂಬಗಳಿವೆ. ಅಲ್ಲದೆ ಮಕ್ಕಳಿಗೆ ಕೌದಿಯ ಸಮಗ್ರ ಪರಿಚಯವೂ ಇದೆ.

“ಕೌದಿಯ ಬಗ್ಗೆ ವಿದಾರ್ಥಿಗಳಿಗೆ ಮಾಹಿತಿ ನೀಡಿ ಅದೇ ವಿಚಾರಕ್ಕೆ ಸಂಬಂಧಿಸಿದಂತೆ ಕಥೆ ಕವನಗಳನ್ನು ಮಕ್ಕಳಿಂದ ಬರೆಸಿ, ಪ್ರಕಟಿಸಿ ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳಲ್ಲಿಯೂ ಕಲಿಕಾ ಸಾಮರ್ಥ್ಯ ಹೆಚ್ಚಿಸುವುದು ಯೋಜನೆಯ ಉದ್ದೇಶವಾಗಿದೆ.
– ಜಹಾನ್ ಆರಾ,

ಈ ಕಾರಣವಾಗಿ ಕೌದಿಯ ಮೂಲಕ ಮಕ್ಕಳಲ್ಲಿ ಅಕ್ಷರ ಬಿತ್ತನೆ ಮಾಡಿದ್ದಾರೆ. ಈ ಯೋಜನೆಯಲ್ಲಿ ಆರು, ಏಳು ಮತ್ತು ಎಂಟನೇ ತರಗತಿಯ ಮಕ್ಕಳನ್ನು ಆಯ್ಕೆ ಮಾಡಿಕೊಂಡಿದ್ದರು. ಜಾನಪದ, ಧಾರ್ಮಿಕ ಮತ್ತು ಭಾವನಾತ್ಮಕ ಸಂಬಂಧ ಹೊಂದಿರುವ ಕೌದಿಯ ರಚನೆ ಮತ್ತು ಮಾನವ ಸಂಬಂಧದ ಬಗ್ಗೆ ತಿಳಿಸಿದ್ದಾರೆ. ಕೌದಿಯ ಪ್ರತಿಕೃತಿಗಳನ್ನು ತಯಾರಿಸುತ್ತಾ, ಕಲಾವಿದರನ್ನು ಸಂದರ್ಶಿಸುತ್ತಾ, ಕತೆ ಕವನ ಓದುತ್ತಾ, ಬರೆಯುತ್ತ, ಓದಿನ ಮೇಲೆ ಆಸಕ್ತಿ ಹೆಚ್ಚಿಸಿದ್ದಾರೆ. ವಿದ್ಯಾರ್ಥಿಗಳು ಕೌದಿಯ ಚೌಕಗಳನ್ನು ಬಳಸಿಕೊಂಡು ಸಾಹಿತ್ಯ, ಸರಳ ಗಣಿತ ಕಲಿಸಿದ್ದಾರೆ. ಶೈಕ್ಷಣಿಕವಾಗಿ ಹಿಂದುಳಿದ ಈ ಮಕ್ಕಳ ಕಲಿಕೆಯಲ್ಲಿ ಸಕಾರಾತ್ಮಕ ಪರಿಣಾಮ ಬೀರಿದೆ. ಕೌದಿಯ ಬಗ್ಗೆ ಮಕ್ಕಳು ಆಸಕ್ತಿ ತೋರುತ್ತಿರುವುದು ಹಳ್ಳಿಗರಿಗೂ ಹೆಮ್ಮೆಯಾಗಿದೆ.

ವಿದ್ಯಾರ್ಥಿಗಳು ಕೌದಿಯ ಹಿಂದಿರುವ ಸಾಹಿತ್ಯವನ್ನು ಸಂಗ್ರಹಿಸುವುದಕ್ಕಾಗಿ ಮಕ್ಕಳ ಸಾಹಿತ್ಯವನ್ನು ಓದುವ ಮೂಲಕವಾಗಿ ಅವರಲ್ಲೀಗ ಓದು ದೃಢೀಕರಣಗೊಳ್ಳುತ್ತಿತ್ತು. 'ನನ್ನೂರ ಕೌದಿ' ಎಂಬ ಒಂದು ಕೃತಿಯನ್ನು ಸಹ ಪ್ರಕಟಿಸಿದ್ದಾರೆ. ಮಕ್ಕಳ ಚಟುವಟಿಕೆಗಳನ್ನು ಗ್ರಾಮಸ್ಥರು, ಪೋಷಕರು ಮೆಚ್ಚಿಕೊಂಡಿದ್ದಾರೆ.

ಛಂದಸ್ಸು ಕಲಿಕೆಗೆ ಗಂಭೀರತೆ ಯಾಕೆ?

ರಾಣಿ ಮಂಜುಳಾದೇವಿ
ಸಹಶಿಕ್ಷಕರು
ಸರ್ಕಾರಿ ಹಿರಿಯ
ಪ್ರಾಥಮಿಕ ಶಾಲೆ
ಪ್ರೊ.ಬಿ. ಕೃಷ್ಣಪ್ಪ ಬಡಾವಣೆ
ಚಿಕ್ಕಮಗಳೂರು
7349422895

ಮಕ್ಕಳಿಗೆ ಕಬ್ಬಿಣದ ಕಡಲೆ ಎನಿಸುವಂತಹ ಕಠಿಣ ವಿಷಯಗಳನ್ನು ಸರಳವಾಗಿ ತಿಳಿಸುವ ಉದ್ದೇಶದಿಂದ ಅದರಲ್ಲೂ ಭಾಮಿನಿ, ವಾರ್ಧಕ, ಕುಸುಮ, ಶರ... ಮುಂತಾದ ಷಟ್ಪದಿ ಪ್ರಕಾರಗಳನ್ನು ತರಗತಿಯ ಕೋಣೆಯಲ್ಲಿ ಕಲಿಸುವುದರ ಮೂಲಕ ಚಿಕ್ಕಮಗಳೂರು ತಾಲೂಕಿನ ಪ್ರೊ.ಬಿ. ಕೃಷ್ಣಪ್ಪ ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ರಾಣಿ ಮಂಜುಳಾದೇವಿ ಯೋಜನೆ ಹಾಕಿಕೊಂಡಿದ್ದಾರೆ.

ಛಂದಸ್ಸಿನ ಪ್ರಕಾರಗಳನ್ನು ಶಾಸ್ತ್ರೀಯವಾಗಿ ಮಕ್ಕಳ ಮನಸ್ಸಿಗೆ ಹಿತವಾಗುವಂತೆ ಬೋಧಿಸಿದರೆ ಕಲಿಕೆ ಸಾರ್ಥಕವಾಗುತ್ತದೆ ಎಂಬುದು ಅವರ ಬಲವಾದ ನಂಬಿಕೆಯಾಗಿಯಾಗಿದೆ.

ಬಲವಂತದ ಕಲಿಕೆಯ ಬದಲು ಮಕ್ಕಳಿಗೆ ಅದು ಚಟುವಟಿಕೆಯಾಗಿ, ಆಟವು ಆಗಿ ಕೊನೆಗೆ ಪಾಠವೂ ಆಗುವಂತಹ ಹತ್ತು ಹಲವಾರು ಚಟುವಟಿಕೆಗಳನ್ನು ಹಾಕಿಕೊಂಡರು.

ಕನ್ನಡದ 'ಜೈಮಿನಿ ಭಾರತ'ದ ರಚನಾಕಾರ ಕವಿ ಲಕ್ಷ್ಮೀಶ ಅವರು ಚಿಕ್ಕಮಗಳೂರು ಜಿಲ್ಲೆಯವರಾಗಿದ್ದು, ಆತನ ವಾರ್ಧಕ ಷಟ್ಪದಿಯ ಅಧ್ಯಯನ ಈ ಪ್ರಯೋಗದ ಮುಖ್ಯ ಕೇಂದ್ರವಾಗಿತ್ತು. ಇಂತಹ ಪರಿಸರದಲ್ಲಿ ಮಕ್ಕಳಿಗೆ 'ಜೈಮಿನಿ ಭಾರತ'ದ ರಚನಾಕಾರ ಕವಿ

ಲಕ್ಷ್ಮೀಶನ ಪರಿಚಯ ಮಾಡಿಕೊಡುವುದರ ಜೊತೆಗೆ ಮಕ್ಕಳಿಗೆ ಲವಲವಿಕೆಯಿಂದ ಛಂದಸ್ಸು ಕಲಿಸುವ ಗುರಿ ಅವರದಾಗಿತ್ತು.

ಐದನೇ, ಆರನೇ, ಏಳನೇ ತರಗತಿಯ ಹಳೆಗನ್ನಡ ಪದ್ಯಗಳನ್ನು ಆಯ್ದು ಮಕ್ಕಳಿಗೆ ಗಮಕ, ಗಾಯನ, ವಿಶೇಷ ಉಪನ್ಯಾಸಗಳು, ತಾಳೆಗರಿಯ ಅಧ್ಯಯನ ಹೀಗೆ ಅನೇಕ ಭಾಗಗಳನ್ನು ಈ ಯೋಜನೆಯ ಫಲವತ್ತತೆಗೆ ಬಳಸಿ ಕಲಿಸುತ್ತಿದ್ದರು.

ವಿದ್ಯಾರ್ಥಿಗಳು ಈ ಪ್ರಕಾರದ ಯೋಜನೆ ಮೇಲೆಯೆ ಸಾಹಿತ್ಯ ರಚನೆಗೆ ಮುಂದಾದರು, ವಿಷಯಗಳ ಹುಡುಕಾಟ, ಹಿರಿಯರೊಂದಿಗೆ ಚರ್ಚೆ, ಸ್ಥಳ ಭೇಟಿಯಂತಹ ಚಟುವಟಿಕೆಗಳನ್ನು ನಡೆಸಲಿದ್ದರು. ತಾವು ತಂದಿದ್ದ ವಿಷಯಗಳ ದಾಖಲೀಕರಣಕ್ಕೆ ಮುಂದಾಗುವ ಉದ್ದೇಶ ಹೊಂದಿದ್ದರು. ಆದರೆ ಕೋವಿಡ್ ಕಾರಣದಿಂದಾಗಿ ಈ ಯೋಜನೆ ಸ್ಥಗಿತವಾಯಿತು ಎಂಬುದು ಮಾತ್ರ ವಿಷಾದನೀಯ.

ನಮ್ಮನೆ ಭೂತ

ಮಮತಾ ಹೆಚ್ ಜೆ.
ಕರ್ನಾಟಕ ಪಬ್ಲಿಕ್ ಸ್ಕೂಲ್
ಬೆಳ್ಳಾರೆ
ಸುಳ್ಯ ತಾಲೂಕು
ದಕ್ಷಿಣ ಕನ್ನಡ ಜಿಲ್ಲೆ
9480470675

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂತಾರಾಧನೆ ಜನಪ್ರಿಯ ಜನಪದ ಆಚರಣೆಯಾಗಿದೆ. ಭೂತಾರಾಧನೆಯ ಮನೆತನಗಳಿಂದ ಬಂದಿರುವ ಮಕ್ಕಳಿಗೆ ಅವರವರ ಮನೆಯ ಭೂತದ ಇತಿಹಾಸ ಮತ್ತು ಸಂಸ್ಕೃತಿ ತಿಳಿಸುತ್ತಾ ಮತ್ತು ಅವರಿಂದಲೂ ತಿಳಿಯುತ್ತಾ ಭೂತಾರಾಧನೆಯ ಸಂಸ್ಕೃತಿಯನ್ನು ಕಲಾ ಸಂಯೋಜಿತ ಕಲಿಕೆಯ ಅಧ್ಯಯನ ಮಾಡಲು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಕರ್ನಾಟಕ ಪಬ್ಲಿಕ್ ಸ್ಕೂಲ್ ಶಿಕ್ಷಕಿ ಶ್ರೀಮತಿ ಮಮತಾ ಹೆಚ್.ಜೆ ಯೋಜನೆ ಹಾಕಿಕೊಂಡಿದ್ದರು.

ಭೂತಾರಾಧನೆ ಎಂದರೆ, ದೈವವನ್ನು ಆಹ್ವಾನಿಸಿಕೊಂಡು ಅದರೊಂದಿಗೆ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು, ಹಬ್ಬ ಮಾಡುವುದು ಇತ್ಯಾದಿ ದೈವಿಕ ನಂಬಿಕೆ. ಈ ಪ್ರದೇಶದಲ್ಲಿ ಐದು ನೂರಕ್ಕೂ ಹೆಚ್ಚು ಭೂತಗಳು ಆರಾಧನೆಯಲ್ಲಿವೆ. ಭೂತಾರಾಧನೆಯ ಸಮಯದಲ್ಲಿ ನಿರ್ದಿಷ್ಟ ಕುಟುಂಬದ ಮಕ್ಕಳು ನಿರಂತರವಾಗಿ ಗೈರುಹಾಜರಿಯಾಗುತ್ತಾರೆ. ಏಕೆಂದರೆ ತಂದೆ ಕೋಲಾ ಕಟ್ಟಿದರೆ, ಮಕ್ಕಳು ಇತರೆ ಕೆಲಸಗಳಿಗೆ ಸಹಾಯಕರಾಗಿ ಹೋಗುತ್ತಿರುತ್ತಾರೆ.

ತಾಯಿ ಪರ್ದಾನ ಹೇಳುವುದಕ್ಕೆ ಸಿದ್ಧವಾಗಿರುತ್ತಾಳೆ. ಹೀಗೆ ಪೂರ್ತಿ ಕುಟುಂಬ ಒಂದು ಆರಾಧನೆಯಲ್ಲಿ ಭಾಗವಹಿಸುತ್ತಾರೆ.

ಶಾಲೆಯ ಎಂಟನೇ ತರಗತಿಯ ನಲವತ್ತು ಮಕ್ಕಳೊಂದಿಗೆ ತಮ್ಮ ಸಮುದಾಯದ ಆರಾಧನಾ ಕಲೆಯನ್ನು ಸಾಮಾಜಿಕ ಬದ್ಧತೆಯ ನೆಲೆಗಳಲ್ಲಿ ಹುಡುಕುವ ಪ್ರಯತ್ನ ಇವರದಾಗಿತ್ತು. ಈ ಯೋಜನೆಯಲ್ಲಿ ಧಾರ್ಮಿಕ ಸಹಿಷ್ಣತೆಯನ್ನು ಮಕ್ಕಳಿಗೆ ಸಮೀಕರಿಸಿ ತಿಳಿಸಲಾಗಿತ್ತು. ಕರಕುಶಲತೆ ಕೂಡ ಈ ಯೋಜನೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿತ್ತು. 'ಅಣಿ'ಯನ್ನು (ಭೂತಾರಾಧನೆಯ ವೇಷ) ಸಂಪೂರ್ಣ ತೆಂಗಿನಗರಿಗಳಿಂದ ತಯಾರಿಸಲಾಗುತ್ತದೆ. ಈ ಕಲೆಯನ್ನು ಮಕ್ಕಳಿಗೆ ಕಲಿಸುವುದು, ಪಾರ್ದಾನವನ್ನು ಅಧ್ಯಯನ ಮಾಡುವುದು, ಇದರಿಂದ ಭೂತಾರಾಧನೆ ಇತಿಹಾಸ ತಿಳಿಯಲು ಸಾಧ್ಯವಾಗುತ್ತಿತ್ತು. "ತಮ್ಮ ಭೂತದ ಇತಿಹಾಸ ತಿಳಿಯದೆ ಮಾಡುವ ಆಚರಣೆಯ ಬದಲು ಅರಿತು ಮಾಡುವುದರಲ್ಲಿ ಸಾರ್ಥಕತೆ ಇರುತ್ತದೆ" ಎಂದು ಮಮತಾ ಹೇಳುತ್ತಾರೆ. ಆದರೆ ಕೋರೋನಾದಿಂದಾಗಿ ಯೋಜನೆ ರದ್ದಾಯಿತು.

"ತಮ್ಮ ಭೂತದ ಇತಿಹಾಸ ತಿಳಿಯದೆ ಮಾಡುವ ಆಚರಣೆಯ ಬದಲು ಅರಿತು ಮಾಡುವುದರಲ್ಲಿ ಸಾರ್ಥಕತೆ ಇರುತ್ತದೆ"
– ಮಮತಾ

ಕುಮಾರಧಾರಾ ನದಿ ಅಧ್ಯಯನ

ತಾರಾನಾಥ್.ಪಿ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬೆಳಂದೂರು
ಪುತ್ತೂರು ತಾ॥
ದಕ್ಷಿಣ ಕನ್ನಡ ಜಿ॥
9449893763

'ಕುಮಾರಧಾರಾ ನದಿ' ಎಂಬ ಯೋಜನೆ ಹಾಕಿಕೊಂಡು ಆ ಮೂಲಕ ಮಕ್ಕಳಿಗೆ ಭೂಗೋಳದಲ್ಲಿ ಬರುವ ನದಿಗಳ ಅಧ್ಯಯನ ಮಾಡಲು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಬೆಳಂದೂರು ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಹೊರಟಿದ್ದರು. ಶಿಕ್ಷಕರಾದ ತಾರಾನಾಥ್.ಪಿ ವಿದ್ಯಾರ್ಥಿಗಳಿಗೆ ತಮ್ಮ ಸ್ಥಳೀಯ ಪರಿಸರವನ್ನು ಅನ್ವೇಷಿಸಲು ಮತ್ತು ಸ್ಥಳೀಯ ನದಿ ಕುಮಾರಧಾರ ಬಗ್ಗೆ ಅರಿವು ಮೂಡಿಸಲು ಹಾಗೂ ಜಾಗತಿಕ ಸಮಸ್ಯೆಗಳೊಂದಿಗೆ ಚರ್ಚೆಗಳಲ್ಲಿ ತೊಡಗಿಸಿಕೊಳ್ಳಲು ಮಕ್ಕಳಿಗೆ ಪ್ರೇರಣೆ ನೀಡುತ್ತಿದ್ದರು.

ಇಲ್ಲಿನ ಮಕ್ಕಳು ಕುಮಾರಧಾರ ನದಿಯ ತೀರದವರಲ್ಲವಾದರೂ ನದಿ ಸಮೀಪದ ಗ್ರಾಮದಲ್ಲಿ ವಾಸವಾಗಿದ್ದಾರೆ. ಈ ಮಕ್ಕಳಿಗೆ ನದಿಯ ಬಗ್ಗೆ ಅನೇಕ ಕುತೂಹಲಗಳಿದ್ದು, ನದಿಯ ದಂಡೆಯಲ್ಲಿಯೇ ಮಕ್ಕಳು ಹರಿಯುವ ನದಿಯನ್ನು ನೋಡುತ್ತ ಪರಿಸರ ಅಧ್ಯಾಯ ಕಲಿಸಲಿದ್ದರು. ಈ ಶಾಲೆಯ ಏಳನೇ ತರಗತಿಯ ಮಕ್ಕಳು ನದಿಯ ಚಲನೆಯನ್ನು ಆಟದ ಮೈದಾನದಲ್ಲಿ ಚಿತ್ರಿಸಿ ಬಣ್ಣ ಹಚ್ಚುತ್ತಿದ್ದರು. ಹಿರಿಯರ ಸಹಾಯದಿಂದ ಮಕ್ಕಳು ನದಿಯ ವೇಗ ಆಳ, ಅಗಲ, ವೈಶಿಷ್ಟ್ಯತೆ, ನದಿಯ ಮೇಲಿರುವ ಕಥೆಗಳನ್ನು ಅರಿಯುತ್ತಿದ್ದರು, ವಾತಾವರಣದ ತಾಪಮಾನ, ತೇವಾಂಶಗಳನ್ನು ತಿಳಿದುಕೊಳ್ಳುತ್ತಿದ್ದರು.

ಹರಿಯುವ ನದಿ, ನದಿಯ ದಡದಲ್ಲಿ ನಡೆಯುವ ಜನರ ಚಟುವಟಿಕೆ, ಕುಡಿಯುವ ನೀರಿಗಾಗಿ ಬರುವ ಪ್ರಾಣಿಗಳು, ತೆರೆಯ ಮೂಲಕ ಹರಿದು ಬರುವ ಮೀನಿಗಾಗಿ ದಡದಲ್ಲಿ ಕುಳಿತ ಬಕಪಕ್ಷಿಗಳು, ಗುಂಪುಗುಂಪಾಗಿ ಹಾರಿ ಬರುವ ಕಾಬಕ್ಕಿಗಳು ಇಂತಹ ಪರಿಸರ ಮಕ್ಕಳಿಗೆ ಅವರಿಗರಿವಿಲ್ಲದಂತೆ ಪರಿಸರ ಪಾಠ ಮಾಡುತ್ತಿದ್ದವು.

ಆಧುನಿಕತೆಯ ಛಾಪಿನಿಂದ ಜಲ ಮತ್ತು ಸಸ್ಯ ಜೀವಿಗಳಿಗೆ ಆಗುವ ಹಾನಿ ಮತ್ತು ಅವುಗಳ ರಕ್ಷಣೆಯ ಬಗ್ಗೆ ಚರ್ಚಿಸುತ್ತಿದ್ದರು. ಇಲ್ಲಿ ವಿದ್ಯಾರ್ಥಿಗಳು 7ನೇ ತರಗತಿಯಲ್ಲಿಯೇ ತಜ್ಞರಂತೆ ನದಿ, ಸ್ಥಳೀಯ ಸಂಸ್ಕೃತಿಯ ಅಧ್ಯಯನ ಮಾಡಲು ಸಿದ್ಧರಾಗಿದ್ದರು. ದುರಾದೃಷ್ಟವೆಂದರೆ ಈ ಯೋಜನೆ ಕರೋನ ಮಹಾಮಾರಿಯ ಜಾಲಕ್ಕೆ ಸಿಲುಕಿ ರದ್ದಾಯಿತು.

ಹರಪನ ಹಳ್ಳಿ ಪಾಳೇಗಾರರು



ಸಂದೇಶ್ ಡಿ ಪಿ
ರಂಗಭೂಮಿ ಕಲಾವಿದರು
9972116295

ಇತಿಹಾಸದ ಕೇವಲ ಗತಕಾಲದ ಕತೆಯಲ್ಲ, ಕಲಿಯುವ ಹಂಬಲವಿರುವವರಿಗೆ ಬದುಕಿನ ಪಾಠವೂ ಹೌದು ಎನ್ನುವುದಕ್ಕೆ "ಹರಪನ ಹಳ್ಳಿ ಪಾಳೇಗಾರರು" ಯೋಜನೆ ಸ್ಪಷ್ಟ ನಿದರ್ಶನ.

ಮೂಲತಃ ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲೂಕು ನಿವಾಸಿಯಾಗಿರುವ ಸಂದೇಶ್ ಡಿಪಿ ಯವರು ಕಲಾಕುಟುಂಬದ ಹಿನ್ನೆಲೆಯುಳ್ಳವರು. ಹರಪನ ಹಳ್ಳಿಯ ಉಪ್ಪಾರಗೇರಿ ಸರ್ಕಾರಿ ಶಾಲೆಯ ಮಕ್ಕಳಿಗಾಗಿ ದೊಡ್ಡಾಟ ಕಲೆಯ ಮೂಲಕ ಇತಿಹಾಸವನ್ನು ಪರಿಚಯಿಸಲು ಮುಂದಾಗಿದ್ದಾರೆ. ರಂಗಾಟದ ಮುಖೇನ ಮಕ್ಕಳ ಜೊತೆಗೆ ಆರಂಭಿಕ ಸಂವಹನ ನಡೆಸಿದ ಇವರು ಐದು ಮತ್ತು ಆರನೇ ತರಗತಿಯ 25 ಮಕ್ಕಳನ್ನು ತಂಡವಾಗಿ ಕಟ್ಟಿಕೊಂಡು, ಪಠ್ಯಾಧಾರಿತ ನೀರು ಎಂಬ ಪಾಠವನ್ನು ದೊಡ್ಡಾಟ ಕಲೆಯ ಮೂಲಕ ಮನವರಿಕೆ ಮಾಡುವುದರ ಜೊತೆಗೆ, ಹರಪನ ಹಳ್ಳಿ ಪಾಳೇಗಾರರ ನೀರಾವರಿ ಯೋಜನೆಗಳನ್ನು ಹೇಳುತ್ತಾ ನೀರುಳಿತಾಯದ ಪಾಠ ಬೋಧಿಸುತ್ತಾ ವಿವಿಧ ತಂತ್ರಗಳ ಮುಖೇನ ಚಟುವಟಿಕೆಗಳನ್ನು ನಡೆಸಿದ್ದಾರೆ.

ಹರಪನ ಹಳ್ಳಿ ಚರಿತ್ರೆಯ ಪುಸ್ತಕದ ನೆರವಿನಿಂದ ಸ್ಥಳೀಯ ನಾಯಕ ರಾಜ ಸೋಮಶೇಖರ ಪಾಳೆಗಾರರ ಇತಿಹಾಸವನ್ನು ಮಕ್ಕಳಿಗೆ ತಿಳಿಸುವುದರ ಜೊತೆಗೆ ರಾಜಸೋಮಶೇಖರ ನಾಯಕರು ಎಲ್ಲಾ ವರ್ಗದ ಜನರಿಗೆ ಬೇಸಿಗೆಯಲ್ಲಿ ನೀರಿನ ಕೊರತೆ ಬಾರದಂತೆ ಊರಿನ ನಾಲ್ಕು ಮೂಲೆಗಳಲ್ಲಿ ದೊಡ್ಡ ದೊಡ್ಡ ಬಾವಿಗಳನ್ನು ನಿರ್ಮಿಸಿದ್ದು, ಇದು ಈ ಕಾಲಕ್ಕೆ ಯಾಕೆ ಪ್ರಸ್ತುತ ಎನ್ನುವುದನ್ನು ಮನವರಿಕೆ ಮಾಡುತ್ತಾ, ಈಗ ಅನುಷ್ಠಾನದಲ್ಲಿರುವ ಯೋಜನೆಗಳ ಜೊತೆ ತುಲನೆ ಮಾಡಲಾಯಿತು.

ಆದರೆ ಕೋವಿಡ್ ಸಮಸ್ಯೆಯಿಂದ ನಿರೀಕ್ಷಿತ ರೀತಿಯಲ್ಲಿ ತರಗತಿಗಳು ನಡೆಸಲಾಗಲಿಲ್ಲ ಎನ್ನುವ ಕೊರಗು ಇವರಲ್ಲಿದ್ದರೂ, ಮಕ್ಕಳ ಮನಸ್ಸನ್ನು ಗೆಲ್ಲುವುದರ ಜೊತೆಗೆ ಕಲಿಕೆಯ ಬಹುಮುಖಿ ಸಾಧ್ಯತೆಗಳನ್ನು ಮನನ ಮಾಡಿಕೊಂಡ ತೃಪ್ತಿ ಇವರಲ್ಲಿದೆ.

ಬಳಸಿಕೊಂಡ ರಂಗಭೂಮಿಯ ಹಲವು ತಂತ್ರಗಳ ಜೊತೆಗೆ ಆಟದ ಮೂಲಕ ಕಲಿಕೆಯ ನನ್ನ ಯೋಜನೆ ಮಕ್ಕಳ ತೊಡಗಿಸಿಕೊಳ್ಳುವಿಕೆಗೆ ಮತ್ತಷ್ಟು ಹುರುಪುತುಂಬಿತ್ತು.
– ಸಂದೇಶ್ ಡಿ ಪಿ

ಆಹಾರ ಸಂಸ್ಕೃತಿ



ಕೃಷ್ಣಮೂರ್ತಿ ಗಾಂವ್ಕರ್
ಕಲಾವಿದರು
8762019237

ತಿನ್ನುವ ಆಹಾರ ತಯಾರಿಕೆಯಲ್ಲಿಯೂ ಪ್ರಾದೇಶಿಕತೆಯ ಸೊಬಗು ಅಡಗಿದೆ ಎನ್ನುವುದನ್ನು ಮಕ್ಕಳಿಗೆ ಮನದಟ್ಟು ಮಾಡಿದ ಈ ಯೋಜನೆ ಆಹಾರ ಸಂಸ್ಕೃತಿ.

ರಂಗಭೂಮಿ ಕಾರ್ಯಕರ್ತರಾಗಿ ಗುರುತಿಸಿಕೊಂಡಿರುವ ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲೂಕಿನ ಗುಳ್ಳಾಪುರದವರಾದ ಕೃಷ್ಣಮೂರ್ತಿ ಗಾಂವ್ಕರ್ ರವರು ಹೆಗ್ಗಾರ್ ಗ್ರಾಮದ ಸರಕಾರಿ ಹಿ.ಪ್ರಾ. ಶಾಲೆಯ ವಿದ್ಯಾರ್ಥಿಗಳಿಗೆ ಈ ಯೋಜನೆಯನ್ನು ಆರಂಭಿಸಿ ಯಶಸ್ವಿಯಾಗಿ ದಡಮುಟ್ಟಿಸಿದ್ದಾರೆ.

ಅಂಕೋಲ ಆಸುಪಾಸಿನ ಮುಖ್ಯ ಸಮುದಾಯಗಳಾದ ಹವ್ಯಕ, ಸಿದ್ಧಿ, ಕುಣಬಿ, ಹಾಲಕ್ಕಿ ಸಮುದಾಯಗಳಲ್ಲಿರುವ ಆಹಾರ ಸಂಸ್ಕೃತಿಯ ಬಗ್ಗೆ ಮಕ್ಕಳಿಗೆ ಅಭಿನಯದ ತರಗತಿಗಳು, ವ್ಯಕ್ತಿತ್ವ ವಿಕಸನದ ಕುರಿತಾದ ತರಗತಿಗಳು ಹಾಗೂ ಭಾಷೆ ಸ್ಪಷ್ಟತೆ, ಉಚ್ಚಾರಣೆಯ ಚಟುವಟಿಕೆಗಳನ್ನು ನಡೆಸಲಾಯಿತು, ಸ್ಥಳೀಯ ಆಹಾರ ಪದ್ಧತಿಗಳ ವಿಶೇಷತೆಗಳು, ಜನಪದ ಹಾಡು, ಕಥೆಗಳನ್ನು ಸಮುದಾಯದ ಹಿರಿಯರಿಂದ ಶಾಲಾ ಮಕ್ಕಳಿಗೆ ವರ್ಗಾಯಿಸಿ

ಸ್ಥಳೀಯ ಸಮುದಾಯಗಳು ತಮ್ಮ ತಮ್ಮ ಆಹಾರ ಪದ್ಧತಿ, ಪರಂಪರೆಗಳನ್ನು ನೆನಪಿಸಿ ಮೆಲುಕು ಹಾಕುತ್ತಾ ತಮ್ಮ ಮುಂದಿನ ತಲೆಮಾರಿಗೆ ಅದನ್ನು ವರ್ಗಾಯಿಸಿದ್ದು ಯೋಜನೆಯ ಯಶಸ್ಸಿಗೆ, ಸಾರ್ಥಕತೆಯ ಭಾವಕ್ಕೆ ಸಾಕ್ಷಿಯಾಯಿತು.
ಕೃಷ್ಣಮೂರ್ತಿ ಗಾಂವ್ಕರ್

ಮಕ್ಕಳನ್ನು ಸಾಹಿತ್ಯ ರಚನೆಗೆ ಪ್ರೇರೇಪಿಸಿ ಮಕ್ಕಳಿಂದಲೇ ಆಹಾರ ಪದ್ಧತಿಯ ಕುರಿತಾದ ಕಿರು ನಾಟಕಗಳನ್ನು ರಚಿಸಲಾಯಿತು. ಸಮುದಾಯಗಳು ಅನುಸರಿಸುತ್ತಿರುವ ಆಹಾರ ಪದ್ಧತಿ, ವೈಶಿಷ್ಟ್ಯತೆ ಆಹಾರದ ಪ್ರಾಮುಖ್ಯತೆ ಕುರಿತಾದ ವಿಚಾರ ವಿನಿಮಯ ಗೋಷ್ಠಿಗಳನ್ನು ಹಾಗೂ ವಿಶೇಷ ಅಡುಗೆ ತಯಾರಿಕೆಯ ಪ್ರಾತ್ಯಕ್ಷಿಕೆಗಳನ್ನು ನಡೆಸಲಾಯಿತು.

ರೇಡಿಯೋ ನಾಟಕಗಳನ್ನಾಗಿಸಿ ಮಕ್ಕಳಿಂದಲೇ ಧ್ವನಿಮುದ್ರಿಸುವ ಯೋಚನೆಯನ್ನು, ಕೋವಿಡ್ ಕಾರಣದಿಂದ ಪರೀಷ್ಕರಣೆ ಗೊಳಿಸಿ ಆಹಾರ ಸಂಸ್ಕೃತಿಯ ಕುರಿತಾದ ಕಿರು ರೂಪಕಗಳನ್ನು ಮಕ್ಕಳಿಂದ ಅಭಿನಯಿಸಲಾಯಿತು.

ಯೋಜನೆಯ ಯಶಸ್ಸಿಗೆ ಶಾಲೆಯ ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕರುಗಳು ಪಾಲಕರುಗಳು ಹಾಗೂ ಊರಿನ ಇನ್ನಿತರ ಆಸಕ್ತರೂ ಕೂಡ ಭಾಗಿಯಾಗಿ ಮಕ್ಕಳಿಗೆ ಉತ್ಸಾಹ ತುಂಬಿದರು ಎನ್ನುವುದನ್ನು ಗಾಂವ್ಕರ್ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಾರೆ.

ಸೂರು.. ಚೂರು ಚೂರು

ಶ್ರೀಕಾಂತ ಪವಾಡೇಪ್ಪ ನವಲಗಿರಿ
ರಂಗಭೂಮಿ ಕಲಾವಿದರು
8197598270

ಮೇಲ್ನೋಟಕ್ಕೆ ಅಭಿವೃದ್ಧಿ ಎಂದು ಕಂಡರೂ, ಅದನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಕಾಣುವ ನೋವಿನ ಕಥೆಗಳೂ ಕಲಿಕೆಗೆ ದಾರಿಯಾಗುತ್ತದೆ ಎನ್ನುವುದನ್ನು 'ಸೂರು.. ಚೂರು ಚೂರು' ಯೋಜನೆ ಮನವರಿಕೆ ಮಾಡಿಕೊಟ್ಟಿದೆ.

ಬಾಗಲಕೋಟೆ ಜಿಲ್ಲೆಯ ಬೋಮ್ಮಣಗಿ ಗ್ರಾಮದ ರಂಗಕಲಾವಿದ ಶ್ರೀಕಾಂತ ಪವಾಡೇಪ್ಪ ನವಲಗಿರಿಯವರು ಕದಾಂಪೂರ ಕಸ್ತೂರಿ ಬಾ ಗಾಂಧಿ ಬಾಲಕಿಯರ ವಸತಿ ವಿದ್ಯಾಲಯದ ಮಕ್ಕಳಿಗಾಗಿ ಈ ಯೋಜನೆಯನ್ನು ಅನುಷ್ಠಾನಿಸಿದವರು.

ಮುಳುಗಡೆಯ ಹಳ್ಳಿ ಜೀವನದಿಂದ ಬಂದಿರುವ ಇವರು ತನ್ನ ಬದುಕಿನ ಅನುಭವ ಕಥನವನ್ನೇ ಯೋಜನೆಗೆ ಆಯ್ಕೆಮಾಡಿಕೊಂಡಿದ್ದು, ಆಲಮಟ್ಟಿ ಲಾಲ್ ಬಹದ್ದೂರ್ ಶಾಸ್ತ್ರಿ ಅಣೆಕಟ್ಟು ಮತ್ತು ನಾರಾಯಣ ಪುರ ಅಣೆಕಟ್ಟು

ಕೆಲವರ ಅನುಭವಗಳು ಮಕ್ಕಳಲ್ಲಿ ಅಚ್ಚರಿಯ ಭಾವ ಮೂಡಿಸುವುದರ ಜೊತೆಗೆ, ಇತಿಹಾಸ ಇಷ್ಟೊಂದು ಭಯಾನಕವಾಗಿಯೂ ಇರುತ್ತದೆಯೋ ಎನ್ನುವ ಪ್ರಶ್ನೆಗಳನ್ನೂ ಮೂಡಿಸಿದೆ
– ಶ್ರೀಕಾಂತ ಪವಾಡೇಪ್ಪ ನವಲಗಿರಿ

ನಿರ್ಮಾಣದ ಹಿನ್ನೆಲೆಯಲ್ಲಿ ಹಿನ್ನೀರಿನಿಂದ ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳ ಹಲವು ಹಳ್ಳಿಗಳು ಮುಳುಗಡೆಯಾಗಿ ಬದಲಾದ ಚಿತ್ರಣ. ಈ ಘಟನೆ ಆ ಊರಿನ ಜನಜೀವನದ ಮೇಲೆ ಪರಿಣಾಮ ಬೀರಿದೆ, ಬದಲಾದ ಕೃಷಿ ಪದ್ಧತಿ, ಜೀವನ ಶೈಲಿಯ ಬಗ್ಗೆ ಮಕ್ಕಳಿಗೆ ಉತ್ತಮ ಜ್ಞಾನವನ್ನು ಬೋಧಿಸಿದೆ. ರಂಗಭೂಮಿಯ ಹಲವು ತಂತ್ರಗಳನ್ನು ಅಳವಡಿಸಿಕೊಂಡು ಚಟುವಟಿಕೆಗಳನ್ನು ನಡೆಸುವುದರ ಜೊತೆಗೆ ಮುಳುಗಡೆಯ ಪ್ರದೇಶದ ಜಾನಪದ ಕಲಾವಿದರ ಮುಖೇನ ಅವರ ಕಲೆಯ ಪರಂಪರೆಯ, ಬದುಕಿನ ಅನುಭವವನ್ನು ಮಕ್ಕಳಿಗೆ ತಿಳಿಸಲಾಯಿತು.

ವಿಡಿಯೋ ತುಣುಕುಗಳ ಪ್ರದರ್ಶನ, ಮುಳುಗಡೆಯ ಹಳ್ಳಿಯ ಜನರು ಹೇಳಿದ ಬದುಕಿನ ಕತೆಗಳನ್ನು ಮಕ್ಕಳೇ ಸಣ್ಣ ಸಣ್ಣ ನಾಟಕವನ್ನಾಗಿಸಿದರು, ಆಡಿಯೋ ಮೂಲಕ ರೇಡಿಯೋ ನಾಟಕಗಳನ್ನೂ ಸಿದ್ಧಪಡಿಸಿದರು.

ಶಾಲೆಯ ಪ್ರಾಂಶುಪಾಲರು ಮತ್ತು ಶಿಕ್ಷಕರೂ ತುಂಬು ಹುರುಪಿನಿಂದ ಮಕ್ಕಳನ್ನು ಬೆಂಬಲಿಸಿದ್ದು ಯೋಜನೆಯ ಯಶಸ್ಸಿಗೆ ದಾರಿಯಾಯ್ತು ಎನ್ನುತ್ತಾರೆ ಶ್ರೀಕಾಂತ್.

ಬೆಂಕಿಪೊಟ್ಟಣಗಳ ಜಗತ್ತಿನಲ್ಲಿ ಒಂದು ಪಯಣ

ಎಸ್.ಎಫ್ ಹುಸೇನಿ
ಕಲಾವಿದರು
6362339264

ಬೆಳೆಸಿಕೊಂಡ ಹವ್ಯಾಸಗಳು ಕಲಿಕೆಗೆ ಹೇಗೆ ದಾರಿ ಮಾಡಿಕೊಡುತ್ತದೆ ಮತ್ತು ಚಿಕ್ಕ ಚಿಕ್ಕ ವಸ್ತುಗಳೂ ಕಲಿಕಾ ಸಾಮಾಗ್ರಿಗಳಾಗುವ ಸಾಧ್ಯತೆಯನ್ನು ತೆರೆದಿಟ್ಟ ಯೋಜನೆ "ಬೆಂಕಿಪೊಟ್ಟಣಗಳ ಜಗತ್ತಿನಲ್ಲಿ ಒಂದು ಪಯಣ"

ಒಬ್ಬ ಅಪರೂಪದ ಬೆಂಕಿಪೊಟ್ಟಣ ಹಾಗೂ ನಾಣ್ಯ ಸಂಗ್ರಹಾಕಾರನಾಗಿ ಗುರುತಿಸಿಕೊಂಡಿರುವ ಮೈಸೂರು ಮೂಲದ ಚಿತ್ರಕಲಾವಿದ ಎಸ್.ಎಫ್ ಹುಸೇನಿಯವರು ಮೂಲತಃ ಮೈಸೂರಿನವರಾಗಿದ್ದು, ಬೆಂಗಳೂರಿನ ಹೊಂಗಸಂದ್ರದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ತಮ್ಮ ಕಲಾಪ್ರಯೋಗವನ್ನು ನಡೆಸಿದ್ದಾರೆ.

ಬೆಂಕಿಪೊಟ್ಟಣಗಳ ಮೇಲಿನ ಚಿತ್ರಗಳಿಗೆ ಪೂರಕವಾದ ಪಾಠಗಳನ್ನು ಮಕ್ಕಳು ಸ್ವವಿವೇಚನೆಯಿಂದ ಬಳಸುತ್ತಿದ್ದರು. ಕೆಲವರಿಗೆ ಇದೊಂದು ಶೈಕ್ಷಣಿಕ ವಿಷಯವಾಗಿದ್ದರೆ, ಇನ್ನೂ ಕೆಲವರಿಗೆ ಆಟವಾಗಿತ್ತು.
– ಎಸ್.ಎಫ್.ಹುಸೇನಿ



ತನ್ನ ನೆಚ್ಚಿನ ಹವ್ಯಾಸವಾಗಿರುವ ಬೆಂಕಿಪೊಟ್ಟಣ ಸಂಗ್ರಹದ ಚಟುವಟಿಕೆಯನ್ನೇ ಆಯ್ದುಕೊಂಡ ಇವರು ಮಕ್ಕಳಲ್ಲಿ ಹವ್ಯಾಸ, ಸಂಗ್ರಹ, ಪ್ರದರ್ಶನದ ಸಾಧ್ಯತೆಯನ್ನು ತಿಳಿಸುತ್ತಾ ಕಲಿಕೆಯ ಹೊಸ ಹೊಸ ಪರಿಕಲ್ಪನೆಯನ್ನು ಹುಟ್ಟುಹಾಕುತ್ತಾ, ಮಕ್ಕಳನ್ನು ಹೊಸಬಗೆಯ ಕಲಿಕಾಲೋಕಕ್ಕೆ ಕರೆದೊಯ್ಯುವಲ್ಲಿ ಯಶಸ್ವಿಯಾಗಿದ್ದಾರೆ.

ಬೆಂಗಳೂರಿನ ಕೈಗಾರಿಕಾ ಪ್ರದೇಶದಲ್ಲಿದ್ದ ಈ ಶಾಲೆಯಲ್ಲಿ ಬಿಹಾರ, ತಮಿಳುನಾಡು, ಆಂಧ್ರಪ್ರದೇಶ, ಅಸ್ಸಾಂ, ಕೋಲ್ಕತ್ತಾ ಮತ್ತು ನಮ್ಮ ರಾಜ್ಯದ ಅನೇಕ ಜಿಲ್ಲೆಗಳ ಮಕ್ಕಳು ಕಲಿಯುತ್ತಿದ್ದುದು ಇವರ ಕಲಾಪ್ರಯೋಗಕ್ಕೆ ವೈವಿಧ್ಯತೆಯನ್ನು ತುಂಬಿಕೊಟ್ಟಿತು. ಯೋಜನೆ ಆರಂಭವಾದ 6 ತಿಂಗಳಲ್ಲಿ ಕರೋನಾ–ಕೋವಿಡ್ 19 ಸಾಂಕ್ರಾಮಿಕ ರೋಗ ಬಾಧಿಸಿದ್ದ ಹಿನ್ನೆಲೆಯಲ್ಲಿ ನಿರೀಕ್ಷೆಯಂತೆ ಮುನ್ನಡೆಯಲಿಲ್ಲ. ಆದರೆ ಶಾಲಾ ಶಿಕ್ಷಕರ ವಿಶೇಷ ಸಹಕಾರದಿಂದ ಯೋಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಯಿತು.

ನಮ್ಮ ಮನೆಲಿ ಅಪ್ಪ ಬೆಂಕಿ ಪೊಟ್ಟಣಗಳನ್ನು ನೋಡಿ ನನಗೆ ಬೈತ್ತಿದ್ದರು, ಅಪ್ಪನಿಗೆ ನಾನು ಬೆಂಕಿ ಪೊಟ್ಟಣಗಳಿಂದ ಮಾಡಿದ ಚಟುವಟಿಕೆಗಳನ್ನು ತೋರಿಸಿದೆ,
ಅಪ್ಪ ಖುಷಿ ಪಟ್ಟರು
–ಸೃಜನ್, 5ನೇ ತರಗತಿ

ಕಲಾಬರಹ ಕಲಾಪತ್ರಿಕೆ

ಮೌನೇಶ ವಿಶ್ವಕರ್ಮ
ಕಲಾವಿದರು, ಪತ್ರಕರ್ತರು
9481017606

ಕಲೆ ಎನ್ನುವುದು ಕೇವಲ ನೋಡುವಿಕೆಗೆ, ಆಸ್ವಾದಿಸುವಿಕೆಗೆ ಸೀಮಿತವಾಗಬಾರದು, ಅದನ್ನು ನೋಡುವ ಮನಸ್ಸಿನಲ್ಲಿ ಒಂದಷ್ಟು ಪ್ರಶ್ನೋತ್ತರಗಳನ್ನು ಹುಟ್ಟುಹಾಕಬೇಕೆನ್ನುವ ಆಶಯವನ್ನು ಕಲಾಬರಹ ಕಲಾಪತ್ರಿಕೆ ಯೋಜನೆ ಹೊಂದಿದೆ. ವೃತ್ತಿ ಬದುಕಿಗೆ ಪತ್ರಿಕಾರಂಗ ಹಾಗೂ ರಂಗಭೂಮಿಯನ್ನು ಆಯ್ದುಕೊಂಡಿರುವ ಪುತ್ತೂರಿನ ಮೌನೇಶ ವಿಶ್ವಕರ್ಮರವರು ಕಲ್ಲಡ್ಕ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇದನ್ನು ಯಶಸ್ವಿಯಾಗಿ ಅನುಷ್ಠಾನಿಸಿದ್ದಾರೆ.

ಯಾವುದೇ ಕಲಾಚಟುವಟಿಕೆಗಳನ್ನು ಬೇರೆ ಬೇರೆ ಬಗೆಯಲ್ಲಿ ನೋಡುವುದು, ಅದಕ್ಕೆ ಅಕ್ಷರ ರೂಪ ನೀಡುವುದು ಮೊದಲಾದ ಚಟುವಟಿಕೆಗಳ ಜೊತೆಗೆ ನಾಟಕ ಓದು ವಿಮರ್ಶೆ ಮಾಡು, ನಾಟಕ ನೋಡು ವಿಮರ್ಶೆ ಮಾಡು ಹೀಗೆ ಬೇರೆ ಬೇರೆ ಶೀರ್ಷಿಕೆಯಡಿ ಚಟುವಟಿಕೆಗಳನ್ನು ನೀಡಿರುವ ಇವರು ಇದೇ ಯೋಜನೆಯಡಿ ಎರಡು ನಾಟಕ, ಒಂದು ಬೀದಿನಾಟಕಗಳನ್ನು ಮಕ್ಕಳಿಗಾಗಿ ಮಾಡಿಸಿ, ಅನುಭವಜನ್ಯ ತರಬೇತಿ ನೀಡಿದ್ದಾರೆ.

ಕೊರೋನಾ ಮಹಾಮಾರಿ ಈ ಯೋಜನೆಗೆ ಹೊಡೆತ ನೀಡಿದ್ದರೂ, ವಾಟ್ಸಾಪ್ ಮೂಲಕ, ಝೂಮ್ ಮೀಟ್ ಮೂಲಕ ಸಂಪರ್ಕಿಸಿ ಮಕ್ಕಳನ್ನು ಕಲಾಚಟುವಟಿಕೆಯಲ್ಲಿ ಬೆರೆಯಲು ಅವಕಾಶ ಮಾಡಿಕೊಡಲಾಗಿತ್ತು. ಪತ್ರಿಕೆಗೆ ಬರಹ ಸಿದ್ಧಪಡಿಸುವ ಸಲುವಾಗಿ ಮಕ್ಕಳಿಗೆ ನೀಡುತ್ತಿದ್ದ ಚಟುವಟಿಕೆಗಳಿಗೆ ಮಕ್ಕಳ ಪೋಷಕರೂ ನೆರವಾಗುತಿದ್ದುದು ಇಲ್ಲಿ ಉಲ್ಲೇಖನಿಯ. ಈ ಯೋಜನೆಯಡಿ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ, ಪ್ರತೀ ವಾರದ ತರಗತಿಗಳು, ಅಧ್ಯಯನ ಪ್ರವಾಸ, ಎಲ್ಲಾ ಚಟುವಟಿಕೆಗಳ ಜೊತೆಗೆ ಸಂಪನ್ನಗೊಂಡ ಈ ಯೋಜನೆಯಲ್ಲಿ ಮಕ್ಕಳ ಬರಹದ "ಬಹುಮುಖಿ" ಹೆಸರಿನ ನಾಲ್ಕು ಪತ್ರಿಕೆಗಳನ್ನು ಪ್ರಕಟಿಸಲಾಗಿದೆ.

ಶಾಲಾ ಮುಖ್ಯ ಶಿಕ್ಷಕರು, ಶಿಕ್ಷಕವೃಂದ, ಶಾಲಾಭಿವೃದ್ಧಿ ಸಮಿತಿ ಜೊತೆಗೆ ಮಕ್ಕಳ ಪೋಷಕರು, ಸಮುದಾಯ ಈ ಯೋಜನೆಯ ಜೊತೆಗೆ ಹೆಜ್ಜೆ ಹಾಕಿರುವುದೂ ಇಲ್ಲಿ ಗಮನೀಯ ಸಂಗತಿ.

ಪ್ರತ್ಯಕ್ಷವಾಗಿ 30 ಮಕ್ಕಳು ಈ ಯೋಜನೆಯ ನೇರ ಪ್ರಯೋಜನ ಪಡೆದುಕೊಂಡಿದ್ದರೆ, ಪರೋಕ್ಷವಾಗಿ ಶಾಲೆಯ 500 ಕ್ಕೂ ಅಧಿಕ ವಿದ್ಯಾರ್ಥಿಗಳು ಈ ಯೋಜನೆಯ ಲಾಭ ಪಡೆದುಕೊಂಡಿದ್ದಾರೆ.
– ಎ ಅಶ್ರಫ್, ಮುಖ್ಯಶಿಕ್ಷಕರು

ಪುಟ್ಟ ಪಾದಗಳ ನಡಿಗೆ ಇತಿಹಾಸವನ್ನರಿಯುವ ಕಡೆಗೆ



ಕೆ.ವಿ.ನಾಯಕ
ಕಲಾವಿದರು
7259926543

ಅಂಗೈ ಅಗಲದಲ್ಲಿ ಜಗತ್ತನೇ ತಿಳಿಯುವ ನಾವು ನೆಲೆನಿಂತ ಭೂಮಿಯ ಇತಿಹಾಸವನ್ನು ಮರೆಯುತ್ತಿದ್ದೇವೆ, ಇದು ಆಗಬಾರದು ಇತಿಹಾಸದ ಅರಿವೇ ಭವಿಷ್ಯಕ್ಕೆ ಪೂರಕ ಎನ್ನುವುದನ್ನು ಪುಟ್ಟ ಪಾದಗಳ ನಡಿಗೆ ಇತಿಹಾಸವನ್ನರಿಯುವ ಕಡೆಗೆ ಎನ್ನುವ ಯೋಜನೆ ಸಾಬೀತು ಪಡಿಸಿದೆ.

ರಂಗಭೂಮಿಯ ನಂಟು ಹೊಂದಿರುವ ಕೆ.ವಿ.ನಾಯಕ (ವಿಶ್ವನಾಥ ಎನ್.ಅಮಾಸ) ರವರು ಗೌರಿಬಿದನೂರಿನ ಎಸ್.ಎಸ್.ಇ.ಎ. ಸರ್ಕಾರಿ ಪ್ರೌಢಶಾಲೆಯ 8 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳನ್ನು ಒಳಗೊಂಡು ಈ ಯೋಜನೆಯನ್ನು ಅರ್ಥಗರ್ಭಿತವಾಗಿ ಅನುಷ್ಠಾನಿಸಿದ್ದಾರೆ. ಅಂಗೈ ಅಗಲದಲ್ಲೇ ಜಗತ್ತಿನ ಎಲ್ಲವುಗಳನ್ನು ತಿಳಿಯುವ ನಾವು, ನಮ್ಮ ನೆಲದ ಇತಿಹಾಸವನ್ನು ಅರಿಯುವ ಪ್ರಯತ್ನ ಮಾಡುತ್ತಿಲ್ಲ. ಇದನ್ನು ಸಾಕಾರಗೊಳಿಸುವ ಉದ್ದೇಶದಿಂದ ಈ ವಿಷಯವನ್ನು ಆಯ್ದುಕೊಂಡಿದ್ದಾರೆ. ಇತಿಹಾಸದ ಅರಿವನ್ನು ವಿಸ್ತಾರಗೊಳಿಸುವುದರ ಗಡಿಭಾಗದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಬುರ್ರ ಕಥಾಪ್ರಕಾರದಲ್ಲಿ

ಏಕಮುಖ ಕಲಿಕೆಯ ಏಕತಾನತೆಯಿಂದ ಹೊರಬಂದು ಬಹುಮುಖೀ ಕಲಿಕೆಯತ್ತ ಮಕ್ಕಳು ಉತ್ಸಾಹದಿಂದ ತೊಡಗಿಸಿಕೊಂಡದ್ದು, ತರಗತಿಗಳಿಗೆ ತಡಮಾಡಿ ಬರುತ್ತಿದ್ದವರು ಅವಧಿಗೆ ಮುಂಚೆಯೇ ಬರತೊಡಗಿದ್ದು ಗಮನ ಸೆಳೆಯಿತು.

– ಕೆ.ವಿ.ನಾಯಕ

ರಂಗಭೂಮಿ ಇತಿಹಾಸವನ್ನು ಮಕ್ಕಳಿಗೆ ತಿಳಿಸುವ ಉತ್ಸಾಹ ಇವರದಾಗಿತ್ತು. ಮತ್ತು ಅದನ್ನು ಚಟುವಟಿಕೆಯುದ್ದಕ್ಕೂ ಬಳಸಿಕೊಂಡದ್ದರಿಂದ ಪಠ್ಯಾಂಶಗಳ ಸುಲಭ ಕಲಿಕೆಗೆ ಅನುಕೂಲ ಕಲ್ಪಿಸಿತು ಎನ್ನುತ್ತಾರೆ ಕೆ.ವಿ.ನಾಯಕರು.

ಯೋಜನೆಯ ಅಂಗವಾಗಿ ವಿದ್ಯಾರ್ಥಿಗಳನ್ನು ಎರಡು ಸಲ ವಿದುರಾಶ್ವತ್ಥಕ್ಕೆ ಕರೆದೊಯ್ದು ಅಲ್ಲಿ ಧ್ವಜ ಸತ್ಯಾಗ್ರಹ ನಡೆದ ಸ್ಥಳ, ಹುತಾತ್ಮರಾದ ಮಹನೀಯರ ವಿವರ ಮತ್ತು ಅವರ ನೆನಪಿನ ಸ್ತೂಪವನ್ನು ತೋರಿಸಿ ವಿವರಿಸಲಾಯಿತು. ಹಾಗೂ ಜೀತವಿಮುಕ್ತಿ ಮತ್ತು ಭೂಮಿಗಾಗಿ ಹೋರಾಟ ನಡೆದ ನಾಗಸಂದ್ರ ಮತ್ತು ಅದರ ಪರಿಣಾಮವಾಗಿ ಸೃಷ್ಟಿಯಾದ ನವಗ್ರಾಮ ಶಂಭೂಕ ನಗರಗಳಿಗೆ ವಿದ್ಯಾರ್ಥಿಗಳನ್ನು ಕರೆದೊಯ್ದು ಅಲ್ಲಿಯವರೊಡನೆ ಮಾತುಕತೆ ನಡೆಸಲಾಯಿತು.

ವಿದುರಾಶ್ವತ್ಥ ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದವರ ಕುಟುಂಬಸ್ಥರ ಜೊತೆ ಮಕ್ಕಳು ಮಾತುಕತೆ ನಡೆಸಿದರು. ಅಂತೆಯೇ ಅಂದು ಜೀತಗಾರರಾಗಿದ್ದು ಇಂದು ಸ್ವತಂತ್ರ ಬದುಕು ಕಟ್ಟಿಕೊಂಡಿರುವವರ ಹಾಗೂ ಅವರ ಮನೆಯವರ ಜೊತೆ ಮಾತುಕತೆ ನಡೆಸಿದರು. ಭೂ ಹೋರಾಟದಲ್ಲಿ ಪಾಲ್ಗೊಂಡಿದ್ದ ಸಂಘಟನೆಯ ಹಿರಿಯರ ಅನುಭವಗಳನ್ನೂ ಆಲಿಸಿದರು. ಈ ಮೂಲಕ ಈ ತನಕ ತಮಗೆ ತಿಳಿಯದ ಸಮುದಾಯಗಳೊಂದಿಗೆ ಸಂವಹನ ನಡೆಸಿ, ಅವರ ಸಂಸ್ಕೃತಿಯ ಒಳಗೊಳ್ಳುವಿಕೆಗೆ ತೊಡಗಿಸಿಕೊಂಡದ್ದು ಯೋಜನೆಯ ಯಶಸ್ಸಿಗೆ ಕೈಗನ್ನಡಿ ಎಂದೆನ್ನಿಸಿತು.

ಮರ–ಒಂದು ಜೈವಿಕ ವ್ಯವಸ್ಥೆ

ಮಾನವ ಪ್ರಕೃತಿದತ್ತ ವ್ಯವಸ್ಥೆಯ ಒಳಗೆ ಬದುಕುವವ, ಆದರೆ ಈಗ ಎಲ್ಲವನ್ನೂ ತಾನೇ ತನ್ನಿಂದಲೇ ಎನ್ನುವಂತೆ ವರ್ತಿಸುತ್ತಿದ್ದಾನೆ, ಇದಕ್ಕೆ ಕಡಿವಾಣ ಹಾಕಬೇಕೆನ್ನುತ್ತದೆ ಮರ–ಒಂದು ಜೈವಿಕ ವ್ಯವಸ್ಥೆ ಯೋಜನೆ.

ಸುನೀತ ಆರ್.
ಕಲಾವಿದರು (ದೃಶ್ಯಕಲೆ)
9972733318

ಮೂಲತಃ ಬೆಂಗಳೂರಿನವರಾದ ಸುನೀತ ರಾಮಚಂದ್ರರವರು ದೃಶ್ಯಕಲೆಯ ವಿದ್ಯಾರ್ಥಿಯಾಗಿದ್ದು, ಗದಗ ಜಿಲ್ಲೆಯ ಎಸ್.ಎಂ.ಕೃಷ್ಣ ನಗರ ಸರ್ಕಾರಿ ಪ್ರೌಢಶಾಲೆಯಲ್ಲಿ ಕಾರ್ಯಗತಗೊಳಿಸಿದ ಈ ಯೋಜನೆಯ ಜೊತೆಗೆ ಹಲವು ಆಶಯಗಳೂ ಇವರದಾಗಿತ್ತು.

80ರ ದಶಕದಲ್ಲಿ ಬೆಂಗಳೂರಿನಲ್ಲಿದ್ದ ಸಾಲುಮರಗಳು ಈಗಿಲ್ಲವಾಗಿರುವುದು, ಮಡಿಕೇರಿಯಲ್ಲಿ ಮಕ್ಕಳು ಬಹಳ ಚೆನ್ನಾಗಿ ತಮ್ಮ ಚಿತ್ರ ಬಿಡಿಸುವಿಕೆಯಲ್ಲಿ ತೊಡಗಿಸಿಕೊಂಡಿದ್ದರು. ಕೆಲವು ಮಕ್ಕಳು ಚಿತ್ರ ಬಿಡಿಸಲು ಬರುವುದೇ ಇಲ್ಲ ಎಂದು ಕುಳಿತ ಮಕ್ಕಳು ಗುಂಪಿನಲ್ಲಿ ಸೇರಿಕೊಂಡಾಗ ಬಿಡಿಸುತ್ತಿದ್ದ ಚಿತ್ರಗಳಲ್ಲಿ ಕಂಡು ಬಂದ ವಿಭಿನ್ನತೆ ಚಕಿತಗೊಳಿಸಿತು.
– ಸುನೀತ ಆರ್.

ನಡೆದಿರುವ ಭೂಕುಸಿತ, ಅನೇಕ ಭೂವಿನಾಶದ ಸನ್ನಿವೇಶಗಳನ್ನು ಗಮನದಲ್ಲಿರಿಸಿ ಮಕ್ಕಳ ಜೊತೆಗೆ ಒಡನಾಟ ನಡೆಸಿದ್ದಾರೆ.

ಜೀವ ವೈವಿಧ್ಯಗಳನ್ನು ಚಿತ್ರ, ರೇಖಾಚಿತ್ರ, ಮಣ್ಣಿನ ಮಾದರಿಗಳ ರಚನೆ ಮೂಲಕ ಮಕ್ಕಳ ಗ್ರಹಣ ಶಕ್ತಿಯನ್ನು ಹೆಚ್ಚಿಸುವುದು, ಭಾಷಾ ಕೌಶಲ್ಯವನ್ನು ಪ್ರೋತ್ಸಾಹಿಸಲು ಕೀಟಪ್ರಪಂಚದ ಕುರಿತಾಗಿ ಸಣ್ಣ ಕಥೆಗಳು, ಚುಟುಕುಗಳು, ಕವನಗಳು ಮತ್ತು ನಾಟಕೀಯ ಸಂಭಾಷಣೆಗಳನ್ನು ವಿದ್ಯಾರ್ಥಿಗಳಿಂದ ಹೊರತರುವ ಪ್ರಯತ್ನ ಮಾಡುವುದು, ವರ್ಣಮಯ ಭಿತ್ತಿಚಿತ್ರಗಳನ್ನು ರಚಿಸುವ ಚಟುವಟಿಕೆಯನ್ನು ಇವರು ಹೊಂದಿದ್ದರು.

ಆರಂಭದಲ್ಲಿ ಈ ಯೋಜನೆಯಲ್ಲಿ ಮಕ್ಕಳು ಉತ್ಸಾಹದಿಂದಲೇ ತೊಡಗಿಸಿ ಆರಂಭಿಕ ಹಂತದ ಚಿತ್ರ ಬರೆಯುವ ಚಟುವಟಿಕೆಯಲ್ಲಿ ಮಕ್ಕಳು ಹುರುಪಿನಿಂದ ಭಾಗವಹಿಸಿದ್ದರು. ಬಳಿಕ ಕೋವಿಡ್ ಕಾರಣದಿಂದ ಮಕ್ಕಳು ನಿರಂತರ ಸಂಪರ್ಕಕ್ಕೆ ಸಿಗದೇ ಇದ್ದ ಹಿನ್ನೆಲೆಯಲ್ಲಿ ವರ್ಷದ ಅಂತ್ಯಕ್ಕೆ ಯೋಜನೆಯನ್ನು ರದ್ದುಗೊಳಿಸಲಾಯಿತು.

ನಮ್ಮ ಮಧುಗಿರಿ

ವಿಶ್ವನಾಥ ಈ.
ಕಲಾವಿದರು
9901563606

ಪ್ರಾದೇಶಿಕ ಪರಿಸರದ ಸಂಪತ್ತು ನಮ್ಮ ಜ್ಞಾನ ಭಂಡಾರಕ್ಕೆ ದೊಡ್ಡ ಶಕ್ತಿಯಾಗಿರುತ್ತದೆ ಎನ್ನುವುದನ್ನು ನಮ್ಮ ಮಧುಗಿರಿ ಯೋಜನೆ ತೋರಿಸಿಕೊಟ್ಟಿದೆ. ಕಲಾಶಿಕ್ಷಕರಾಗಿರುವ ತುಮಕೂರಿನ ವಿಶ್ವನಾಥ ಈ. ರವರು, ತುಮಕೂರಿನ ಊರ್ಡಿಗೆರೆ ಹೋಬಳಿಯ ಹಿರೇಹಳ್ಳಿ ಸರ್ಕಾರಿ ಶಾಲೆಯ 6 ಮತ್ತು 7 ನೇ ತರಗತಿಯ 35 ಮಕ್ಕಳನ್ನು ಸೇರಿಸಿಕೊಂಡು ಈ ಯೋಜನೆಯನ್ನು ಆರಂಭಿಸಿದ್ದರು.

ಏಕಶಿಲಾ ಬೆಟ್ಟವೆಂದು ಪ್ರಸಿದ್ಧಿ ಪಡೆದ ತುಮಕೂರು ಜಿಲ್ಲೆಯ ಮಧುಗಿರಿ ಬೆಟ್ಟ ಸಮುದ್ರಮಟ್ಟದಿಂದ 3933 ಅಡಿ ಎತ್ತರವಿದ್ದು, ಇದರ ಸುತ್ತಮುತ್ತಲು ಜಿಂಕೆವನ, ಕೃಷ್ಣಮೃಗ ಸಂರಕ್ಷಣಾ ಕೇಂದ್ರ, ಕೋಟೆ ಇದ್ದು ಇವೆಲ್ಲದರ ಇತಿಹಾಸವನ್ನು ಮಕ್ಕಳಿಗೆ ತಿಳಿಸುವುದು, ಜೊತೆಗೆ 16ನೇ ಶತಮಾನದಲ್ಲಿ ರಾಜಾ ಹೀರೇಗೌಡರು ನಿರ್ಮಿಸಿದ ಈ ಬೆಟ್ಟದ ಎಡಪಕ್ಕದಲ್ಲಿರುವ ಸಿದ್ಧರಕಟ್ಟೆ ಎಂಬ ಕೆರೆ ನೀಡುವ ಮಳೆಕೊಯ್ಲಿನ ಸಂದೇಶದ ಬಗ್ಗೆ ಮಕ್ಕಳಿಗೆ ತಿಳಿಸುವುದು ಈ ಯೋಜನೆಯ ಉದ್ದೇಶವಾಗಿತ್ತು.

ಶಾಲಾ ಶಿಕ್ಷಕ ವರ್ಗ ಕಲಾಂತರ್ಗತ ಕಲಿಕೆಯ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದ್ದರು. ಹೀಗಾಗಿ ಅಪೇಕ್ಷೆಪಟ್ಟಾಗಲೆಲ್ಲಾ ಮಕ್ಕಳ ತರಬೇತಿ ನಡೆಸಲು ಅವಕಾಶ ಮಾಡಿಕೊಡುತ್ತಿದ್ದರು.
– ವಿಶ್ವನಾಥ್ ಈ.

ಪ್ರಾದೇಶಿಕ ಶ್ರೀಮಂತಿಕೆಯನ್ನು ನಾವು ಅರ್ಥೈಸಿಕೊಳ್ಳದೇ, ಕೇವಲ ಪಠ್ಯವಿಚಾರಗಳಿಗೆ ಗಂಟುಬೀಳುತ್ತೇವೆ, ಆದರೆ ಸ್ಥಳೀಯವಾಗಿರುವ ಸಂಪತ್ತುಗಳ ಅವಲೋಕನ ಅವುಗಳ ಮುಖೇನ ಕಲಾ ಅಂತರ್ಗತ ಕಲಿಕೆ ನಮ್ಮ ಶಾಲಾ ಕಲಿಕೆಯನ್ನು ಗುಣಾತ್ಮಕವಾಗಿಸುತ್ತದೆ, ಮಕ್ಕಳ ಕಲಿಕೆಯ ಉತ್ಸಾಹ ಇಮ್ಮಡಿಗೊಳ್ಳಲೂ ಕಾರಣವಾಗುತ್ತದೆ ಎನ್ನುವುದನ್ನು ನಮ್ಮ ಮಧುಗಿರಿಯ ಮೂಲಕ ಸಾಧಿಸಿ ತೋರಿಸಿದ್ದಾರೆ.

ಆರಂಭದಲ್ಲಿ ಚಿತ್ರಕಲೆಯ ವಿಧವಿಧ ಸಾಧ್ಯತೆಗಳನ್ನು ತಿಳಿಸುತ್ತಾ ಮಧುಗಿರಿ ಕೋಟೆ, ಬೆಟ್ಟವನ್ನು ಅಲ್ಲಿನ ದೃಶ್ಯಾವಳಿಯನ್ನು ರಚಿಸುವ ಚಟುವಟಿಕೆ ನಡೆಯಿತು. ಶಿಕ್ಷಕರು, ಮಕ್ಕಳ ಪೋಷಕರ ಸಹಕಾರ ಉತ್ತಮವಾಗಿದ್ದು, ಯೋಜನೆಯ ಅನುಷ್ಠಾನಕ್ಕೆ ಬೆಂಬಲವಾಗಿ ನಿಂತಿದ್ದರು.

ಆದರೆ ಕೊರೋನಾ ಕಾರಣಕ್ಕೆ ಆರಂಭಿಕ ಯೋಚನೆಯಂತೆ ಯೋಜನೆ ನಡೆಸಲಾಗಲಿಲ್ಲ.

ಕಲಾಂತರ್ಗತ ಕಲಿಕೆ

ವಾನವಿಲ್ ಶಾಲೆ, ತಮಿಳುನಾಡು
vanavil.school@gmail.com

ಅಲೆಮಾರಿ ಬುಡಕಟ್ಟು ಮಕ್ಕಳನ್ನೇ ಕೇಂದ್ರವಾಗಿರಿಸಿಕೊಂಡು ಶಿಕ್ಷಣ ನೀಡುತ್ತಿರುವ ತಮಿಳುನಾಡಿನ ವಾನವಿಲ್ ಶಾಲೆ ಕಲೆ ಆಧಾರಿತ ಶಿಕ್ಷಣ ಪದ್ಧತಿಯನ್ನೇ ರೂಢಿಸಿಕೊಂಡು ಬಂದಿದೆ. ಇದಕ್ಕೆ ಪೂರಕವಾಗಿದ್ದ ಈ ಯೋಜನೆಯಡಿ ಹಮ್ಮಿಕೊಂಡ ಕಲೆ ಆಧಾರಿತ ಚಟುವಟಿಕೆಗಳಾದ ಹಾಡುಗಳು, ನೃತ್ಯ, ಚಿತ್ರಕಲೆ ಮತ್ತು ರಂಗಭೂಮಿಯು ಮಕ್ಕಳಲ್ಲಿ ಕಲಿಕೆಯ ಆಸಕ್ತಿ, ಆತ್ಮವಿಶ್ವಾಸ ಮತ್ತು ಪ್ರೇರಣೆಯೊಂದಿಗೆ ಶಿಕ್ಷಣದಲ್ಲಿ ಕಲೆಯ ಏಕೀಕರಣವನ್ನು ಅನ್ವೇಷಿಸಲು ಸಹಾಯ ಮಾಡಿತು ಎನ್ನುತ್ತಾರೆ ರೇವತಿ.

ಈ ಯೋಜನೆಯ ಕಲೆ ಆಧಾರಿತ ಶಿಕ್ಷಣದ ಚಟುವಟಿಕೆಗೆ 5 ರಿಂದ 10 ವರ್ಷ ಒಳಗಿನ 110 ಮಕ್ಕಳು ಹಾಗೂ ಸಾಂಸ್ಕೃತಿಕ ತಂಡದಲ್ಲಿ 10 ರಿಂದ 16 ವರ್ಷ ಒಳಗಿನ 35 ಮಕ್ಕಳು ಮತ್ತು ಕಲಾ ಪ್ರದರ್ಶನಕ್ಕೆ 7 ವಿದ್ಯಾರ್ಥಿ ಕಲಾವಿದರನ್ನು ತೊಡಗಿಸಿಕೊಂಡಿದ್ದಾರೆ.

ಮೂರು ವಾರಗಳ ಚಿತ್ರಕಲಾ ಕಾರ್ಯಾಗಾರವನ್ನು ನಡೆಸುವುದರ ಜೊತೆಗೆ, ಪ್ರದರ್ಶನ ಆಧಾರಿತ ಕಲೆಗಳಾದ ಪರಾಯಿ ಮತ್ತು ಕುಂಬಮ್ ಗಾಗಿಯೂ ಮೂರುವಾರಗಳ ಕಾರ್ಯಾಗಾರ ನಡೆಸಲಾಯಿತು.

ಒಟ್ಟು ಚಟುವಟಿಕೆಯನ್ನು ಕಲಾಂತರ್ಗತ ಬದುಕಿನ ಅಲೆಮಾರಿ ಬುಡಕಟ್ಟು ಸಮುದಾಯಗಳ ಇತಿಹಾಸವನ್ನು ದಾಖಲಿಸಿಕೊಳ್ಳುವ ಯೋಚನೆ ನಮ್ಮದಾಗಿದೆ.
– ರೇವತಿ

ಈ ಕಾರ್ಯಾಗಾರಗಳು ಮಕ್ಕಳು ತಂಡವಾಗಿ ಕಾರ್ಯನಿರ್ವಹಿಸಲು ಮತ್ತು ಕಲಾಕೃತಿಗಳನ್ನು ರಚಿಸಲು ಮತ್ತು ಅರ್ಥಮಾಡಿಕೊಳ್ಳಲು ನೆರವಾಯಿತು. ಮಕ್ಕಳ ರಚನೆಯ ಕಲಾಕೃತಿಗಳನ್ನು ಕಲಾವಿದರ ಕಲಾಕೃತಿಗಳ ಜೊತೆಗೆ ಪ್ರದರ್ಶಿಸಿದ್ದು, ಮಕ್ಕಳಲ್ಲಿ ಅಪಾರ ಆತ್ಮವಿಶ್ವಾಸ ಮೂಡಿಸಿತು. ಈ ಪ್ರಕ್ರಿಯೆ ಮಕ್ಕಳು ತಮ್ಮನ್ನು ತಾವು ಅರಿಯುವುದರ ಜೊತೆಗೆ ತಮ್ಮಂತವರ ಬಗ್ಗೆ ಉಳಿದವರೂ ತಿಳಿದುಕೊಳ್ಳಲಿ ಎಂಬ ಭಾವನೆ ಹುಟ್ಟುಹಾಕಿತು.

ಯೋಜನೆಯ ಭಾಗವಾಗಿ ವನವಿಲ್ ಶಾಲೆಯ ಶಿಕ್ಷಕರು ಅಸುಪಾಸಿನ ಜೌಗು ಪ್ರದೇಶಗಳು, ಮೀನುಗಾರಿಕೆ ಬಂದರುಗಳು ಮತ್ತು ಸುತ್ತಮುತ್ತಲಿನ ಹಳ್ಳಿಗಳಿಗೆ ಬೇಟಿ ನೀಡಿ ಸಸ್ಯ ಮತ್ತು ಪ್ರಾಣಿಗಳ

Vanavil trust organises art show in Nagapattinam

The Hindu Bureau
NAGAPATTINAM

Vanavil School, run by a not-for-profit trust and India Foundation for the Arts, organised 'The Nomad,' a collaborative art show of eminent artists and children of nomadic communities at Sikkal in Nagapattinam district on Friday.

Additional Collector (Development) and Project Director of District Rural Development Agency Ranjeet Singh inaugurated the art show at the school premises in Keezhakaraiyirupu village near Sikkal. The school has been functioning for over 18 years for marginalised nomadic communities such as the Adiyans, who were traditionally the Boom Boom Maatukarars, and the Narikuravars.

Additional Collector Ranjeet Singh at the art show held at Sikkal in Nagapattinam district on Friday. SPECIAL ARRANGEMENT

The three-day show will bring together artists and students to discuss and learn various performing arts, paintings, photography, and documentary filmmaking, said K. Natarajan, the Art teacher. Students showcased the artworks and paintings during the show and performed Parai.

Organising such art shows is a part of performance-based pedagogy in the school that would help the students to learn quickly, he added.

ಬಗ್ಗೆ ಸಂಶೋಧನೆ ನಡೆಸಿದರಲ್ಲದೆ, ತಮ್ಮದೇ ಆದ ರೀತಿಯಲ್ಲಿ ಕಲಾಂತರ್ಗತ ಪಠ್ಯಗಳನ್ನು ರಚಿಸಿದರು. ಕಲೆ ಮತ್ತು ಕಲಾವಿದ ಅಲೆಮಾರಿ ಬುಡಕಟ್ಟು ಸಮುದಾಯಗಳ ಜೀವನವನ್ನು ಆಧರಿಸಿದ ಪಠ್ಯಗಳ ಮುಖೇನ ಮಕ್ಕಳು ತಮ್ಮ ಅನುಭವಗಳನ್ನು ಕಲೆಯಾಗಿ ಹೊರತಂದರೆ, ಕಲಾವಿದರು ಅಲೆಮಾರಿ ಸಮುದಾಯಗಳ ಬಗ್ಗೆ ತಮ್ಮ ದೃಷ್ಟಿಕೋನವನ್ನು ಬಿಂಬಿಸಿದರು. ನಿಮ್ಮ ಯೋಜನೆಯಲ್ಲಿ ಸ್ಥಳೀಯ ಸಂಪನ್ಮೂಲ ಬಳಕೆ ಮತ್ತು ಕ್ರೋಢೀಕರಣವನ್ನು ನೀವು ಹೇಗೆ ನಡೆಸಿದ್ದೀರಿ ಮತ್ತು ಅದರ ಸೇರ್ಪಡೆಯ ಬಗ್ಗೆ ನಿಮ್ಮ ಶಾಲೆಗಳ ಯೋಜನೆ ಏನು?

ಅಲೆಮಾರಿ ಬುಡಕಟ್ಟು ಸಮುದಾಯಗಳೊಂದಿಗೆ ಕೆಲಸ ಮಾಡುವ ನಮ್ಮ ಶಾಲೆ ಕಲೆಗಳು ಮತ್ತು ಪ್ರದರ್ಶನಗಳನ್ನು ಗೌರವಿಸುತ್ತದೆ. ಕಾರ್ಯಕ್ರಮ ಪ್ರದರ್ಶನದ ದಿನದಂದು ನಾವು ಸಮುದಾಯದ ಜನರಿಂದಲೇ ಅವರ ಸಂಗೀತವನ್ನು ಪ್ರದರ್ಶಿಸಲಾಗಿತ್ತು. ಒಟ್ಟು ಯೋಜನೆ ನಮ್ಮ ಶಾಲಾ ಮಕ್ಕಳಿಗೆ, ಶಿಕ್ಷಕರಿಗೆ, ಪೋಷಕರಿಗೆ ಕಲಿಕೆಯ ವಿವಿಧ ಸಾಧ್ಯತೆಗಳನ್ನು ಪರಿಚಯಿಸಿದೆ.

ಭಾಷಾ ದಾಖಲೀಕರಣ ಮತ್ತು ಆಪ್ತ ಕಲಿಕೆ

ಸಿ.ಡಿ.ಸಿ, ಮಧ್ಯಪ್ರದೇಶ
utkarshgarhi@gmail.com

ಏಕ ಭಾಷಾ ನೀತಿಯ ಅಳವಡಿಕೆಯಿಂದ ಅದೇಷ್ಟೋ ಸ್ಥಳೀಯ ಭಾಷೆಗಳು ಅಳಿವಿನ ಹಾದಿಗೆ ಜಾರುತ್ತಿವೆ. ಇದು ಮಕ್ಕಳ ಕಲಿಕೆಯ ಮೇಲೆಯೂ ಪ್ರಭಾವ ಬೀರುತ್ತದೆ. ಪರಿಚಯವೇ ಇಲ್ಲದ ಭಾಷೆಯ ಮೂಲಕವೇ ಮಗುವಿನ ಕಲಿಕೆಯೂ ಪ್ರಾರಂಭವಾಗುವುದರಿಂದ ಬಹುಪಾಲು ಮಕ್ಕಳು ಸ್ವಾಭಾವಿಕ ಕಲಿಕಾ ಅಭ್ಯಾಸದಿಂದ ಹಿಂದುಳಿಯುತ್ತಿದ್ದಾರೆ. ಇಂತಹ ಸಮಸ್ಯೆಗೆ ಮಧ್ಯಪ್ರದೇಶದ ಬಾಲಘಾಟ್ ಜಿಲ್ಲೆಯ ಗಂಟಿ ಗ್ರಾಮದಲ್ಲಿ 'ಉತ್ಕರ್ಷ ವಿದ್ಯಾಲಯ' ಎಂಬ ಸಂಸ್ಥೆ ಪರಿಹಾರವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದೆ.

2004ರಲ್ಲಿ ನಿವೃತ್ತ ಶಿಕ್ಷಕರಾದ ಶ್ರೀಮತಿ ಚಾಲ್ಸ್‌ರವರಿಂದ ಸ್ಥಾಪನೆಯಾದ ಈ ಸಂಸ್ಥೆ ಆರು ಮಕ್ಕಳಿಂದ ಪ್ರಾರಂಭವಾಗಿ ಪ್ರಸ್ತುತ 180 ಮಕ್ಕಳಿಂದ ಒಂಬತ್ತನೇ ತರಗತಿಯವರೆಗೂ ನಡೆಯುತ್ತಿದೆ. ಲಾಭರಹಿತವಾಗಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಕನಸನ್ನು ಈ ಸಂಸ್ಥೆ ಹೊಂದಿದೆ.

ಸಾಮಾನ್ಯವಾಗಿ ಗಂಟಿ ಗ್ರಾಮದ ಸುತ್ತಮುತ್ತ 'ಗೊಂಡಿ ಮತ್ತು ಬೈಗಾ' ಸಮುದಾಯದವರು ಹೆಚ್ಚಾಗಿ ಕಾಣಿಸುತ್ತಾರೆ. ಇವು ಆದಿವಾಸಿ ಸಮುದಾಯಗಳು. ತಮ್ಮದೇ ಆದ ಭಾಷೆಯನ್ನು ಹೊಂದಿದ್ದು, ಅದು ತೆಲುಗು ಮಿಶ್ರಿತ ಹಿಂದಿ ಆಗಿದೆ. ಇದನ್ನು 'ಗೊಂಡಿ ಭಾಷೆ' ಎಂದೇ ಕರೆಯಲಾಗುತ್ತಿದೆ. ಈ ಸಂಸ್ಥೆಯು ತನ್ನ ವ್ಯಾಪ್ತಿಗೆ ಬರುವ ಆದಿವಾಸಿ ಸಮುದಾಯದ ಮಕ್ಕಳಲ್ಲಿ ಸ್ಥಳೀಯ ಭಾಷೆಯ ಸೊಗಡನ್ನು ಉಳಿಸುವುದರ ಜೊತೆಯಲ್ಲಿ ಹಿಂದಿ ಮತ್ತು ಇಂಗ್ಲಿಷ್ ಭಾಷೆಯನ್ನು ಕಲಿಸುವ ಕಾರ್ಯ ಸಮುದಾಯದೊಂದಿಗೆ ನಡೆಸುತ್ತಿದೆ. ಮಕ್ಕಳಿಗೆ ಮಾತೃ ಭಾಷೆಯಿಂದ ಇತರ ಭಾಷೆಗಳನ್ನು ಕಲಿಸುವ ನಿಟ್ಟಿನಲ್ಲಿ ಸಂಸ್ಥೆಯು ಗೊಂಡಿ ಭಾಷೆಯ ಶಬ್ದಕೋಶ ರಚಿಸುತ್ತಿದೆ. ಇದರಲ್ಲಿ ಪ್ರಾಥಮಿಕವಾಗಿ ಬಳಸುವಂತಹ ಗೊಂಡಿ ಭಾಷಾ ಪದಗಳನ್ನು ಹಿಂದಿ ಮತ್ತು ಇಂಗ್ಲಿಷ್

ಅರ್ಥಗಳೊಂದಿಗೆ, ಉಚ್ಚಾರಣೆಗಳೊಂದಿಗೆ ವಿವರಿಸಲಾಗಿದೆ. ಇವು ಕೇವಲ ಪದಕೋಶಗಳಿಗೆ ಸೀಮಿತವಾಗಿರದೆ ಮುಂದೆ ಕಥೆಗಳಲ್ಲಿಯೂ ಪಾಠೋಪಕರಣಗಳ ತಯಾರಿಕೆಯಲ್ಲಿಯೂ ಸಂಸ್ಥೆ ಇಂತಹ ಪ್ರಯೋಗಗಳನ್ನು ಮಾಡುತ್ತಿದೆ.

ಸ್ಥಳೀಯ ಹಬ್ಬ ಹರಿದಿನಗಳ ಸಾಂಪ್ರದಾಯಿಕತೆಯ ಬಗ್ಗೆ ಚರ್ಚಿಸುವುದು, ಸ್ಥಳೀಯ ವಾದ್ಯ ಸಂಗೀತಗಳ ಅಧ್ಯಯನ ಮಾಡುವುದು ಸಹ ಈ ಶಾಲೆಯ ಚಟುವಟಿಕೆಗಳಲ್ಲಿ ಸೇರಿವೆ. ಇದರಿಂದ ಮಕ್ಕಳಲ್ಲಿ ಆತ್ಮವಿಶ್ವಾಸದ ಜೊತೆಗೆ ಸಕಾರಾತ್ಮಕತೆ ಬೆಳೆಯಲು ಸಾಧ್ಯವಾಗುತ್ತಿದೆ. ಚಿತ್ರಕಲೆ, ಪ್ರಬಂಧ, ಸಣ್ಣ ಕಥೆಗಳ ಮೂಲಕ ಸ್ಥಳೀಯ ಆಚರಣೆಗಳನ್ನು ಮಕ್ಕಳು ಪ್ರದರ್ಶಿಸಲು ಅವಕಾಶ ನೀಡುತ್ತಿದೆ. ಈ ಸಮುದಾಯಕ್ಕೆ ಸಂಬಂಧಿಸಿದ ಕಲೆಗಳನ್ನು ಶಾಲೆಯ ಐದನೇ ತರಗತಿಯ ಮಕ್ಕಳಿಂದ ಒಂಬತ್ತನೇ ತರಗತಿಯ ಮಕ್ಕಳವರೆಗೆ ಕಲಿಸುವ ಯೋಜನೆಯನ್ನು ಐ.ಎಫ್.ಎ. ನೆರವಿನಲ್ಲಿ ಹಾಕಿಕೊಂಡಿದ್ದಾರೆ. ಕರ್ಮ, ದಾದ್ರಿಯ, ಸೈಲ ಮುಂತಾದ ಜನಪದ ಹಾಡುಗಳ ಸಂಕಲನ ಹೊರತರುವುದರ ಜೊತೆಗೆ ಸಮುದಾಯದ ವಾದ್ಯ ಸಂಗೀತದ ಲಭ್ಯತೆ ತಯಾರಿಕೆಗಳಿಗೆ ಪ್ರೋತ್ಸಾಹ ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಸಮುದಾಯದ ಕಲೆಯನ್ನು ಕಲಿತ ಮಕ್ಕಳಿಂದ ಆಡಿಯೋ ವಿಡಿಯೋ ದಾಖಲೀಕರಣ ಮಾಡುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

ಹೆಜ್ಜೆಗಳು

ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಪ್ರಯೋಗಗಳು

2019–20 : 2022–23

ಕಲಿ-ಕಲಿಸು

ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಪ್ರಯೋಗಗಳು 2021–22

ಮಕ್ಕಳ ಕಲಿಕೆಗೆ ವಂಶವೃಕ್ಷದ ಸಾಥ್!

ಸೋಮಪ್ಪ ಕುದರಿಹಾಳ
ಸಹಶಿಕ್ಷಕರು
ಸರ್ಕಾರಿ ಹಿರಿಯ
ಪ್ರಾಥಮಿಕ ಶಾಲೆ
ಲಕ್ಷ್ಮೀ ಕ್ಯಾಂಪ್ ಕುಂಟೋಜಿ
ಗಂಗಾವತಿ
9035981798

ವಂಶವೃಕ್ಷ ಎಂಬುದು ನಾಡಿನ ಹೆಳವರ ಜನಾಂಗವೊಂದರ ಸಾಂಸ್ಕೃತಿಕ, ಜನಪದೀಯ ಆಚರಣೆಯಾಗಿದೆ. ವಿದ್ಯಾರ್ಥಿಗಳು ಹೆಳವರ ಜನಪದ ಸಂಸ್ಕೃತಿಯನ್ನು ಪರಿಚಯ ಮಾಡಿಕೊಳ್ಳುವುದರ ಜೊತೆಗೆ ಕುಟುಂಬದ ಕಲ್ಪನೆ, ವಂಶವೃಕ್ಷದ ಪರಿಕಲ್ಪನೆ, ಸಮೀಕ್ಷೆಗಳ ಅರ್ಥ, ಪಠ್ಯಾಂಶಗಳು ಯೋಜನೆಯಲ್ಲಿ ಸೇರಿಸಿಕೊಂಡು ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಲಕ್ಷ್ಮೀ ಕ್ಯಾಂಪ್ ಕುಂಟೋಜಿಯಲ್ಲಿ ಶಿಕ್ಷಕರಾಗಿರುವ ಸೋಮಪ್ಪ ಕುದುರಿಹಾಳ 'ವಂಶವೃಕ್ಷ ಅಧ್ಯಯನ' ಆರಂಭಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಪಠ್ಯ ವಿಷಯದ ಜೊತೆಗೆ ಸಮುದಾಯಕ್ಕೆ ಸಂಬಂಧಿಸಿದ ವಿಷಯದ ಕಲಿಕೆ ಮಾಡಿಸುತ್ತಿರುವುದು ಶ್ಲಾಘನೀಯವಾದುದು. ನಮಗೂ ಮೂರು ತಲೆಮಾರಿನ ಹೆಸರು ಮಾತ್ರ ಗೊತ್ತು. ಈ ಮಕ್ಕಳಿಗೆ ಅದು ಕೂಡ ಗೊತ್ತಿಲ್ಲ. ಮಕ್ಕಳಿಗೆ ಇದರಿಂದ ನೆನಪು ಉಳಿಯುತ್ತದೆ.

– ಹನುಮಮ್ಮ
ಲಕ್ಷ್ಮೀ ಕ್ಯಾಂಪ್ ಕುಂಟೋಜಿ

ಶಾಲೆಗೆ ಹೆಳವರು ಬಂದು ತಾವು ಹಾಗೂ ತಮ್ಮ ಹಿರಿಯರು ಅನಾದಿ ಕಾಲದಿಂದಲೂ ದಾಖಲಿಸುತ್ತಾ ಬಂದಿರುವ ಹೆರುಗಳ ಕಡತಗಳು ತೋರಿಸಿ ತಮ್ಮ ಸಂಪ್ರದಾಯ, ಆಚರಣೆ, ಸಂಸ್ಕಾರಗಳು, ಜನಪದ ಸಂಸ್ಕೃತಿ, ಹೆಳವರ ಭಾಷೆ, ವೇಷ ಭೂಷಣ, ತಮ್ಮ ಜೀವನ ಶೈಲಿಯನ್ನು ಪರಿಚಯ ಮಾಡಿಸುತ್ತಿದ್ದಾರೆ.

ಈ ಮಕ್ಕಳು ತೆಲುಗು ಮಾತೃ ಭಾಷಿಕ ಮಕ್ಕಳಾಗಿರುವುದರಿಂದ ಹೆಳವರ ಭಾಷಾ ಹಿನ್ನೆಲೆಯಲ್ಲಿ ಅಸ್ಪಲಿತ ಮಾತುಗಾರಿಕೆಯನ್ನು ಸುಲಭವಾಗಿ ಅರ್ಥ ಮಾಡಿಕೊಂಡು ಸಂತಸದಿಂದ ರೂಢಿಸಿಕೊಳ್ಳುತ್ತಿದ್ದಾರೆ.

ತಮ್ಮಲ್ಲಿ ಕಂಡುಬರುವ ಜೈವಿಕ ಸಾಮ್ಯತೆ ಮತ್ತು ಕೌಟುಂಬಿಕ ವಿಶೇಷತೆಗಳನ್ನು ತಿಳಿದು ಅಚ್ಚರಿ ಪಡುತ್ತಿದ್ದಾರೆ. ಅದಷ್ಟೇ ಅಲ್ಲದೆ ರಾಜ ಮಹಾರಾಜರ, ಗಣ್ಯರ ವಂಶವೃಕ್ಷಗಳನ್ನು ಮಕ್ಕಳು ಸರಳವಾಗಿ ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಇನ್ನೂ ಮಕ್ಕಳು ಹೆಳವರ ಶೈಲಿಯಲ್ಲಿ ಪಠ್ಯದಲ್ಲಿ ಇರುವ ಕಥೆಗಳನ್ನು ವೇದಿಕೆ ಮೇಲೆ ಅಭಿನಯಿಸಿ ಪಠ್ಯವನ್ನು ತಾವು ಅಧ್ಯಯನ ಮಾಡುವ ಜೊತೆಯಲ್ಲಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಕಲಿಕೆಗೆ ಸಾಥ್ ನೀಡುತ್ತಿದ್ದಾರೆ.

ಮಲೆಗಳ ಸೌಂದರ್ಯ ಅಂದು ಇಂದು

ರಂಗನಾಥ ಎಸ್.ಆರ್
ಶಿಕ್ಷಕರು
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುದುರೆಗುಂಡಿ
ಕೊಪ್ಪ ತಾಲೂಕು
9448674402

ವಿದ್ಯಾರ್ಥಿಗಳಿಗೆ ತಮ್ಮ ಸುತ್ತಲಿನ ಪರಿಸರದ ಅರಿವಿನ ಜೊತೆಗೆ ಗ್ರಾಮದ ಭೌಗೋಳಿಕ ಪರಿಸರ, ಪ್ರಕೃತಿಯ ಸೌಂದರ್ಯ, ಸಾಂಪ್ರದಾಯಿಕ ಆಚರಣೆಗಳು, ಬೆಳೆಗಳು, ಆಹಾರಗಳ ಬಗ್ಗೆ ತಿಳಿಸುವುದಕ್ಕಾಗಿ ಕೊಪ್ಪ ತಾಲೂಕಿನ ಕುದುರೆಗುಂಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ರಂಗನಾಥ ಅವರು 'ಮಲೆಗಳಲ್ಲಿ ಮದುಮಗಳು ಕಲಾ ಸಮ್ಮಿಳಿತ ಕಲಿಕೆ' ಎಂಬ ಯೋಜನೆಯನ್ನು ಮಕ್ಕಳ ಪಠ್ಯಕ್ಕೆ ಪೂರಕವಾಗಿ ಹಮ್ಮಿಕೊಂಡಿದ್ದಾರೆ.

ಮಲೆನಾಡಿನ ಇಳಿಜಾರಿನ ಕಾಡು, ಹಸಿರು ಬೆಟ್ಟ, ಬಗೆ ಬಗೆ ಹಣ್ಣುಗಳು, ಹೂವುಗಳು, ಇಂಪಾಗಿ ಕೂಗುವ ಹಕ್ಕಿಗಳು, ಭಯ ಹುಟ್ಟಿಸುವಂತಹ ಪ್ರಾಣಿಗಳು, ಓಡುವ ಮೋಡಗಳು ಇಂತಹ ಸುಂದರವಾದ ವಾತಾವರಣ ಕಲಾ ಸಮ್ಮಿಳಿತ ಕಲಿಕೆಗೆ ಪೂರಕ ವಾತಾವರಣ ನೀಡಿದ ಮಲೆನಾಡಿನಲ್ಲೇ ಬೆಳೆದಿರುವ ರಂಗನಾಥ, ತಾವು ಕಂಡಂತಹ ಬದಲಾವಣೆಗಳು ಸೇರಿದಂತೆ, ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವಂತಹ ಮಲೆನಾಡಿನ ಸೌಂದರ್ಯ ಮತ್ತು ಈಗ ಇರುವ ಮಲೆನಾಡಿನ ವಾಸ್ತವ ಸ್ಥಿತಿಗಳನ್ನು ಸಮೀಕರಿಸಿ ಮಕ್ಕಳಿಗೆ ಅಧ್ಯಯನ ಮಾಡಿಸುತ್ತಿದ್ದಾರೆ.

ಮನೆಯಲ್ಲಿ ನಿತ್ಯ ಬಳಸುತ್ತಿದ್ದ ವಸ್ತುಗಳು ಮ್ಯೂಸಿಯಂ ಪೀಸ್‌ಗಳಾಗಿ ಬದಲಾವಣೆಯಾಗುವುದರ ಬಗ್ಗೆ ಮಕ್ಕಳಿಗೆ ವಿವರಿಸಿದ್ದಾರೆ. ಕುದುರೆಗುಂಡಿ ಶಾಲೆಯ ಮಕ್ಕಳು ಹಳೆಯ, ಸಾಂಪ್ರದಾಯಿಕ ವಸ್ತುಗಳನ್ನು ಊರೂರು ತಿರುಗಿ ಸಂಗ್ರಹಿಸಿ ಪ್ರದರ್ಶಿಸಿದ್ದಾರೆ. ಮರಗಳು, ಹಣ್ಣುಗಳ ಬಗ್ಗೆ ತಿಳಿದವರಿಂದ ಮಾಹಿತಿ ಪಡೆಯುತ್ತಿದ್ದಾರೆ. ಹಿರಿಯರಿಂದ ಮಲೆನಾಡಿನ ಅನುಭವಗಳನ್ನು ಸಂಗ್ರಹಿಸಿದ್ದಾರೆ. ಸಮುದಾಯದವರು ತಮ್ಮ ಕಾಲದ ವಸ್ತುಗಳನ್ನು ಆಚರಣೆಗಳನ್ನು ಖಾದ್ಯಗಳನ್ನು ಪ್ರೀತಿಯಿಂದ ಮಕ್ಕಳ ಜೊತೆ ಹಂಚಿಕೊಳ್ಳುತ್ತಿದ್ದಾರೆ.

ಕಾದಂಬರಿಯಲ್ಲಿ ಬರುವಂತಹ ಊರುಗಳಿಗೆ ಭೇಟಿ ನೀಡಿದ್ದಾರೆ. ಆರನೇ ಮತ್ತು ಏಳನೇ ತರಗತಿಯ ಮಕ್ಕಳಿಂದ ಅವರ ಅನುಭವಗಳನ್ನು, ಪ್ರಕೃತಿಯ ವರ್ಣನೆಯನ್ನು ಲೇಖನ ರೂಪದಲ್ಲಿ ಬರೆದು ಪುಸ್ತಕ ಹೊರತರುವ ನಿರೀಕ್ಷೆಯಲ್ಲಿದ್ದಾರೆ.

ಶಿಕ್ಷಕರು ಇಲ್ಲಿ ಕಾದಂಬರಿಯ ಕಾಲದಲ್ಲಿನ ಹಳ್ಳಿಗಳು ಮತ್ತು ಈಗಿನ ಹಳ್ಳಿಗಳ ವ್ಯತ್ಯಾಸವನ್ನು ಕಂಡುಕೊಳ್ಳಲು ಮಕ್ಕಳಿಗೆ ಸಹಾಯಕರಾಗಿದ್ದಾರೆ.

ಮೂಡಲಪಾಯ ಕಲೆಯ ಪುನಶ್ಚೇತನ ಮತ್ತು ಕಲಿಕೆ

ಕೆ.ಎಂ. ಗುರುಪ್ರಸಾದ
ಸಹಶಿಕ್ಷಕರು,
ಕರ್ನಾಟಕ ಪಬ್ಲಿಕ್ ಶಾಲೆ
ಹಂಗಳ ತಾ॥ ಗುಂಡ್ಲುಪೇಟೆ
ಜಿ॥ ಚಾಮರಾಜನಗರ
9731319160

ಮೂಡಲಪಾಯ ಯಕ್ಷಗಾನ ಕಲಾಪ್ರಕಾರ ಪುನಶ್ಚೇತನಗೊಳಿಸುವುದರ ಜೊತೆಗೆ ಈ ಕಲೆಯನ್ನು ಪಠ್ಯಂತರ್ಗತ ಮಾಡುವುದರ ಮೂಲಕ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಹಂಗಳದ ಕರ್ನಾಟಕ ಪಬ್ಲಿಕ್ ಶಾಲೆಯ ಶಿಕ್ಷಕ ಗುರುಪ್ರಸಾದರವರು 'ಮೂಡಲಪಾಯ ಯಕ್ಷಗಾನದ ಪುನಶ್ಚೇತನ ಮತ್ತು ಕಲಿಕೆ' ಎಂಬ ಯೋಜನೆ ಹಾಕಿಕೊಂಡಿದ್ದಾರೆ.

ಈ ಯೋಜನೆಯಲ್ಲಿ ವಿದ್ಯಾರ್ಥಿಗಳಿಂದ ಭಾಗವತಕ್ಕೆ ಹೆಜ್ಜೆ ಹಾಕುವುದನ್ನು ಅಭ್ಯಾಸ ಮಾಡಿಸುತ್ತ ಆರನೇ ತರಗತಿಯ ವಿದ್ಯಾರ್ಥಿಗಳನ್ನು ಪಠ್ಯಂಶದ ಜೊತೆಗೆ ಕಲಾಪ್ರಕಾರವನ್ನು ಸಮೀಕರಿಸುತ್ತಿದ್ದಾರೆ. ಶಾಲೆಗೆ ಕಾಡಂಚಿನಿಂದ, ಗುಡ್ಡಗಾಡಿನ ಪ್ರದೇಶಗಳಿಂದ ಅಧಿಕ ಸಂಖ್ಯೆಯಲ್ಲಿ ಮಕ್ಕಳು ಬರುತ್ತಾರೆ. ಇವರಲ್ಲಿ ಮಂಟೇಸ್ವಾಮಿ ಮತ್ತು ಮಲೆಮಹದೇಶ್ವರರ ಗುಡ್ಡದ ಮಕ್ಕಳು ಸೇರಿದ್ದಾರೆ.

ಈ ಮಕ್ಕಳಿಗೆ ಕಂಸಾಳೆ ಪದ, ಮಂಟೇಸ್ವಾಮಿ ಮತ್ತು ಮಹದೇಶ್ವರ ಕಾವ್ಯಗಳ ಜೊತೆಗೆ ಚರ್ಮ ವಾದ್ಯದ ಪರಿಚಯವೂ ಇದೆ. ಅಲ್ಲದೇ ಅನೇಕ ವಿದ್ಯಾರ್ಥಿಗಳ ಮನೆಯಲ್ಲಿ ಶಿವಕಥೆ ಮತ್ತು ಹರಿಕಥೆ ಹೇಳುವ ಕಲಾವಿದರು ಇದ್ದಾರೆ. ಇಂತಹ ಜನಪದ ಕಲಾಪರಂಪರೆ ಹೊಂದಿರುವ ವಿದ್ಯಾರ್ಥಿಗಳ ಕಲಿಕೆ ಮತ್ತಷ್ಟು ಗಟ್ಟಿಗೊಳಿಸಲು ಮೂಡಲಪಾಯ ಕಲಾ ಪ್ರಕಾರವನ್ನು ಗುರುಪ್ರಸಾದ ಆಯ್ಕೆ ಮಾಡಿಕೊಂಡಿದ್ದಾರೆ. ಕಲಾ ಸಂರಕ್ಷಣೆಯ ದೃಷ್ಟಿಯಿಂದ ಮೂಡಲಪಾಯ ಯಕ್ಷಗಾನಕ್ಕೆ ಸಂಬಂಧಿಸಿದ ಕಥಾ ಪ್ರಸಂಗಗಳ ಸಾಹಿತ್ಯವನ್ನು ಹೊಸದಾಗಿ ಬರೆದು ಮುದ್ರಿಸುವ ಯೋಜನೆ ಇವರದಾಗಿದೆ. ಸಮುದಾಯದ ಒಳಗೊಳ್ಳುವಿಕೆಯ ಜೊತೆಯಲ್ಲಿ ಸ್ಥಳೀಯ ಕಲಾವಿದರ ಸಹಕಾರದಿಂದ ಯೋಜನೆಯು ಅನುಷ್ಠಾನವಾಗಿದೆ. ಪ್ರಾರಂಭದಲ್ಲಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಆಸಕ್ತಿ ಮೂಡಿ, ಅವರ ಕಲಿಕಾ ಮಟ್ಟ, ಹಾಜರಾತಿ ಈಗ ಸುಧಾರಿಸಿದೆ. ಶಾಲೆಯ ಸಿಬ್ಬಂದಿ ಮತ್ತು ಪೋಷಕರ ಸಂಪೂರ್ಣ ಪ್ರೋತ್ಸಾಹವಿದ್ದು, ಬಿಡುವಿನ ಸಮಯದಲ್ಲಿ ತಾಲೀಮು ಮಾಡುತ್ತಾ ಕಲಿಕೆಯ ಹಿಮ್ಮಾಹಿತಿ ನೀಡುತ್ತಿರುತ್ತಾರೆ.

'ಮೂಡಲಪಾಯದ ಪರಿಚಯವಿರುವ ಮಕ್ಕಳಿಗೆ ತಾಳಗಳನ್ನು, ಹೆಜ್ಜೆಗಳನ್ನು ಕಲಿಸುವುದರ ಮೂಲಕ ಕಲಕೆಯನ್ನು ಹೇಗೆ ಅನುಷ್ಠಾನಗೊಳಿಸಬಹುದು ಎಂಬ ನನ್ನ ಯೋಜನೆಗೆ ಪ್ರೋತ್ಸಾಹ ದೊರೆತದ್ದು ಕಲಿಕಲಿಸು ಯೋಜನೆಯಿಂದ. ಮೂಡಲಪಾಯದ ಕುರಿತು ನಾನು ಸಾಕಷ್ಟು ಕಲಿತಿದ್ದೇನೆ, ನಮ್ಮ ಶಾಲಾ ಮಕ್ಕಳು ಕಲಿಯುತ್ತಿದ್ದಾರೆ.'

– ಕೆ.ಎಂ. ಗುರುಪ್ರಸಾದ

'ನಮ್ಮದೇ ದುಡ್ಡು ನಮ್ಮದೇ ಬ್ಯಾಂಕು'

ಪರಮೇಶ್ವರಯ್ಯ ಸೊಪ್ಪಿಮಠ
ಸಹಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಮಾಲವಿ
ಹರಪನಹಳ್ಳಿ ತಾಲೂಕು
ವಿಜಯನಗರ ಜಿಲ್ಲೆ
9341444865

ವಿದ್ಯಾರ್ಥಿಗಳಿಗೆ ಹಣದ ಮೌಲ್ಯ, ಬ್ಯಾಂಕ್ ವಹಿವಾಟು, ಲೆಕ್ಕಪತ್ರದ ಜೊತೆ ಉಳಿತಾಯದ ಮೌಲ್ಯ ತಿಳಿಸುವುದಕ್ಕಾಗಿ 'ನಮ್ಮದೇ ದುಡ್ಡು ನಮ್ಮದೇ ಬ್ಯಾಂಕು' ಯೋಜನೆಯನ್ನು ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಮಾಲವಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಪರಮೇಶ್ವರಯ್ಯ ಸೊಪ್ಪಿಮಠ ಹಾಕಿಕೊಂಡಿದ್ದರು.

ಶಾಲಾ ಮಕ್ಕಳೇ ವಾರಕ್ಕೊಮ್ಮೆಯಂತೆ ಸರದಿಯ ಪ್ರಕಾರ ಬ್ಯಾಂಕ್ ವ್ಯವಸ್ಥಾಪಕರಾಗಿ, ಗುಮಾಸ್ತರಾಗಿ ವ್ಯವಹಾರ ನಡೆಸುತ್ತಾರೆ. ಕೌಂಟರ್ ಮುಂದೆ ವಿದ್ಯಾರ್ಥಿಗಳು ಗ್ರಾಹಕರ ರೀತಿಯಲ್ಲಿ ಪಾಸ್‌ಬುಕ್ ಹಿಡಿದುಕೊಂಡು ನಿಂತು ಹಣ ಕಟ್ಟುತ್ತಾರೆ. ತಮಗೆ ಅವಶ್ಯವಿದ್ದಾಗ ಡ್ರಾ ಮಾಡಿಕೊಳ್ಳುತ್ತಾರೆ. ಹೀಗೆ ಈ ಬ್ಯಾಂಕಿನಲ್ಲಿ ಮಕ್ಕಳೇ ಗ್ರಾಹಕರು, ಮಕ್ಕಳೇ ಸಿಬ್ಬಂದಿ ಶಾಲಾ ವೇಳಾಪತ್ರಿಕೆಯಲ್ಲಿ ಬರುವ ವಾರದ ಒಂದು ನಿಗದಿತ ಅವಧಿಯಲ್ಲಿ ಈ ಬ್ಯಾಂಕ್ ಕಾರ್ಯಾರಂಭ ಮಾಡುತ್ತದೆ.

ಪಾಲಕರು ಈ ಕಾರ್ಯಕ್ಕೆ ಪ್ರೋತ್ಸಾಹ ನೀಡಿದರು. ಹಿರಿಯರು ಕೊಟ್ಟ ಕಾಸಿನಲ್ಲಿಯೇ ಬಿಡಿಗಾಸು ಉಳಿಸಿಕೊಂಡು ಮಕ್ಕಳು ಈ ಬ್ಯಾಂಕಿಗೆ ಕಟ್ಟುತ್ತಾರೆ.

ಮಕ್ಕಳಿಗೆ ಇಲ್ಲಿ ವ್ಯವಹಾರ ಜ್ಞಾನ ದೊರಕುವುದರ ಜೊತೆಗೆ ಸರಳ ಗಣಿತದ ಮೂಲಕ್ರಿಯೆಗಳು ಅವರಿಗೆ ಅರಿವಿಲ್ಲದಂತೆ ಕಲಿಕೆಯಾಗುತ್ತವೆ. ಅಲ್ಲದೆ ನನ್ನ ಖಾತೆ ನನ್ನ ಬ್ಯಾಂಕ್ ಎಂಬ ಅಭಿಮಾನ ಅವರಲ್ಲಿ ಬೆಳೆಯಲಾರಂಭಿಸಿತು. ಈ ವರ್ಷದಲ್ಲಿ ಈ ಚಿಣ್ಣರ ಬ್ಯಾಂಕ್ ರೂ. 1.5ಲಕ್ಷ ವ್ಯವಹಾರ ನಡೆಸಿದ್ದಾರೆ. ಹಣದ ಮೌಲ್ಯ, ಉಳಿತಾಯದ ಮೌಲ್ಯ ಕಲಿಸಿಕೊಡುವುದರ ಜತೆಗೆ ಬ್ಯಾಂಕ್ ಜ್ಞಾನ, ವ್ಯವಹಾರ, ಅನುಕೂಲತೆಗಳನ್ನು ಪರಿಚಯಿಸುವುದು ಈ ಯೋಜನೆಯ ಉದ್ದೇಶವಾಗಿತ್ತು.

ವಿದ್ಯಾರ್ಥಿಗಳು ಬ್ಯಾಂಕಿನಲ್ಲಿ ತಾವೇ ಫಾರ್ಮ ತುಂಬುವ ಮೂಲಕ ಭಾಷೆ ಮತ್ತು ಗಣಿತದ ಪಠ್ಯಂಶಗಳನ್ನು ಸ್ವತಃ ಕಲಿಯುತ್ತಿದ್ದಾರೆ. ಆದರೆ ಕಾರಣಾಂತರಗಳಿಂದ ಈ ಯೋಜನೆ ಸಂಸ್ಥೆಯಿಂದ ರದ್ದಾಯಿತು.

ಜನಪದ ಕಲಾ ಅಂತರ್ಗತ ಕಲಿಕೆ

ಸಿದ್ದಯ್ಯ ಮಠಪತಿ
ಸಮೂಹ ಸಂಪನ್ಮೂಲ ವ್ಯಕ್ತಿ
ಚಿಕ್ಕಹಂದಿಗೋಳ
ಗದಗ ತಾ॥ ಜಿ॥
9535013300

ಲಿಂಗ ತಾರತಮ್ಯವಿಲ್ಲದೆ ಜನಪದ ಕಲೆಯನ್ನು ಮೈತುಂಬಿಸಿಕೊಂಡ ಈ ಹಳ್ಳಿಯಲ್ಲಿ ಅನೇಕ ಜನಪದ ಕಲಾವಿದರಿದ್ದಾರೆ. ಸೋಬಾನೆ ಪದ, ಲಾವಣಿ ಪದ, ಹೋಳಿ ಹಬ್ಬದ ಹಾಡುಗಳು, ಗೀಗಿ ಪದ, ರಿವಾಯತ್ ಪದ, ಬಿಸುಕಲ್ಲಿನ ಪದ, ಹಂತಿ ಪದಗಳು ಲಾಲಿತ್ಯ ಎದ್ದು ಕಾಣುತ್ತದೆ.

ಈ ಹಿನ್ನೆಲೆ ಇಟ್ಟುಕೊಂಡು ಗದಗ ತಾಲೂಕಿನ ಹುಲಕೋಟಿ ಗ್ರಾಮದ ಚಿಕ್ಕಹಂದಿಗೋಳದ ಸಮೂಹ ಸಂಪನ್ಮೂಲ ವ್ಯಕ್ತಿ ಸಿದ್ದಯ್ಯ ಮಠಪತಿಯವರು ಈ ಸಾಹಿತ್ಯ ಮಕ್ಕಳಿಗೆ ತಲುಪುವಂತಾಗಲು ಈ ಎಲ್ಲ ಕಲಾವಿದರನ್ನೇ ಶಾಲೆಗೆ ಕರೆ ತಂದಿದ್ದಾರೆ. ಈ ಕಲಾವಿದರಲ್ಲಿ ಇರುವಂತಹ ಮೌಖಿಕ ಸಂಪನ್ಮೂಲವನ್ನು ತರಗತಿಯ ಪಠ್ಯದೊಂದಿಗೆ ಸಂಯೋಜಿಸುವುದರ ಜೊತೆಗೆ, ಶಿಕ್ಷಕರನ್ನು ಮತ್ತು ಕಲಾವಿದರನ್ನು ಶಾಲೆಗಳಲ್ಲಿ ಸಂಯೋಜಿಸುವ ಕಾರ್ಯವನ್ನು ಮಾಡುತ್ತಿದ್ದರು. ಜನಪದ ಶೈಲಿಯ ವಿವಿಧ

> ಈ ಪ್ರಯೋಗವು ಕೇವಲ ಕಲಾ ಅಂತರ್ಗತವಾಗಿರದೆ ವಿದ್ಯಾರ್ಥಿಗಳು ಜಾನಪದ ಸಂಸ್ಕೃತಿಯನ್ನು ಅನುಸರಿಸುವಂತೆ ಮಾಡುವುದಾಗಿದೆ.
> – ಸಿದ್ದಯ್ಯ ಮಠಪತಿ

ಪ್ರಕಾರದ ಹಾಡುಗಳ ಸಾಹಿತ್ಯ ಮತ್ತು ಹಾಡುಗಾರಿಕೆಯ ಮೂಲಕ ಮಕ್ಕಳಿಗೆ ಪಠ್ಯ ಸಂಬಂಧಿತ ವಿಷಯಗಳನ್ನು ತಿಳಿಸಲು ಚಿಕ್ಕಹಂದಿಗೋಳ ಶಾಲೆಯನ್ನು ಕೇಂದ್ರವಾಗಿಸಿಕೊಂಡು ಐದನೇ ತರಗತಿಯ ಮಕ್ಕಳನ್ನು ಈ ಪ್ರಯೋಗಕ್ಕೆ ಒಳಪಡಿಸಿಕೊಂಡಿದ್ದರು.

'ಕನ್ನಡ ನಾಡಿನ ಪುಣ್ಯಭೂಮಿಯೊಳ
ಜನಿಸ್ಯಾರ ಮಹಾ ಮಹಾ ವೀರರ'

ಎಂದು ಹಾಡುತ್ತಾ ಕನ್ನಡ ಮತ್ತು ಸಮಾಜ ವಿಜ್ಞಾನದ ಪಾಠಗಳನ್ನು ಮಕ್ಕಳು ಕಲಿಯುತ್ತಿದ್ದರು. ಪಠ್ಯಕ್ಕೆ ಸಂಬಂಧಿಸಿದಂತೆ ಜನಪದ ಹಾಡುಗಳನ್ನು ಸಂಗ್ರಹಿಸಿ ಅವುಗಳಲ್ಲಿ ಇರುವ ವಸ್ತು ವಿಷಯಕ್ಕೂ ಪಠ್ಯವಸ್ತುವಿಗೂ ಅಂತರ್ಗತಗೊಳಿಸಿ ಬೋಧನೆ ನಡೆಸುತ್ತಿದ್ದರು. ವಿವಿಧ ಪ್ರಕಾರದ ಜನಪದ ಶೈಲಿಯ ಹಾಡುಗಳನ್ನು, ಮಕ್ಕಳಿಗೆ ಪಠ್ಯ ವಿಷಯವನ್ನು ಪರಿಚಯಿಸುವ ಯೋಜನೆಯನ್ನು ಹಮ್ಮಿಕೊಂಡಿದ್ದರು. ಅವರಲ್ಲಿ ಸ್ವಾತಂತ್ರ್ಯ ಹೋರಾಟಗಾರರು, ಕುಟುಂಬದ ಸಂಬಂಧ, ಹಳೆ ಕಾಲದಲ್ಲಿ ಬಳಸುತ್ತಿದ್ದ ವಸ್ತುಗಳು, ಕೃಷಿ, ಜನಪದ ಆಚರಣೆಗಳು, ಕುಲಕಸುಬುಗಳು, ರಾಜಮನೆತನಗಳು, ವಿವಿಧ ಧರ್ಮಗಳಲ್ಲಿನ ಆಚರಣೆಗಳ ಬಗ್ಗೆ ಸಿದ್ದಯ್ಯ ಮಠಪತಿಯವರು ಅಂತರ್ಗತಗೊಳಿಸಿದ್ದರು.

ರಾಮನಗರ ತಾಲ್ಲೂಕಿನ ಬೆಟ್ಟಗುಡ್ಡಗಳ ಪರಿಚಯ

ಡಾ.ಎಂ.ಬೈರೇಗೌಡ
ಕಲಾವಿದರು,
ಜನಪದ ಸಂಶೋಧಕರು
9448102158

ಪರಿಸರದೊಂದಿಗಿನ ಒಡನಾಟ ನಮ್ಮೊಳಗಿನ ಕುತೂಹಲಗಳನ್ನು ತೆರೆದಿಡುತ್ತಾ ಸಾಗುತ್ತದೆ, ಇದು ಯಾಕೆ ಕಲಿಕೆಯ ಭಾಗವಾಗಬಾರದು ಎನ್ನುವ ಪ್ರಶ್ನೆಗೆ ಉತ್ತರವಾಗಿ ಹುಟ್ಟಿಕೊಂಡ ಯೋಜನೆ 'ರಾಮನಗರ ತಾಲ್ಲೂಕಿನ ಬೆಟ್ಟಗುಡ್ಡಗಳ ಪರಿಚಯ'.

ಕಲಾವಿದರಾಗಿ, ಜಾನಪದಸಂಶೋಧಕರಾಗಿ ಗುರುತಿಸಿಕೊಂಡಿರುವ ರಾಮನಗರ ಜಿಲ್ಲೆಯ ಕೆರೆಮೇಗಳದೊಡ್ಡಿಯವರಾದ ಡಾ.ಎಂ.ಬೈರೇಗೌಡರು ಅವ್ವೇರಹಳ್ಳಿ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಬೆಟ್ಟ ಗುಡ್ಡಗಳಲ್ಲಿ ದೊರೆಯಬಹುದಾದ ಸಸ್ಯ ಸಂಕುಲ, ಪ್ರಾಣಿ ಪ್ರಬೇಧಗಳು, ಮನುಷ್ಯ ಮತ್ತು ಕಾಡು ಬೆಟ್ಟ-ಗುಡ್ಡಗಳ ಜೊತೆಗಿನ ಸಂಬಂಧಗಳನ್ನು ತಿಳಿಸಿಕೊಟ್ಟಿದ್ದಾರೆ. ಬೆಟ್ಟಗುಡ್ಡಗಳಿಂದ ಆವೃತವಾಗಿರುವ ರಾಮನಗರದ ಏಕಶಿಲಾ ಬಂಡೆಯ ರೇವಣ ಸಿದ್ಧೇಶ್ವರ ಬೆಟ್ಟ, ನೆಲಮಲೆ ಬೆಟ್ಟ, ತೆಂಗಿನಕಲ್ಲು ಬೆಟ್ಟ, ಹುಲುಕೆರೆ ಬೆಟ್ಟ ಸಹಿತ ಹಲವು ಬೆಟ್ಟಗುಡ್ಡಗಳನ್ನು ಮಕ್ಕಳಿಗೆ ಪರಿಚಯಿಸಲಾಗಿದೆ. ಪ್ರವಾಸ, ನೃತ್ಯ ಸಂಗೀತ ಸಹಿತ ವಿವಿಧ

ಹೆಜ್ಜೆಗಳು

ಶಾಲಾ ಶಿಕ್ಷಕರು ನಮ್ಮೊಡನೆ ಒಳ್ಳೆಯ ಸಂಬಂಧವನ್ನು ಇರಿಸಿಕೊಂಡು ತಾವು ಎಲ್ಲ ಚಟುವಟಿಕೆಗಳಲ್ಲಿ ಪಾಲ್ಗೊಂಡು ಈ ಯೋಜನೆಯ ಮುಂದುವರಿದ ಭಾಗವಾಗಿ ನಡೆಸಿಕೊಂಡು ಹೋಗುವ ಭರವಸೆ ಮೂಡಿಸಿದ್ದಾರೆ.

– ಡಾ. ಎಂ. ಬೈರೇಗೌಡ

ರಂಗತಂತ್ರಗಳ ಮುಖೇನ ಸ್ಥಳೀಯ ವಿಚಾರ–ಮಾಹಿತಿಗಳಿಗೆ ಹಾಡು ನಾಟಕದ ರೂಪ ನೀಡಿ ಪ್ರದರ್ಶನ ನೀಡಿರುವುದು, ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಚಟುವಟಿಕೆಗಳ ಮುಖೇನ ಮಕ್ಕಳಲ್ಲಿ ತಿಳುವಳಿಕೆ ಮತ್ತು ಗ್ರಹಣ ಶಕ್ತಿ ವೃದ್ಧಿಯಾಗಿರುವುದನ್ನು ಶಾಲಾ ಶಿಕ್ಷಕರೇ ಗುರುತಿಸಿದ್ದಾರೆ. ನಮ್ಮ ಯೋಜನೆಯಿಂದ, ಎಲ್ಲ ವಿದ್ಯಾರ್ಥಿಗಳೂ ವೇದಿಕೆಯೇರಿ ಸುಲಲಿತವಾಗಿ ಮಾತನಾಡುವ ಗುಣಗಳನ್ನು ಮೈಗೂಡಿಸಿಕೊಂಡಿದ್ದಾರೆ. ಅದಕ್ಕೆ ಪೂರಕವಾಗಿ ನಾಟಕದ ತಾಲೀಮು ಸಹಕಾರಿಯಾಗಿದೆ. ಪಾತ್ರಗಳ ನಿರ್ವಹಣೆ, ದೇಹದ ಅಂಗಗಳ ಬಳಕೆ, ಧ್ವನಿಯ ಏರಿಳಿತಗಳು, ಸಂವಹನ ಮಾಡುವ ವಿಧಾನ ಹೀಗೆ ಬಹುಸ್ತರಗಳಲ್ಲಿ ಬದಲಾವಣೆಗಳನ್ನು ಉಂಟುಮಾಡಿದೆ ಎಂದು ಡಾ. ಬೈರೇಗೌಡರು ಅಭಿಮಾನದಿಂದ ಹೇಳುತ್ತಾರೆ.

ರಾಬರ್ಟ್ ಬ್ರೂಸ್ ಫೂಟ್ ಪ್ರಾಚ್ಯ ವಸ್ತು ಸಂಗ್ರಹಾಲಯದ ಜೊತೆಗೂಡಿ ಮಕ್ಕಳ ಕಲಾಂತರ್ಗತ ಕಲಿಕೆ–ಅನುಸಂಧಾನ

ಸೈಯದ್ ಸಾದಿಕ್
ರಂಗಭೂಮಿ ಕಲಾವಿದರು
9743621655

ಸ್ಥಳೀಯ ಇತಿಹಾಸದ ಅರಿವು ನಮ್ಮ ಕಲಿಕಾ ವಾತಾವರಣವನ್ನು ಮತ್ತಷ್ಟು ಆಪ್ತಗೊಳಿಸುತ್ತದೆ ಎನ್ನುವುದಕ್ಕೆ ರಾಬರ್ಟ್ ಬ್ರೂಸ್ ಫೂಟ್ ಪ್ರಾಚ್ಯ ವಸ್ತು ಸಂಗ್ರಹಾಲಯದ ಜೊತೆಗೂಡಿ ಮಕ್ಕಳ ಕಲಾಂತರ್ಗತ ಕಲಿಕೆ–ಅನುಸಂಧಾನ ಉತ್ತಮ ಉದಾಹರಣೆ.

ಮೂಲತಃ ಮೈಸೂರಿನವರಾಗಿದ್ದು, ಪ್ರಸ್ತುತ ಬಳ್ಳಾರಿಯ ಹೊಸಪೇಟೆಯಲ್ಲಿ ವಾಸ್ತವ್ಯವಿರುವ ಯುವರಂಗಕರ್ಮಿ ಸೈಯದ್ ಸಾದಿಕ್ (ರಿಯಾಜ್ ಸಿಹಿಮೊಗೆ) ಇವರು ಬಳ್ಳಾರಿಯ ಸರ್ಕಾರಿ ಹಿಂದಿ ಮಾಧ್ಯಮ ಶಾಲೆಯ 8ನೇ ತರಗತಿಯ ಮಕ್ಕಳಿಗಾಗಿ ಈ ಯೋಜನೆಯನ್ನು ಯಶಸ್ವಿಯಾಗಿ

> ನಮ್ಮ ಯೋಜನೆಯ ಚಟುವಟಿಕೆಗಳಿಂದಾಗಿ ಮಕ್ಕಳು ಇತಿಹಾಸದ ಒಳಗೊಳ್ಳುವಿಕೆಯನ್ನು ಅರ್ಥಮಾಡಿಕೊಂಡರು,ಪ್ರಶ್ನಿಸುವ ಮನೋಭಾವ ಹೆಚ್ಚಿಸಿಕೊಂಡರು ಮಾತ್ರವಲ್ಲದೆ, ಶಿಕ್ಷಕರ–ಮಕ್ಕಳ ನಡುವಿನ ಅಂತರವನ್ನೂ ಕಡಿಮೆ ಮಾಡಿತು.
> **– ಸೈಯದ್ ಸಾದಿಕ್**

ಪೂರ್ಣಗೊಳಿಸಿದ್ದಾರೆ.

ಅತ್ಯಂತ ಪುರಾತನ ಇತಿಹಾಸವುಳ್ಳ ಬಳ್ಳಾರಿಯ ಸಂಗನಕಲ್ಲು ಪ್ರದೇಶದಲ್ಲಿ ಆದಿಮಾನವರು ವಾಸ್ತವ್ಯವಿದ್ದು ಬದುಕು ಕಟ್ಟಿಕೊಂಡಿದ್ದ ಕುರುಹುಗಳ ಅಧ್ಯಯನವನ್ನು ಹಲವು ಕ್ಷೇತ್ರ ಅಧ್ಯಯನ ಪ್ರವಾಸಗಳ ಮುಖೇನ ನಡೆಸಿ ತಮ್ಮ ಯೋಜನೆಯನ್ನು ಮಕ್ಕಳ ಅರಿವಿನ ಹಂತಕ್ಕೆ ತಲುಪಿಸಿದ್ದಾರೆ. ಬಳ್ಳಾರಿಯ ಪ್ರಾದೇಶಿಕ ವಿಜ್ಞಾನಕೇಂದ್ರ, ಮ್ಯೂಸಿಯಂ ನ ಗೈಡ್ ಕ್ಯುರೇಟರ್ ಮುಖೇನ ಸಂಗನಕಲ್ಲುವಿನ ಇತಿಹಾಸವನ್ನು ಮಕ್ಕಳ ಮನಸ್ಸಿಗೆ ಅಚ್ಚುಹಾಕಿಸಿದ್ದಾರೆ. ಕಲೆಯ ಮುಖೇನ ಕಲಿಕೆಯನ್ನು ಸುಲಭವಾಗಿಸಲು, ಮಣ್ಣಿನ ಕಲಾಕೃತಿ ರಚಿಸುವ ತರಗತಿ ಮುಖೇನ ಮಕ್ಕಳಿಗೆ ವಿಶೇಷ ಅನುಭವಗಳನ್ನು ಕಟ್ಟಿಕೊಟ್ಟಿದ್ದಾರೆ. ಆದಿಮಾನವರ ಬಳಕೆಯ ಕುರುಹುಗಳಾಗಿದ್ದ ಆಯುಧಗಳು, ಆಟಿಕೆಗಳು, ಚಿತ್ರಗಳನ್ನು ಪುನರ್ ರಚಿಸಿ, ಅವುಗಳ ಮುಖೇನ ಸಾಹಿತ್ಯ ರಚನೆ, ನಾಟಕ ರಚನೆ, ಆಶು ವಿಸ್ತರಣೆಯ ಸಾಧ್ಯತೆಗಳನ್ನು ಮಕ್ಕಳ ಮುಖೇನ ಪ್ರಯೋಗಿಸಿದ್ದಾರೆ. ಇಲ್ಲಿ ಈ ಯೋಜನೆಯ ಯಶಸ್ಸಿಗೆ ಶಿಕ್ಷಕರು ಹಾಗೂ ಸಮುದಾಯವೂ ಸಕ್ರೀಯವಾಗಿ ಪಾಲ್ಗೊಂಡರು.

2018–19 ರಲ್ಲಿ ಇವರು "ಪ್ಲೇ ಬ್ಯಾಕ್ ಥಿಯೇಟರ್ ಮೂಲಕ ಮಕ್ಕಳ ಮನೋವಿಕಾಸ" ಯೋಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದರು.

ಶಿವಮೊಗ್ಗ ಜಿಲ್ಲೆಯ ಶಾಸನಗಳು ಮತ್ತು ಕಲೆ ಸಾಹಿತ್ಯ



ಮಂಜುನಾಥ್ ಎ.
ಕಲಾವಿದರು
8495823749

ಶಾಸನಗಳು ಮತ್ತು ಶಿಲಾಶಾಸನಗಳ ರಚನೆಯಲ್ಲಿ ಕಲೆ ಮತ್ತು ಸಾಹಿತ್ಯದ ಪ್ರಭಾವ ಗಮನೀಯವಾದುದು ಎನ್ನುವುದನ್ನು"ಶಿವಮೊಗ್ಗ ಜಿಲ್ಲೆಯ ಶಾಸನಗಳು ಮತ್ತು ಕಲೆ ಸಾಹಿತ್ಯ" ಯೋಜನೆ ಸಾರಿ ಹೇಳಿದೆ.

ಕೃಷಿ ಕುಟುಂಬದ ಹಿನ್ನೆಲೆಯುಳ್ಳ ರಂಗಕಲಾವಿದ ಮಂಜುನಾಥ್ ಎ.ರವರು, ಶಾಲಾಕಾಲೇಜು ದಿನಗಳಿಂದಲೂ ಶಾಸನಗಳ ಬಗ್ಗೆ ಸ್ವಯಂ ಆಸಕ್ತಿ ಬೆಳೆಸಿಕೊಂಡವರು. ಇದೀಗ ಪಠ್ಯಪುಸ್ತಕಗಳಲ್ಲಿ ದೇಶ, ರಾಜ್ಯ, ರಾಜರ ಆಡಳಿತ, ಅಲ್ಲಿನ ಇತಿಹಾಸಗಳ ಬಗ್ಗೆ ಓದಿರುವುದನ್ನು ಮಕ್ಕಳಿಗೆ ಸುಲಭ ರೀತಿಯಲ್ಲಿ ಕಲಿಸುವ ಪ್ರಕ್ರಿಯೆಯನ್ನು ನಡೆಸಿದ್ದಾರೆ.

ಬಗನಕಟ್ಟೆ ಸರ್ಕಾರಿ ಪ್ರೌಢಶಾಲೆಯಲ್ಲಿ ಇವರು ತಮ್ಮ ಯೋಜನೆಯನ್ನು–ಯೋಚನೆಯನ್ನು ರಂಗತಂತ್ರಗಳನ್ನು ಬಳಸುವ ಮುಖೇನ ಅನುಷ್ಠಾನಗೊಳಿಸಿದ್ದು, ವಿದ್ಯಾರ್ಥಿಗಳಿಂದ ಉತ್ತಮ ಸ್ಪಂದನೆ ದೊರೆತಿದೆ. ಇತಿಹಾಸ ತಜ್ಞರ ಉಪನ್ಯಾಸದ ಮೂಲಕ ಮಕ್ಕಳಿಗೆ ವೀರಗಲ್ಲು, ಮಾಸ್ತಿಗಲ್ಲು, ದಾನಶಾಸನ, ತಾಮ್ರ ಶಾಸನ

ಹೀಗೆ ಅನೇಕ ರೀತಿಯ ಶಾಸನಗಳ ಕುರಿತು ಕುತೂಹಲ ಹೆಚ್ಚಿಸಿದರು, ಯೋಜನೆಯ ಚಟುವಟಿಕೆಗಳ ಬಗ್ಗೆ ಮಕ್ಕಳ ಮುಖೇನ ತಿಳಿದುಕೊಂಡ ಹೆತ್ತವರು, ತಮ್ಮ ಹೊಲಗದ್ದೆಗಳಲ್ಲಿ ಮತ್ತು ಯಾವುದೋ ಸ್ಥಳಗಳಿಗೆ ತೆರಳಿದಾಗ ಅಲ್ಲಿ ದೊರೆಯುವ ವೀರಗಲ್ಲು, ಮಾಸ್ತಿಗಲ್ಲು, ಶಾಸನಗಳ ಫೋಟೋವನ್ನು ಕ್ಲಿಕ್ಕಿಸಿ ಈ ಯೋಜನೆಯ ಕಲಿಕೆಗೆ ನೆರವಾಗಿದ್ದಾರೆ.

ಯೋಜನೆಯಲ್ಲಿ ಒಳಗೊಂಡ ಮಕ್ಕಳು ತಮ್ಮ ಪಠ್ಯದಲ್ಲಿ ಬರುವ ಯಾವುದೇ ಅಂಶಗಳನ್ನು ಸಹ ಬೇರೆ ಬೇರೆ ರಾಜಮನೆತನಗಳ ಸಾಮಾಜಿಕ ಆರ್ಥಿಕ ವ್ಯವಸ್ಥೆಯೊಂದಿಗೆ ಸಮೀಕರಣಗೊಳಿಸಿ ಅರ್ಥೈಸಿಕೊಳ್ಳುತ್ತಿದ್ದ ರೀತಿ ಯೋಜನೆಯ ಯಶಸ್ಸಿಗೆ ಹಿಡಿದ ಕೈಗನ್ನಡಿಯಾಗಿದೆ. 30 ಮಕ್ಕಳ ಜೊತೆ ನಡೆಸಿದ ಆಟ–ಪಾಠ–ಒಡನಾಟಗಳಿಗೆ ಶಾಲಾ ಶಿಕ್ಷಕರೂ, ಪೋಷಕರೂ ತನ್ನ ಜೊತೆಯಾಗಿ ಸಹಕರಿಸಿ ಯೋಜನೆ ಯಶಸ್ಸುಗೊಳಿಸಿದ್ದಾರೆ ಎನ್ನುತ್ತಾರೆ ಮಂಜುನಾಥ್.

ಈ ಯೋಜನೆ ಅನುಷ್ಠಾನಗೊಳ್ಳುವ ಮೊದಲು ಮಕ್ಕಳಲ್ಲಿ, ಕಲ್ಲುಗಳೆಂದರೆ ದೇವರು ಭೂತ ಹೀಗೆ ಅನೇಕ ಮೂಢನಂಬಿಕೆಗಳು ಬೇರೂರಿತ್ತು. ಈಗ ಅದು ಮಾಯವಾಗಿದೆ, ಕಲ್ಲುಗಳೆಂದರೆ ಅದು ಶಾಸನ. ಇದರಲ್ಲಿ ನಮ್ಮ ಇತಿಹಾಸ ಅಡಗಿರುತ್ತದೆ ಎನ್ನುವ ಸತ್ಯ ಅರಿವಾಗಿದೆ.
– ಮಂಜುನಾಥ್

ಇಂದು ಸಂಜೆ ಸಿಂಹ ಕಟಾಂಜನ ಕಲಾ ಅಂತರ್ಗತ ಪ್ರಯೋಗ ಪ್ರದರ್ಶನ

ಬಿದಿರು ಕರಕುಶಲ ಕಲೆಯಿಂದ ಪಠ್ಯದೆಡೆಗೆ

ಡಾ. ವೆಂಕಟೇಶ್ ಪ್ರಸಾದ್ ಹೆಚ್.ಡಿ
ರಂಗಭೂಮಿ ಕಲಾವಿದರು
8971618143

ನಮ್ಮ ಹಿರಿಯರು ಪ್ರಕೃತಿಯೊಂದಿಗೆ ಬದುಕುತ್ತಿದ್ದರು, ಮನುಷ್ಯ ಜೀವನದ ಒಡನಾಡಿ ಬಿದಿರು ಇದನ್ನು ಸ್ಪಷ್ಟಪಡಿಸುತ್ತದೆ, ಬಿದಿರಿನ ಮಹತ್ವ ಸಾರುವ ಈ ಯೋಜನೆ "ಬಿದಿರು ಕರಕುಶಲ ಕಲೆಯಿಂದ ಪಠ್ಯದೆಡೆಗೆ" ಹಾಸನ ಜಿಲ್ಲೆಯ ಚನ್ನರಾಯ ಪಟ್ಟಣ ನಿವಾಸಿಯಾಗಿರುವ ಡಾ.ವೆಂಕಟೇಶ್ ಪ್ರಸಾದ್ ಹೆಚ್.ಡಿಯವರು ರಂಗಭೂಮಿಯ ಎಲ್ಲಾ ಆಯಾಮಗಳಲ್ಲಿ ಪಳಗಿದವರು. ನುಗ್ಗೇಹಳ್ಳಿ ಮೊರಾರ್ಜಿ ದೇಸಾಯಿವಸತಿ ಶಾಲೆಯನ್ನು ಈ ಯೋಜನೆಗೆ ಆಯ್ಕೆ ಮಾಡಿಕೊಂಡು ಆರನೇ ತರಗತಿಯ 35 ಮಕ್ಕಳನ್ನು ತಮ್ಮ ಯೋಜನಾ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಮನುಷ್ಯ ಜೀವನದ ಒಡನಾಡಿಯಾಗಿರುವ ಬಿದಿರನ್ನು ಪ್ರಯೋಗಕ್ಕೆ ಬಳಸಿ ಮಕ್ಕಳಲ್ಲಿ ಕಲಿಕೆಯನ್ನು, ಕಲಿಯುವ ಆಸಕ್ತಿಯನ್ನು ಹೆಚ್ಚಿಸಲು ಕಲೆಯನ್ನು ಪಠ್ಯದ ಒಂದು ಮಾಧ್ಯಮವಾಗಿ ಉಪಯೋಗಿಸಿಕೊಳ್ಳುವ ಪ್ರಯತ್ನ

> ಪರಿಸರದ ಜೊತೆಗೆ ಪರಿಸರ, ವಸ್ತುಗಳು ಮತ್ತು ಆಟ, ಕಲೆ, ಹಾಡು, ಒಗಟು, ಪ್ರಾಸ, ಪದ್ಯದ ಅಂತ್ಯಾಕ್ಷರಿಯಿಂದಲೂ ಪಠ್ಯವನ್ನು ತಿಳಿಯಬಹುದೆಂಬುದನ್ನು ಮಕ್ಕಳು ಮನವರಿಕೆ ಮಾಡಿಕೊಂಡಿದ್ದಾರೆ.
> – ಡಾ. ವೆಂಕಟೇಶ್ ಪ್ರಸಾದ್ ಹೆಚ್.ಡಿ.

ಇದಾಗಿದೆ.

ಯೋಜನೆಯ ಅನುಷ್ಠಾನಕ್ಕಾಗಿ ಶಾಲೆಯ ಶಿಕ್ಷಕರು ಹಾಗೂ ಮಕ್ಕಳ ಪೋಷಕರ ನೆರವಿನಿಂದ ಹಲವು ರೀತಿಯ ಪ್ರಾಯೋಗಿಕ ಚಟುವಟಿಕೆಗಳನ್ನು ಇವರು ನಡೆಸಿದ್ದು, ಬಿದಿರನ್ನೇ ತಮ್ಮ ಜೀವನೋಪಾಯಕ್ಕೆ ಅವಲಂಬಿಸಿರುವ ಸಮುದಾಯದವರನ್ನು ಶಾಲೆಗೆ ಕರೆಸಿ ಅವರಿಂದ ಬಿದಿರಿನ ಪ್ರಬೇಧಗಳು, ಬಿದಿರಿನ ಉಪಯೋಗ, ಬಿದುರಿನ ಸಾಂಸ್ಕೃತಿಕ ಮತ್ತು ಸಮುದಾಯದ ಜೊತೆಗಿನ ಭಾವನೆಗಳನ್ನು ಅರ್ಥೈಸಲು ಪ್ರಯತ್ನಿಸಲಾಗಿದೆ, ಕಾಡ್ಗಿಚ್ಚಿನಂತಹ ತುರ್ತು ಪರಿಸ್ಥಿತಿ ಎದುರಿಸಲು ಅಗ್ನಿಶಾಮಕ ಸಿಬ್ಬಂದಿಯಿಂದ ತರಗತಿ ಮತ್ತು ಪ್ರಾತ್ಯಕ್ಷಿಕೆ, ಕವಿಗಳು, ಸಾಹಿತಿಗಳು, ನಾಟಕಕಾರರು ಮತ್ತು ಹಾಡುಗಾರರನ್ನು ಕರೆಸಿ ಬಿದಿರಿನ ಪರಿಕರಗಳನ್ನು ಬಳಸಿ ಹಲವು ತರಗತಿಗಳನ್ನು ನಡೆಸಲಾಗಿದೆ. ಮಕ್ಕಳು ಧೈರ್ಯವಾಗಿ ಮಾತನಾಡುವ, ವಿಮರ್ಶಿಸುವ ಮಟ್ಟಕ್ಕೆ ಬೆಳೆದಿರುವುದು, ಶಿಕ್ಷಕರಿಗೂ ಮಕ್ಕಳ ಪೋಷಕರಿಗೂ ಖುಷಿಕೊಟ್ಟಿದೆ. ಇದು ಸಾರ್ಥಕತೆಯ ಕ್ಷಣ ಎನ್ನುತ್ತಾರೆ ವೆಂಕಟೇಶ್ ಪ್ರಸಾದ್.

ಶತಮಾನ ಕಂಡ ಕಾವೇರಿ ತೀರದ ವಲಸೆಯ ಕತೆಗಳು

ರಾಜಶೇಖರ ಮೂರ್ತಿ
ಕಲಾವಿದರು
8660357352

ಕನ್ನಂಬಾಡಿ ಕಟ್ಟೆ (ಅಣೆಕಟ್ಟು) ಯಾರಿಗೆ ತಾನೇ ಗೊತ್ತಿಲ್ಲ..! ಆದರೆ ಅದರ ಹಿಂದೆ ಇರುವ ನೋವಿನ ಕಥೆಯನ್ನು ತೆರೆದಿಟ್ಟ ಯೋಜನೆ 'ಶತಮಾನ ಕಂಡ ಕಾವೇರಿ ತೀರದ ವಲಸೆಯ ಕತೆಗಳು'.

ಮಂಡ್ಯ ಜಿಲ್ಲೆಯ ಕೃಷ್ಣ ರಾಜ ಸಾಗರ ಗ್ರಾಮದವರಾದ ರಾಜಶೇಖರ ಮೂರ್ತಿಯವರು ಕಾವೇರಿ ತೀರದಲ್ಲಿಯೇ ಬೆಳೆದವರು. ಬಾಲ್ಯದಿಂದಲೇ ಇವರು ಕೇಳುತ್ತಿದ್ದ ಕನ್ನಂಬಾಡಿ ಕಟ್ಟೆ ಹಾಗೂ ಕನ್ನಂಬಾಡಿ ಗ್ರಾಮದ ಹಿರಿಯರು ಹೇಳುತ್ತಿದ್ದ ಕಥೆಗಳು ಹಾಗೂ ಪುಸ್ತಕಗಳಿಂದ ಪ್ರೇರಿತರಾಗಿ ತಮ್ಮ ಕಲಾಂತರ್ಗತ ಕಲಿಕೆಯ ಯೋಜನೆಗೂ ಕಾವೇರಿ ತೀರವನ್ನೇ ಆಯ್ಕೆ ಮಾಡಿದ್ದಾರೆ.

ರಂಗಭೂಮಿ ಹಿನ್ನೆಲೆಯ ಇವರು, ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣರಾಜಸಾಗರ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ 8 ನೇ ತರಗತಿಯ ಮಕ್ಕಳನ್ನು ಈ ಯೋಜನೆಯಲ್ಲಿ ತೊಡಗಿಸಿಕೊಂಡರು.

ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ, ಆಶು ವಿಸ್ತರಣೆ ಮೂಲಕ ರಂಗರೂಪ ನೀಡುವುದು, ಯೋಜನೆಗೆ ಪೂರಕವಾಗುವಂತೆ ಬೀದಿನಾಟಕ, ರಂಗಸಜ್ಜಿಕೆ, ಪಟದ ಕುಣಿತ, ರಂಗಾಟ, ಪ್ರವಾಸ, ಇತಿಹಾಸ ತಜ್ಞರ ಭೇಟಿ,

ಅಭಿಯಂತರರ ಭೇಟಿ ಸಹಿತ ಹಲವು ಕಾರ್ಯಗಾರಗಳನ್ನು ನಡೆಸಿದ್ದಾರೆ. ಕನ್ನಂಬಾಡಿ ಗ್ರಾಮದ ಸಮುದಾಯದ ಹಾಗೂ ಕಟ್ಟೆ ಕಟ್ಟಲು ಬಂದ ಕೋಲಾರ ಸಮುದಾಯಗಳ ಜೊತೆಗೆ ಪರಸ್ಪರ ಮುಖಾಮುಖಿ ಸಹಿತ ಎಲ್ಲಾ ಚಟುವಟಿಕೆಗಳಿಂದ ಮಕ್ಕಳಲ್ಲಿ ಭಾಷಾ ಕಲಿಕೆ ಮತ್ತು ಇತಿಹಾಸ ತಿಳಿಯುವ ಪರಿಕಲ್ಪನೆ ಮತ್ತು ವೈಜ್ಞಾನಿಕ ಚಿಂತನೆಯನ್ನು ಹೆಚ್ಚಿಸಿದೆ ಎಂದು ಅಭಿಮಾನ ಪಡುತ್ತಾರೆ ಇವರ ಯೋಚನೆಗಳಿಗೆ ಶಿಕ್ಷಕವರ್ಗವೂ ನೆರವಾಗಿದೆ. ಅಂತಿಮವಾಗಿ ರಂಗ ನಾಟಕ ಪ್ರದರ್ಶನದ ದೊಂದಿಗೆ ಯೋಜನೆ ಮುಕ್ತಾಯಗೊಂಡಿದೆ.

ರಂಗಭೂಮಿ ಬಗ್ಗೆ ಊರಿನ ಮಕ್ಕಳಲ್ಲಿ ಹಿರಿಯರಲ್ಲಿ ಯಾವುದೇ ಆಸಕ್ತಿ ಇರಲಿಲ್ಲ, ಕೀಳರಿಮೆ ಇತ್ತು ಅದನ್ನು ಹೋಗಲಾಡಿಸಿ ರಂಗಭೂಮಿಯ ಶಿಸ್ತು, ಸಮಯಪ್ರಜ್ಞೆ ನಾಟಕದ ಬಗೆಗಿನ ಗೌರವವನ್ನು ಮೂಡಿಸಿರುವುದು ನನಗೆ ತೃಪ್ತಿ ಇದೆ

– ರಾಜಶೇಖರ್ ಮೂರ್ತಿ

ಹೆಜ್ಜೆಗಳು

ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಪ್ರಯೋಗಗಳು

2019–20 : 2022–23

ಕಲಿ-ಕಲಿಸು

ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಪ್ರಯೋಗಗಳು 2022–23

ಕಾಫಿ, ಬೀಜದಿಂದ ಬಟ್ಟಲಿಗೆ

ಗೀತಾ ಕೆ.ಹೆಚ್
ಸಹಶಿಕ್ಷಕರು
ಸರ್ಕಾರಿ ಕಿರಿಯ
ಪ್ರಾಥಮಿಕ ಶಾಲೆ
ಯಲಗುಡಿಗೆ
ಚಿಕ್ಕಮಂಗಳೂರು
7975628638

ಕಾಫಿ ನಾಡಿನ ಮಕ್ಕಳಿಗೆ ತಮ್ಮ ಸುತ್ತಮುತ್ತ ಪ್ರದೇಶದಲ್ಲಿ ಬೆಳೆಯುವ ಕಾಫಿಯ ಇತಿಹಾಸ ಮಾತ್ರವಲ್ಲದೆ, ಕಾಫಿ ನಾಡಿನತ್ತ ವಲಸೆ ಬಂದ ಜನರ ಜೀವನದ ಸ್ಥಿತಿಗತಿ, ವಲಸೆಗೆ ಕಾರಣ, ಬದುಕು, ಮಕ್ಕಳ ಜೀವನ ಅರಿಯುವುದರ ಜತೆಗೆ ಕಾಫಿ ಕಾರ್ಮಿಕರ ಜನಪದ ಸಾಹಿತ್ಯ ಸಂಗ್ರಹ ಮಾಡುತ್ತಿದ್ದಾರೆ.

ಚಿಕ್ಕಮಂಗಳೂರಿನ ಯಲಗುಡಿಗೆಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿರುವ ಗೀತಾ ಕೆ.ಹೆಚ್ ಅವರು 'ಕಾಫಿ ಬೀಜದಿಂದ ಬಟ್ಟಲಿಗೆ' ಎಂಬ ಯೋಜನೆಯ ಮೂಲಕ ಅನುಷ್ಠಾನಗೊಳಿಸುತ್ತಿದ್ದಾರೆ.

ಕಾಫಿ ತೋಟದ ಕೆಲಸಗಾರರ ಮಕ್ಕಳೇ ಹೆಚ್ಚಾಗಿ ಈ ಶಾಲೆಗೆ ಬರುವುದರಿಂದ ಈ ಮಕ್ಕಳಿಗೆ ಕಾಫಿ ಅಪರಿಚಿತವೂ ಅಲ್ಲ. ಕಾಫಿಯು ವ್ಯಕ್ತಿಗಳ ಕುಟುಂಬವನ್ನು ಮತ್ತು ಸಮಾಜದೊಂದಿಗೆ ಹೇಗೆ ಸಂಬಂಧ ಹೊಂದಿದೆ ಎಂಬುದನ್ನು ಪ್ರತಿಬಿಂಬಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಯೋಜನೆಯು ಮೂರು ಭಾಗಗಳಲ್ಲಿ ಸಾಗುತ್ತಿದೆ, ಮೊದಲನೆಯದಾಗಿ ಕಾಫಿ ಬೆಳೆ ಕರ್ನಾಟಕಕ್ಕೆ ಹೇಗೆ ಬಂದಿತು? ಅದು ಇಲ್ಲಿಗೆ ಬರುವುದರ ಉದ್ದೇಶವೇನು? ಎಂಬುದರ ಕುರಿತು ವಿದ್ಯಾರ್ಥಿಗಳು ಅವಲೋಕನ ಮಾಡುತ್ತಿದ್ದಾರೆ.

ಎರಡನೆಯದಾಗಿ, ಮಕ್ಕಳು ಕಾಫಿ ಎಸ್ಟೇಟ್‌ಗಳ ಕಾರ್ಮಿಕರೊಂದಿಗೆ ಸಂವಾದ ನಡೆಸುತ್ತಿದ್ದಾರೆ. ಮಾಹಿತಿಯನ್ನು ದಾಖಲೀಕರಣ ಮಾಡಿಕೊಳ್ಳುತ್ತಿದ್ದಾರೆ, ಮೂರನೆಯದಾಗಿ ಮಕ್ಕಳು ಸ್ವಯಂ ಭೂದೃಶ್ಯಗಳು ಮತ್ತು ಸಂಯೋಜನೆಗಳನ್ನು ರಚಿಸಲು ಕಾಫಿಯನ್ನು ಬಳಸುತ್ತಿದ್ದಾರೆ.

ಕಾಫಿ ನಡೆದು ಬಂದ ದಾರಿ, ಅದಕ್ಕೆ ಸಂಬಂಧಿಸಿದ ಸಾಹಿತ್ಯ ಅನ್ವೇಷಿಸಲು ವಿದ್ಯಾರ್ಥಿಗಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದಾರೆ. ತಮ್ಮ ಅನುಭವಗಳನ್ನು ಕಥೆ ಕವನಗಳಲ್ಲಿ ಅಭಿವ್ಯಕ್ತಿಗೊಳಿಸುತ್ತಿದ್ದಾರೆ. ನಾಟಕಗಳಲ್ಲಿ ಅಭಿನಯಿಸುತ್ತಿದ್ದಾರೆ. ಕಾಫಿ ಪುಡಿ ಬಳಸಿಕೊಂಡು ಚಿತ್ರ ಬರೆಯುತ್ತಿದ್ದಾರೆ. ಆ ಮೂಲಕ ಕಲಿಕೆಯಲ್ಲಿಯೂ ಸೃಜನಶೀಲತೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಮಕ್ಕಳು ತಾವೇ ಸಂಗ್ರಹಿಸಿದ ಕಥೆ, ಕವನ, ಚುಟುಕುಗಳು ಮತ್ತು ರಚಿಸಿದ ಚಿತ್ರಗಳನ್ನು ಸಂಗ್ರಹಿಸಿ ಮಕ್ಕಳ ಸಾಹಿತ್ಯವನ್ನು ಹೊರತರುವಲ್ಲಿ ಈ ಕಲಾ ಅಂತರ್ಗತ ಯೋಜನೆ ಅವರಿಗೆ ಪೂರಕವಾಗಿದೆ.

ಕಾಫಿಯು ವ್ಯಕ್ತಿಗಳ ಕುಟುಂಬ ಮತ್ತು ಸಮಾಜದೊಂದಿಗಿನ ಸಂಬಂಧವನ್ನು ಪ್ರತಿಬಿಂಬಿಸುತ್ತದೆ.
– ಗೀತಾ ಕೆ.ಹೆಚ್

ಕಪ್ಪೆ ಅರಭಟ್ಟ ಯಾರು?

ಸುಭಾಷ್ ಚಂದ್ರ ಭಜಂತ್ರಿ
ಸಹಶಿಕ್ಷಕರು
ಸರ್ಕಾರಿ ಪದವಿ ಪೂರ್ವ ಕಾಲೇಜು
(ಪ್ರೌಢಶಾಲಾ ವಿಭಾಗ)
ಬಾದಾಮಿ
8951638609

ಬದಾಮಿಯ ಐತಿಹಾಸಿಕ ಪರಿಸರದಲ್ಲಿ ಇತಿಹಾಸ ಸಂಶೋಧನೆಗೆ ಸಾಕಷ್ಟು ವಿಷಯಗಳಿವೆ. ಇಲ್ಲಿರುವ ಶಾಸನವೊಂದರ ಪ್ರಕಾರ ಕಪ್ಪೆ ಅರಭಟ್ಟ ಯಾರು? ಎಂಬ ಹುಡುಕಾಟದ ಜೊತೆಗೆ, ಏಂಟನೇ ತರಗತಿ ವಿದ್ಯಾರ್ಥಿಗಳಿಗೆ ಇತಿಹಾಸದ ಅರಿವು ಮತ್ತು ಅದರ ಪ್ರೀತಿಯನ್ನು ಕಲಿಕೆಯಾಗಿಸುವುದಕ್ಕಾಗಿ ಬಾದಾಮಿಯ ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗದ ಶಿಕ್ಷಕರಾದ ಸುಭಾಷ್ ಚಂದ್ರರು 'ಕಪ್ಪೆ ಅರಭಟ್ಟ ಯಾರು?' ಎಂಬ ಯೋಜನೆ ಹಾಕಿಕೊಂಡು ವಿದ್ಯಾರ್ಥಿಗಳಿಗೆ ಬಂಡೆಯ ಮೇಲಿರು ವ ಸಾಹಿತ್ಯವನ್ನು ಓದಲು ಪ್ರೋತ್ಸಾಹಿಸಿದ್ದಾರೆ.

'ಈಗಾಗಲೇ ಶಾಸನ ಮಾತ್ರವಲ್ಲದೆ ಕಪ್ಪೆ ಅರಭಟ್ಟನನ್ನು ಆಧರಿಸಿ ತ್ರಿಪದಿಗಳನ್ನು ಕುರಿತು ಗದ್ಯರೂಪದ ವಿವರಣೆಗಳನ್ನು ಎರಡು ಭಾಷೆಗಳಲ್ಲಿ ಬರೆದಿದ್ದಾರೆ. ಈ ಯೋಜನೆ ವಿದ್ಯಾರ್ಥಿಗಳಲ್ಲಿನ ಲವಲವಿಕೆಗೆ ಕಾರಣವಾಗಿದೆ.'
– ಸುಭಾಷ್ ಚಂದ್ರ

ಐತಿಹಾಸಿಕ ಸ್ಮಾರಕಗಳು ಸ್ವಚ್ಛವಾಗಿ, ಆಕರ್ಷಿತವಾಗಿ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿವೆ. ಅಲ್ಲದೆ ಬಾದಾಮಿಯು ಅಲ್ಲಿನ ಕಲೆ ಸಾಹಿತ್ಯಕ್ಕೆ ಪ್ರಸಿದ್ಧವಾಗಿದೆ. 'ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯಂ,

ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್ ಮಾಧವನ್ ಪೆರನಲ್ಲ' ಎಂದು ಏಳನೇ ಶತಮಾನದಲ್ಲಿ ಹೇಳಿದ ಈ ಮಾತಿನ ಬಗ್ಗೆ ವಿದ್ಯಾರ್ಥಿಗಳಿಗೆ ಅಭಿಮಾನ, ಆಸಕ್ತಿ ಮೂಡುತ್ತಿದೆ.

ಯೋಜನೆ ಅನುಷ್ಠಾನದಿಂದಾಗಿ ವಿಶ್ವ ಪರಂಪರೆಯ ತಾಣವಾಗಿರುವ ಬಾದಾಮಿಯ ಇತಿಹಾಸ, ಸಂಸ್ಕೃತಿ, ಶಾಸನ, ಕಲೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಸಲು ಸಾಧ್ಯವಾಗುತ್ತಿದೆ. ಆಗಾಗ ಮುಳ್ಳು ಕಂಟಿಗಳನ್ನು ಸ್ವಚ್ಛಗೊಳಿಸಿ ಆ ಶಾಸನದ ಬಂಡೆಯನ್ನು ಸಂರಕ್ಷಿಸುವ ಹೊಣೆಗಾರಿಕೆಯನ್ನು ವಿದ್ಯಾರ್ಥಿಗಳೇ ಹೊತ್ತುಕೊಂಡಿದ್ದಾರೆ.

ಕಪ್ಪೆ ಅರಭಟ್ಟನ ಬಗ್ಗೆ ಇತಿಹಾಸ ಏನು ಹೇಳುತ್ತದೆ? ಶಾಸನ ಸಾಹಿತ್ಯದ ಅರ್ಥವೇನು? ಇಂತಹ ಅನೇಕ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ವಿಶೇಷ ತಜ್ಞರಿಂದ ಆಗಾಗ ಕಾರ್ಯಾಗಾರಗಳನ್ನು ಆಯೋಜಿಸುತ್ತಿದ್ದಾರೆ. 'ಕಪ್ಪೆ ಅರಭಟ್ಟ ಯಾರು?' ಎಂಬ ಪ್ರಶ್ನೆಯೊಂದಿಗೆ ಮಕ್ಕಳಲ್ಲಿ ಸಂಶೋಧನಾತ್ಮಕ ಮನೋಭಾವವನ್ನು ಜಾಗೃತಗೊಳಿಸುತ್ತಿದ್ದಾರೆ. ಕಪ್ಪೆ ಅರಭಟ್ಟನ ಪರಿಚಯದ ಸುತ್ತ ಇತರ ಅನೇಕ ಸಂಶೋಧನೆಗಳ ಸಹಾಯ ಪಡೆದು ಅಧ್ಯಯನ ನಡೆಸುತ್ತಿದ್ದಾರೆ.

ರದ್ಮಾಲ್ ನೃತ್ಯ, ಕಲಾ ಅಂತರ್ಗತ

ಗಂಗಪ್ಪ ಎಸ್.ಎಲ್
ಸಹಶಿಕ್ಷಕರು,
ಸರ್ಕಾರಿ ಹಿರಿಯ
ಪ್ರಾಥಮಿಕ ಶಾಲೆ
ಗೌಳಿವಾಡ
ಯಲ್ಲಾಪುರ ತಾ॥
ಉತ್ತರ ಕನ್ನಡ ಜಿಲ್ಲೆ
9902893532

ಮರೆಯಾಗುತ್ತಿರುವ ಜನಪದ ಪ್ರಕಾರಗಳಲ್ಲೊಂದಾಗಿರುವ ರದ್ಮಾಲ್ ನೃತ್ಯ ಗೌಳಿ ಸಮುದಾಯದ ಪ್ರಮುಖ ಜನಪದ ಆಚರಣೆಯಾಗಿದೆ. ಇಂತಹ ಜನಪದ ಕಲೆ ಉಳಿಯಬೇಕು ಎಂಬುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಮಹಾರಾಷ್ಟ್ರ ಮೂಲದ ಗೌಳಿ ಎಂಬ ವಲಸಿಗರ ಸಮುದಾಯ ಕರ್ನಾಟಕದಲ್ಲಿ ನೆಲೆ ನಿಂತು ತನ್ನ ಮೂಲ ಸಂಸ್ಕೃತಿ ಮತ್ತು ಕಲೆಯನ್ನು ಜೀವಂತವಾಗಿರಿಸಿಕೊಂಡಿದೆ.

ಗೌಳಿ ಸಮುದಾಯದ ಜನಪದ ಕಲೆಯಾಗಿರುವ ರದ್ಮಾಲ್ ಕಲೆಯನ್ನು ಕಲಿಕೆಯಲ್ಲಿ ಅಂತರ್ಗತಗೊಳಿಸುವ ಪ್ರಯತ್ನವನ್ನು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಅಲ್ಕೇರಿ ಗೌಳಿವಾಡದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಗಂಗಪ್ಪ ಎಸ್.ಎಲ್ ಅವರು ನಾಲ್ಕು, ಐದು ಮತ್ತು ಆರನೇ ತರಗತಿ ಮಕ್ಕಳಿಗೆ 'ರದ್ಮಾಲ್ ನೃತ್ಯ ಕಲಿಕೆ' ಎಂಬ ಯೋಜನೆ ಹಾಕಿಕೊಂಡಿದ್ದಾರೆ.

ಹೋಳಿ ಹುಣ್ಣಿಮೆಯ ಕಾಮಣ್ಣನನ್ನು ಸುಟ್ಟನಂತರ ಆಡುವ ಜನಪದ ಕಲೆಯಾಗಿರುವ ರದ್ಮಾಲ್ ನೃತ್ಯವನ್ನು, ವಿಶಿಷ್ಟವಾದ

ವಸ್ತ್ರವಿನ್ಯಾಸ ಮತ್ತು ಆಚರಣೆಗಳ ಬಗ್ಗೆ ಅರಿಯುವುದೆಂದರೆ ಅದೊಂದು ಜಾನಪದ ಸಮುದಾಯದ ಅಧ್ಯಯನ ಮಾಡಿದಂತೆಯೇ ಸರಿ.

ಪ್ರಸ್ತುತ, ಗಂಗಪ್ಪನವರು ಗೌಳಿ ಸಮುದಾಯದ ಮಕ್ಕಳಿಗೆ ಸಾಂಪ್ರದಾಯಿಕ ಕಲೆಯಾಗಿರುವ ರದ್ಮಾಲ್ ಕಲೆಯನ್ನು ಕಲಿಸುತ್ತಾ ಪಠ್ಯದಲ್ಲಿರುವ ಪದ್ಯಗಳಿಗೆ ಈ ಶೈಲಿಯಲ್ಲಿ ಅನುಕರಣೆ ಮಾಡಿಸುತ್ತಾ, ಸರಣಿ ಪ್ರದರ್ಶನ ನೀಡುವುದರ ಮೂಲಕ ಕಲೆಯನ್ನು ಕಲಿಕೆಯಲ್ಲಿ ಅಂತರ್ಗತಗೊಳಿಸುತ್ತಿದ್ದಾರೆ. ಸಮುದಾಯದ ಸಹಭಾಗಿತ್ವದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದಾರೆ. ಕಲಿಕೆಯ ಸುಂದರ ಕ್ಷಣಗಳನ್ನು ಆಡಿಯೋ, ವಿಡಿಯೋ ಮೂಲಕ ದಾಖಲಿಸುತ್ತಿದ್ದಾರೆ.

ಹೆಜ್ಜೆಗಳು

'ನಮ್ಮ ತರಗತಿಯ ಪದ್ಯಗಳನ್ನು ನಮ್ಮ ರದ್ಮಾಲ್ ಕಲೆಯ ಮೂಲಕ ಸುಲಭವಾಗಿ ಕಲಿಯುತ್ತಿದ್ದೇವೆ. ರದ್ಮಾಲ್ ನೃತ್ಯ ಉಳಿಸಿದಂತೆಯೂ ಆಗಿದೆ'

– ಕಿರಣ ರಾಮು ಜೋರೆ
7ನೇ ತರಗತಿ

ಸುರಪುರ ಚಿತ್ರಕಲೆಯತ್ತ ಮಕ್ಕಳ ಚಿತ್ತ

ಸೂರ್ಯಕಾಂತ್ ನಂದೂರು
ಸರಕಾರಿ ಪ್ರೌಢಶಾಲೆ
ಪೇಠಶಿರೂರ
ಚಿತ್ತಾಪೂರ ತಾ॥
ಕಲಬುರಗಿ ಜಿ॥
9741957236

'ಗರುಡಾದ್ರಿ' ಸುರಪುರ ಭಾಗದ ಹೆಮ್ಮೆಯ ಕಲೆಯಾಗಿದೆ. ಚಿತ್ರಕಲೆಯಲ್ಲಿ ಪ್ರಾದೇಶಿಕ ಮತ್ತು ಸಾಂಪ್ರದಾಯಿಕ ಶೈಲಿ ಎಂದರೆ ಅದು ಸುರಪುರ ಚಿತ್ರ ಶೈಲಿ. ಅತ್ಯಂತ ಸೂಕ್ಷ್ಮ ಗೆರೆಗಳ ಪ್ರಕಾರವಾದ ಬಣ್ಣಗಳು, ಜೇಸ್ಸೋ ಹಾಗೂ ಗೋಲ್ಡ್ ಲೀಫ್ ತಂತ್ರದೊಂದಿಗೆ ಬಹಳ ಆಕರ್ಷಕವಾದ ಈ ಮಿನಿಚರ್ ಚಿತ್ರ ಪರಂಪರೆ ಈಗ ಅಳಿಯುತ್ತಿದೆ.

ಈ ಕಾಳಜಿಯನ್ನು ಇಟ್ಟುಕೊಂಡು ಕಲಬುರಗಿ ಜಿಲ್ಲೆ ಚಿತ್ತಾಪೂರ ತಾಲೂಕಿನ ಪೇಠಶಿರೂರ ಗ್ರಾಮದ ಪ್ರೌಢಶಾಲೆಯ ಚಿತ್ರಕಲಾ ಶಿಕ್ಷಕರಾಗಿರುವ ಸೂರ್ಯಕಾಂತ್ ಅವರು "ಪಠ್ಯಗಳಿಗೆ ಸುರಪುರ ಚಿತ್ರ ಸಂಪುಟ" ಯೋಜನೆ ಹಾಕಿಕೊಂಡು ಎಂಟನೇ ತರಗತಿಯ ಮಕ್ಕಳಿಗೆ ಅವರ ಪಠ್ಯದಲ್ಲಿ ಬರುವ ಗದ್ಯ ಮತ್ತು ಪದ್ಯಗಳಿಗೆ ಸುರಪುರ ಚಿತ್ರ ಶೈಲಿಯಲ್ಲಿ ಚಿತ್ರ ಬಿಡಿಸುವ ಮುಖಾಂತರ ಗರುಡಾದ್ರಿ ಕಲಾ ಪ್ರಕಾರದ ಬಗ್ಗೆ ಅರಿವು ಮತ್ತು ಮಹತ್ವವನ್ನು ತಿಳಿಸಿಕೊಡುವ ಯೋಜನೆ ಹಾಕಿಕೊಂಡಿದ್ದಾರೆ.

ಮಕ್ಕಳು ಕ್ರಮೇಣ ಚಿತ್ರಗಳನ್ನು ಬರೆಯುವ ಹಾಗೂ ಗರುಡಾದ್ರಿ ಕಲೆಯ ಕುರಿತು ಕಲಾವಿದರೊಂದಿಗೆ ಸಂದರ್ಶನ ನಡೆಸುವ ಕೌಶಲ್ಯ ಬೆಳೆಸಿಕೊಳ್ಳುತ್ತಿದ್ದಾರೆ. ತಾವು ಸಂಗ್ರಹಿಸಿದ ಮಾಹಿತಿಯನ್ನು ದಾಖಲೀಕರಣ ಮಾಡುತ್ತಿದ್ದಾರೆ.



ಮಕ್ಕಳು ಬಹಳ ಲವಲವಿಕೆಯಿಂದ ಕಾರ್ಯಗಾರದಲ್ಲಿ ಭಾಗವಹಿಸುತ್ತಾ ಭಾಷೆ ಮತ್ತು ಸಮಾಜವಿಜ್ಞಾನದ ಪಾಠಗಳನ್ನು ಚಿತ್ರಗಳಲ್ಲಿ ದಾಖಲಿಸುತ್ತಿದ್ದಾರೆ. ತಮ್ಮ ಪ್ರಾದೇಶಿಕ ಕಲೆಯನ್ನು, ಸಮೃದ್ಧ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಉಳಿಸಲು ಈ ಶಾಲೆಯ ಮಕ್ಕಳು ಕುಂಚವನ್ನು ಹಿಡಿದು ಸಿದ್ಧರಾಗಿ ನಿಂತಿದ್ದಾರೆ.

"ಸುರಪುರದಲ್ಲಿ ಇಂತಹ ಒಂದು ಕಲಾ ಪ್ರಕಾರ ಇದೆ ಅಂತ ನಮಗೆ ಗೊತ್ತಿರಲಿಲ್ಲ. ಈ ಚಿತ್ರದಲ್ಲಿರುವ ಗೆರೆಗಳು ಹಾಗೂ ಗಾಢವಾದ ಬಣ್ಣಗಳು ನನಗೆ ಬಹಳ ಇಷ್ಟವಾಗಿದೆ. ಇಂತಹ ಕಲಾ ಪ್ರಕಾರದ ಇತಿಹಾಸ ಹಾಗೂ ಹಿನ್ನಲೆಯ ಮಾಹಿತಿ ಪಡೆದುಕೊಂಡಿದ್ದೇವೆ. ಮುಂದೆ ಈ ಕಲೆಯನ್ನು ಉಳಿಸಬೇಕೆನ್ನುವುದು ನಮ್ಮ ಇಚ್ಛೆ ಆಗಿದೆ"

– ಸನಾ ಮೋದಿನ್ ಪಟೇಲ್
9ನೇ ತರಗತಿ

ಚಿಂವ್ ಚಿಂವ್ ಹಕ್ಕಿಯೂ –ಬಣ್ಣದ ಚಿಟ್ಟೆಯೂ

ಅರವಿಂದ ಕುಡ್ಲ
ಸಹಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮೂಡಂಬೈಲು, ಬಂಟ್ವಾಳ ತಾಲೂಕು ದಕ್ಷಿಣ ಕನ್ನಡ ಜಿಲ್ಲೆ
9844898124

ಮಕ್ಕಳಿಗೆ ತಮ್ಮ ಭಾಷೆ, ಪರಿಸರ ಮತ್ತು ತನ್ನತನದ ಬಗ್ಗೆ ಅಭಿಮಾನ ಉಂಟು ಮಾಡುವುದು ಕಲಿಕೆಯ ಸಾರ್ಥಕತೆವೆನ್ನಬಹುದು. ಮಕ್ಕಳ ಸ್ಥಳೀಯ ಭಾಷೆ, ಅವರ ಮನೆಯಿಂದಲೇ ತಿಳಿದು ಬರುವ ವಿಚಾರಗಳು, ಆಹಾರದ ಕುರಿತು ಸ್ಥಳೀಯರನ್ನು ಶಾಲೆಗೆ ಕರೆಸಿ ಮಾತನಾಡಿಸುವುದರಿಂದ ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಯುತ್ತಿದೆ.

ಈ ವಿಚಾರ ಇಟ್ಟುಕೊಂಡು ತಮ್ಮ ಯೋಜನೆಯ ಮೂಲಕ ಪರಿಸರ ಶಿಕ್ಷಣ ನೀಡಲು ಹೊರಟಿರುವ ಅರವಿಂದ ಕುಡ್ಲ ಅವರು ಬಂಟ್ವಾಳ ತಾಲೂಕಿನ ಮೂಡಂಬೈಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಜ್ಞಾನ ಶಿಕ್ಷಕರಾಗಿದ್ದು, 'ಚಿಂವ್ ಚಿಂವ್ ಹಕ್ಕಿಯೂ–ಬಣ್ಣದ ಚಿಟ್ಟೆ' ಎಂಬ ಯೋಜನೆ ಹಾಕಿಕೊಂಡಿದ್ದಾರೆ. ಸ್ಥಳೀಯ ಭಾಷೆಗಳ ಮೂಲಕ ಆರನೇ ಮತ್ತು ಏಳನೇ ತರಗತಿಯ ಮಕ್ಕಳಿಗೆ ಪರಿಸರ ಪಾಠವನ್ನು ಪರಿಸರದಲ್ಲಿಯೇ ನಡೆಸುತ್ತಿದ್ದಾರೆ.

ತಮ್ಮ ನೆಚ್ಚಿನ ಹವ್ಯಾಸಗಳಾದ ಚಾರಣ ಮತ್ತು ಫೋಟೋಗ್ರಫಿಯ ಸಹಾಯದಿಂದ ಮಕ್ಕಳಲ್ಲಿ ಹೊಸ ಅಭ್ಯಾಸಗಳನ್ನು ಮೈಗೂಡಿಸುತ್ತಿದ್ದಾರೆ. ವಿದ್ಯಾರ್ಥಿಗಳು ಪ್ರಾಣಿ, ಪಕ್ಷಿ, ಮರ–ಗಿಡಗಳ ಸುತ್ತವಿರುವಂತಹ ಅನುಭವಾತ್ಮಕ ಕಥೆಗಳನ್ನು ದಾಖಲಿಸುವುದು ನಂತರ ತಾವು ನೋಡಿದಂತಹ ಪ್ರಾಣಿ, ಪಕ್ಷಿ, ಮರ–ಗಿಡಗಳ ಹೆಸರನ್ನು ತಮ್ಮ ಮಾತೃ ಭಾಷೆಯಲ್ಲಿ ಹಿರಿಯರಿಂದ ಕೇಳಿ ತಿಳಿಯುವುದು, ಜೊತೆ ಜೊತೆಯಲ್ಲಿಯೇ ಪರಿಸರದ ಹೊಸ ಪದಕೋಶ ತಯಾರಿಸುವ ಕಾರ್ಯ ನಡೆಸುತ್ತಿದ್ದಾರೆ.

"ಜೀವಿಗಳು ಅವುಗಳ ಆವಾಸ, ಆವಾಸಕ್ಕೆ ಹೊಂದಾಣಿಕೆ, ಪರಸ್ಪರ ಅವಲಂಬನೆ, ಆಹಾರ ಸರಪಳಿ ಎಂಬ ಪಠ್ಯಂಶಗಳಿವೆ ಜೊತೆಗೆ ಮಾನವನ ಆಹಾರ, ಅದರ ಘಟಕಗಳು ಪೋಷಕಾಂಶಗಳು ಮತ್ತು ಆರೋಗ್ಯ ಎಂಬ ಪಠ್ಯ ಅಂಶಗಳೂ ಇವೆ. ಈ ವಿಷಯಗಳನ್ನು ಕಲಾಂತರ್ಗತ ಕಲಿಕಾ ಯೋಜನೆಯ ಮೂಲಕ ನಾವು ಕಲಿಸದೆ ಮಕ್ಕಳು ತಾವೇ ಕಲಿಯುತ್ತಾರೆ ಮತ್ತು ಇವುಗಳಿಗಿರುವ ಸಂಬಂಧವನ್ನು ತಾವೇ ತಿಳಿಯುತ್ತಿದ್ದಾರೆ" ಎನ್ನುತ್ತಾರೆ ಅರವಿಂದ ಕುಡ್ಲರವರು.

ಮಗ್ಗದ ಮಾತು ಕೇಳೋಣ ಬನ್ನಿ!

ರಮೇಶ್ ವಿ. ಬಳ್ಳಾ
ಸಹಶಿಕ್ಷಕರು
ಬಾಲಕಿಯರ ಸರಕಾರಿ ಪದವಿ ಕಾಲೇಜು
(ಪ್ರೌಢಶಾಲಾ ವಿಭಾಗ)
ಗುಳೇದಗುಡ್ಡ
ಬಾಗಲಕೋಟೆ ಜಿಲ್ಲೆ
9731022186

ನಶಿಸುತ್ತಿರುವ ನೇಕಾರಿಕೆಗೆ ಪುನಶ್ಚೇತನ ತುಂಬುವುದಕ್ಕಾಗಿ, ವಿವಿಧ ವಸ್ತ್ರಗಳ ತಯಾರಿಕೆ, ನಾವೀನ್ಯತೆಯ ಪ್ರಯೋಗಗಳು, ನೇಕಾರಿಕೆ ಸಾಮಗ್ರಿಗಳ, ನೇಕಾರಿಕೆ ವಿಧಾನ ಮತ್ತು ವಿನ್ಯಾಸಗಳ ಬಗ್ಗೆ ವಿದ್ಯಾರ್ಥಿಗಳು ತಿಳಿಯುವಂತಾಗಲು ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜಿನ ಶಿಕ್ಷಕ ರಮೇಶ್ ವಿ. ಬಳ್ಳಾ ಅವರು ಕನ್ನಡ, ಗಣಿತ, ಸಮಾಜವಿಜ್ಞಾನವನ್ನು ಮಗ್ಗಗಳ ಮುಂದೆ ಇಟ್ಟು ಮಾತಾಡಿಸುತ್ತಿದ್ದಾರೆ.

ಈ ಭಾಗಗಳಲ್ಲಿ ಕೈಮಗ್ಗದ ಬಟ್ಟೆಗಳನ್ನು ಜನರು ಹೆಚ್ಚು ಇಷ್ಟಪಡುತ್ತಾರೆ. ಯಂತ್ರೋಪಕರಣಗಳ ದಾಳಿಯಿಂದಾಗಿ ಈ ಕೈಮಗ್ಗಗಳು ನಶಿಸಿ ಹೋಗುತ್ತಿದ್ದಾರೆ. ಎಂಟನೇ ತರಗತಿಯ ಮಕ್ಕಳಲ್ಲಿ ಕೈಮಗ್ಗಗಳ ಪ್ರಾಮುಖ್ಯತೆ ಮತ್ತು ನೇಕಾರಿಕೆಯ ಕಲೆಯನ್ನು ಪಠ್ಯದೊಂದಿಗೆ ಸಂಯೋಜಿಸಿ ಮಕ್ಕಳಿಗೆ ಕಲಿಸಲು ಬೋಧನಾ ತಂತ್ರವನ್ನು ಕಂಡುಕೊಂಡಿದ್ದಾರೆ. ಕೈಮಗ್ಗ ಮುನ್ನಡೆಯಲು ಅಗತ್ಯವಿರುವ ಪರಿಹಾರಗಳು ಹಾಗೂ ಇತರೆ ವೃತ್ತಿ ಸಮುದಾಯಗಳೊಂದಿಗೆ ಹೊಂದಿರುವ ಪರಸ್ಪರ ಸಾಮಾಜಿಕ ಅವಲಂಬನೆಯನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳುತ್ತಿದ್ದಾರೆ.

ಹತ್ತಿ, ರೇಷ್ಮೆ, ನಾರು ಇತ್ಯಾದಿ ವಿಷಯಗಳನ್ನು ಸಂಯೋಜಿಸಿಕೊಂಡು ಕಲಿಕೆ ದೃಢೀಕರಿಸುತ್ತಿದ್ದಾರೆ. ವಿಜ್ಞಾನ ವಿಷಯದ 'ಎಳೆಯಿಂದ ನೂಲು', ಕನ್ನಡ ಭಾಷೆಯ 'ಮಗ್ಗದ ಸಾಹೇಬ' ಮಾರುಕಟ್ಟೆ, ವ್ಯವಹಾರ–ವ್ಯವಹಾರಿಕ ಜ್ಞಾನ ನೀಡುತ್ತಿದ್ದಾರೆ. ಮಕ್ಕಳು ನೇಕಾರರ ಮನೆಯಲ್ಲಿ ಕುಳಿತು ನೇಯ್ಗೆ ಕಲಿಯುತ್ತಾ 'ನಾನೂ ನೇಯುವೆ' ಎಂಬ ಕಾರ್ಯಗಾರ ನಡೆಸಿ ವೃತ್ತಿ ಶಿಕ್ಷಣ ಪಡೆಯುತ್ತಿದ್ದಾರೆ. ವಿದ್ಯಾರ್ಥಿಗಳು ಮಗ್ಗದ ಉತ್ಪನ್ನಗಳ ಪ್ರಾಮುಖ್ಯತೆ ಮತ್ತು ಸಮಸ್ಯೆಗಳ ಬಗ್ಗೆ ಅಧ್ಯಯನ ಶೀಲರಾಗಿದ್ದಾರೆ. ಸಾಂಪ್ರದಾಯಿಕ ಉಡುಗೆಯ ಬಗ್ಗೆ ಅಭಿಮಾನದಿಂದ ಕಲಿಕೆ ನಡೆಸಿದ್ದಾರೆ. ಸ್ಥಳೀಯ ನೇಕಾರರ ಸಂಪೂರ್ಣ ಸಹಕಾರದೊಂದಿಗೆ ಮಕ್ಕಳು, ವಿಜ್ಞಾನ ಲೇಖಕರು ಹಾಗೂ ಮಕ್ಕಳ ಸಾಹಿತಿಯಾಗಿರುವ ರಮೇಶ್ ವಿ. ಬಳ್ಳಾ ಈ ಯೋಜನೆಯ ಅನುಭವಗಳನ್ನು ಮಗ್ಗದ ಮಾತು ಎಂಬ ಶೀರ್ಷಿಕೆಯಲ್ಲಿ ಪುಸ್ತಕ ರೂಪಕ್ಕೆ ತರುವ ಆಶಯವನ್ನೂ ಹೊಂದಿದ್ದಾರೆ.

ನನ್ನೂರು ನನಗೆಷ್ಟು ಗೊತ್ತು?

ದರ್ಶನ್ ಆರ್. ಶೇಟ್
ಕಲಾವಿದರು
7019444944

ಸ್ಥಳೀಯ ಇತಿಹಾಸದ ಅರಿವು ನಮ್ಮ ವರ್ತಮಾನದ ಕಲಿಕೆಗೆ ಪ್ರೇರಕವಾಗಿ ನಿಲ್ಲುತ್ತದೆ ಎನ್ನುವುದನ್ನು ಸಾಕ್ಷೀಕರಿಸುವ ಯೋಜನೆ "ನನ್ನೂರು ನನಗೆಷ್ಟು ಗೊತ್ತು?"

ರಂಗಭೂಮಿ ಹಿನ್ನೆಲೆಯುಳ್ಳ ಶಿವಮೊಗ್ಗ ಜಿಲ್ಲೆಯ ಸಾಗರದ ದರ್ಶನ್ ಆರ್ ಶೇಟ್ ಅವರು, ಸಾಗರ ತಾಲೂಕಿನ ಹೊನ್ನೇಸರ ಉನ್ನತೀಕರಿಸಿದ ಸರ್ಕಾರಿ ಹಿ.ಪ್ರಾ.ಶಾಲೆಯಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದ್ದಾರೆ.

ಮಕ್ಕಳಲ್ಲಿ ತಮ್ಮ ಊರಿನ ಇತಿಹಾಸ, ವೈಶಿಷ್ಟ್ಯ, ಮಹತ್ವ, ಪರಿಸರ, ಪ್ರಾಕೃತಿಕ, ಭೌಗೋಳಿಕ, ಸಾಮಾಜಿಕ, ಆರ್ಥಿಕ ಮುಂತಾದ ಒಂದಿಲ್ಲೊಂದು ಮಾಹಿತಿಯನ್ನು ಹುಡುಕಿ ಕಲೆಹಾಕುವ ಮನೋಭಾವ ಬೆಳೆಯುವ ಉದ್ದೇಶದಿಂದ ಇವರು ಅನೇಕ ಚಟುವಟಿಕೆಗಳನ್ನು ನಡೆಸುತ್ತಿದ್ದು, ಊರ ಹಿರಿಯರಿಂದಲೇ ಊರಿನ ಪರಿಚಯವನ್ನು ಹೇಳಿಸುವ ಮೂಲಕ ಚಟುವಟಿಕೆಯನ್ನು ಆರಂಭಿಸಿದ್ದು, ಬಳಿಕ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಮಕ್ಕಳಿಗೆ ಸ್ಥಳೀಯ ರಾಜರ ಇತಿಹಾಸವನ್ನು ತಿಳಿಸುತ್ತಿದ್ದಾರೆ. ರಂಗಭೂಮಿಯ ಹಲವು ಸಾಧ್ಯತೆಗಳನ್ನೂ ಅಳವಡಿಸಿಕೊಂಡಿದ್ದಾರೆ.

ಸ್ಥಳೀಯ ಇತಿಹಾಸದ ಬಗ್ಗೆ ಹೆಚ್ಚು ಅನುಭವ ಹೊಂದಿರುವ ತಜ್ಞರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಕರೆಸಿ ಅವರಿಂದ ಸ್ಥಳೀಯ ಭೌಗೋಳಿಕ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು ಮಕ್ಕಳಿಗೆ ಮನನ ಮಾಡಿಕೊಡುವ ಇರಾದೆ ಇವರದಾಗಿದೆ.

ಹೆಜ್ಜೆಗಳು

ಮಾಹಿತಿಗಳನ್ನು
ಅರಿತುಕೊಳ್ಳುವ ಆಸಕ್ತ
ವಿದ್ಯಾರ್ಥಿಗಳಿಗೆ ಬೇಕಿರುವುದು
ಒಂದು ಉತ್ತಮ ಮಾರ್ಗದರ್ಶನವೇ
ಹೊರತು ತಂತ್ರಗಳಲ್ಲ ಮಕ್ಕಳು
ನಮಗಿಂತ ಸಣ್ಣವರೇ ಹೊರತು
ನಮಗಿಂತ ಕಡಿಮೆ ಅಲ್ಲ
– ದರ್ಶನ್ ಆರ್ ಶೇಟ್

ಒಂದು ಪ್ರದೇಶದ ಹಿಂದಿನ ಕಥೆಗಳನ್ನು ಕಲಿಯುವುದರಿಂದ ವರ್ತಮಾನದ ಬಗ್ಗೆ ನಾವು ಯೋಚಿಸುವ ವಿಧಾನವನ್ನು ಬದಲಾಯಿಸಬಹುದು ಎನ್ನುವಂತೆ ಸ್ಥಳೀಯ ಇತಿಹಾಸ ಹಾಗೂ ತಾನುನಿಂತ ನೆಲವೂ ಒಂದು ಐತಿಹಾಸಿಕಹಿನ್ನೆಲೆ ಪಡೆದುಕೊಂಡಿದೆ ಎಂಬ ಸತ್ಯಮಕ್ಕಳಿಗೆ ಬೆರಗು ಮೂಡಿಸುವುದರ ಜೊತೆಗೆ ಕಲಿಕೋತ್ಸಾಹವನ್ನು ಹೆಚ್ಚಿಸಿದೆ. ಕೆಳದಿಯ ಅರಸರ ಕುರಿತಾದ ಬೋಧನೆಗಳನ್ನಾಧರಿಸಿ ಮಕ್ಕಳಿಂದಲೇ ಕಥಾರೂಪಕವನ್ನುಸಿದ್ಧಪಡಿಸಿ, ನಾಟಕ ರೂಪದಲ್ಲಿ ಪ್ರಾದೇಶಿಕ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನದಲ್ಲಿದ್ದಾರೆ.

ಕಲಬುರಗಿಯ ಸೂಫಿಸಂತ ಖಾಜಾ ಬಂದೇ ನವಾಜ್ ದರ್ಗಾದ ಕುರಿತು ಮಕ್ಕಳ ಕಲಾ ಅಂತರ್ಗತ ಕಲಿಕೆಯ ಅನುಸಂಧಾನ



ತಾಜುದ್ದೀನ್ ಆಜಾದ್
ರಂಗಭೂಮಿ ಕಲಾವಿದರು
9845455717

ಬೇರೆ ಬೇರೆ ಕಾರಣಗಳಿಂದ ಸಾಮರಸ್ಯ ನಶಿಸುತ್ತಿರುವುದು ಮಕ್ಕಳಿಗೆ ಇತಿಹಾಸದ ಅರಿವು ಇಲ್ಲದಿರುವುದು ಅಪಾಯ
– ತಾಜುದ್ದೀನ್ ಆಜಾದ್

ಇತಿಹಾಸದ ಬಗೆಗಿನ ತಪ್ಪು ಕಲ್ಪನೆ ಅಥವಾ ಅರಿವು ಇಲ್ಲದಿರುವುದು, ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆ ತರುತ್ತಿದೆ. ಮಕ್ಕಳಲ್ಲಿ ಇತಿಹಾಸದ ಅರಿವಿನ ಜೊತೆಗೆ ಸಾಮರಸ್ಯದ ಭಾವನೆಗೆ ಪೂರಕವಾಗಿರುವ ಈ ಯೋಜನೆ "ಕಲಬುರಗಿಯ ಸೂಫಿಸಂತ ಖಾಜಾ ಬಂದೇ ನವಾಜ್ ದರ್ಗಾದ ಕುರಿತು ಮಕ್ಕಳ ಕಲಾ ಅಂತರ್ಗತ ಕಲಿಕೆಯ ಅನುಸಂಧಾನ"

ಕಲಬುರಗಿಯ ಕುವೆಂಪು ನಗರ ನಿವಾಸಿಯಾಗಿರುವ ನಟ, ಛಾಯಾಗ್ರಾಹಕ ತಾಜುದ್ದೀನ್ ಆಜಾದ್ ರವರು ತಮ್ಮ ಯೋಜನೆಯನ್ನು ಕಲಬುರಗಿ ರೈಲ್ವೇ ಸ್ಟೇಷನ್ ಸಮೀಪದ ಕೊಳಗೇರಿಯಲ್ಲಿರುವ ತಾರಫೈಲ್ ಸರ್ಕಾರಿ ಪ್ರೌಢಶಾಲೆಯ 30 ವಿದ್ಯಾರ್ಥಿ ಬಳಗಕ್ಕೆ ಅನುಷ್ಠಾನಿಸಿದ್ದಾರೆ.

ಕಲಬುರ್ಗಿ ಜಿಲ್ಲೆ ಸೂಫಿಸಂತ ಶರಣರನಾಡು, ಆದರೆ ಶಿಕ್ಷಣ ಕ್ಷೇತ್ರದಲ್ಲಿನ ಪಠ್ಯಪುಸ್ತಕದ ಹೆಸರಿನಲ್ಲಿ ನಡೆಯುತ್ತಿರುವ ಗೊಂದಲಗಳಿಂದ ವಿದ್ಯಾರ್ಥಿ ಸಮೂಹಕ್ಕೆ ತಪ್ಪುಸಂದೇಶಗಳು ರವಾನೆಯಾಗುತ್ತಿದೆ.

ಈ ಬಗ್ಗೆ ಎಚ್ಚರವಹಿಸುವುದರ ಜೊತೆಗೆ ರಂಗಭೂಮಿಯ ವಿವಿಧ ಆಯಾಮಗಳನ್ನು ಬಳಸಿಕೊಂಡು ರಂಗಾಟ, ಹಾಡು, ಚಿತ್ರದ ಮೂಲಕ ಇತಿಹಾಸವನ್ನು ಪರಿಚಯಿಸಿದರು.

ಆರಂಭದಲ್ಲಿ ಶಿಕ್ಷಕರು ಹಾಗೂ ಕೆಲಪೋಷಕರು ತಪ್ಪು ತಿಳುವಳಿಕೆಯಿಂದ ತನ್ನ ಯೋಜನೆಗೆ ಸಹಕಾರ ನೀಡಲಿಲ್ಲ, ಕ್ರಮೇಣ ನಮ್ಮ ಕ್ಷೇತ್ರ ಪ್ರವಾಸ, ಚಟುವಟಿಕೆಗಳು, ಸಂಪನ್ಮೂಲವ್ಯಕ್ತಿಗಳ ಉಪನ್ಯಾಸ ಎಲ್ಲವನ್ನೂ ಅರಿತುಕೊಳ್ಳುತ್ತಾ ಯೋಜನೆಗೆ ಬೆಂಬಲವಾಗಿ ನಿಂತಿದ್ದಾರೆ. ಸೂಫಿ ಸಂತರು ತಮ್ಮ ಸಾಹಿತ್ಯಗಳ ಮೂಲಕ ನೀಡಿದ ಸಾಮರಸ್ಯದ ಮಹತ್ವವನ್ನು ತಿಳಿಸಿತ್ತಾ, ಮಕ್ಕಳಿಗೆ ಕಿರುನಾಟಕಗಳ ಅಭ್ಯಾಸ ನಡೆಸುತ್ತಾ, ನಶಿಸಿ ಹೋಗುತ್ತಿರುವ ಕವ್ವಾಲಿ ಕಲೆಯ ನೆರವಿನಿಂದ ಇತಿಹಾಸ ಅರಿವು, ಕ್ಷೇತ್ರ ಪ್ರವಾಸವನ್ನು ನಡೆಸಲಾಗಿದೆ. ಕೆಲವೊಂದು ಪ್ರವಾಸದ ಸಂದರ್ಭ ವಿದ್ಯಾರ್ಥಿಗಳು ಅತ್ಯಂತ ಉತ್ಸಾಹ ಭರಿತರಾಗಿ ಭಾಗವಹಿಸಿದ್ದು, ಶಿಕ್ಷಕರೂ ಬೆಂಬಲವನ್ನು ನೀಡುತ್ತಿದ್ದರು ಎನ್ನುತ್ತಾರೆ ತಾಜುದ್ದೀನ್.

ಅಂತರ್ ಕ್ರಿಯಾತ್ಮಕ ರಂಗಭೂಮಿ

ರಾಣಿ ಡಿ.ಎಂ.
ರಂಗಭೂಮಿ ಕಲಾವಿದರು
9986972220

ಯಾವುದೇ ಪಾಠವು ಮಕ್ಕಳಿಗೆ ಹೊಸಾನುಭವದ ಜೊತೆಗೆ ಪಠ್ಯದ ವಿಷಯಗಳು ದೃಶ್ಯಗಳಾಗಿ ಕಣ್ಣೆದುರು ಬಂದಾಗ ಮಕ್ಕಳ ಕಲಿಕೆ ಸುಲಭವಾಗುತ್ತದೆ ಎನ್ನುವ ಪ್ರಯೋಗಕ್ಕೆ ಅಂತರ್ ಕ್ರಿಯಾತ್ಮಕ ರಂಗಭೂಮಿ ಸಾಕ್ಷಿಯಾಗುತ್ತಿದೆ.

ರಂಗಭೂಮಿಯ ಸಖ್ಯ ಹೊಂದಿರುವ ಮೈಸೂರಿನ ರಾಣಿ ಡಿ.ಎಂ.ರವರು ಹೊಸಹುಂಡಿ ಸರ್ಕಾರಿ ಪ್ರೌಢಶಾಲೆಯ ಮಕ್ಕಳಿಗಾಗಿ ಇವರು ತಮ್ಮ ಚಟುವಟಿಕೆಯನ್ನು ನಡೆಸುತ್ತಿದ್ದು, ಮಕ್ಕಳ ಕ್ರಿಯಾತ್ಮಕ ಕಲಿಕೆಗೆ ಪ್ರೇರಣೆಯಾಗುತ್ತಿದ್ದಾರೆ.

ಅನೇಕ ನಾಟಕಗಳ ನಿರ್ದೇಶನ, ನಟನೆಯ ಅನುಭವವನ್ನೇ ಇರಿಸಿಕೊಂಡು ಅಂತರ್ ಕ್ರಿಯಾತ್ಮಕ ರಂಗಭೂಮಿ ಮುಖೇನ ಮಕ್ಕಳ ಮನಸ್ಸನ್ನು ಗೆಲ್ಲಿಸುವ/ಗೆಲ್ಲುವ ಉತ್ಸಾಹದಲ್ಲಿದ್ದಾರೆ. ಅಂತರ್ ಕ್ರಿಯಾತ್ಮಕ ರಂಗಭೂಮಿಯಲ್ಲಿ ಪ್ರೇಕ್ಷಕರು ನಟರೊಂದಿಗೆ ಸಂವಹನ ನಡೆಸುವ ಚಟುವಟಿಕೆ ಇರುತ್ತದೆ, ಈ ಬಗೆಯ ಪ್ರಕ್ರಿಯೆಗಳು ಮಕ್ಕಳ ಕಲಿಕೆಯ ಹಂತದಲ್ಲಿ ಆಗಬೇಕು ಎನ್ನುವ ಕಾಳಜಿಯೊಂದಿಗೆ ರಾಣಿಯವರು ಮಕ್ಕಳಿಗೆ ರಂಗಭೂಮಿಯ ವಿವಿಧ ಸಾಧ್ಯತೆಗಳನ್ನು ಪರಿಚಯಿಸುತ್ತಾ ಮಕ್ಕಳನ್ನು ಕಲಿಕೆಗೆ ತೆರೆದುಕೊಳ್ಳಬಹುದಾದ ಅಂತರ್ ಕ್ರಿಯಾತ್ಮಕ ರಂಗಭೂಮಿಯ ಪ್ರಯೋಗ ಮಾಡುತ್ತಿದ್ದಾರೆ.

ಶಿಕ್ಷಕ ವರ್ಗ ಮತ್ತು ಪೋಷಕರ ಸಹಭಾಗಿತ್ವ ಇದ್ದಾಗ ಮಾತ್ರ ಮಕ್ಕಳ ಕಲಿಕೆ ಪರಿಣಾಮಕಾರಿಯಾಗುತ್ತದೆ, ಇದಕ್ಕೆ ಪೂರಕವಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.
– ರಾಣಿ ಡಿ.ಎಂ.

ಮಕ್ಕಳ ಜೊತೆ ಮಕ್ಕಳಾಗಿ ರಂಗಾಟಗಳನ್ನು ಆಡುವುದು, ಕಥೆ, ನಗೆಹನಿಗಳನ್ನು ಹೇಳುವುದು. ಮಕ್ಕಳಿಗೆ ಕೆಲವು ಸಂದರ್ಭಗಳನ್ನು ಮಕ್ಕಳಿಗೆ ಮನದಟ್ಟು ಮಾಡಿ, ಅವುಗಳಿಗೆ ಮಕ್ಕಳು ಹೇಗೆ ಸ್ಪಂದಿಸುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದು, ಅವುಗಳ ವಿಮರ್ಶೆ ಇವರ ಮೊದಲ ಚಟುವಟಿಕೆಯಾದರೆ, ಜೊತೆಗೆ ಸಂಪನ್ಮೂಲ ವ್ಯಕ್ತಿಗಳಿಂದ ತರಗತಿ, ಮಕ್ಕಳ ಅಧ್ಯಯನ ಪ್ರವಾಸ ನಾಟಕ ಪ್ರದರ್ಶನಗಳ ವೀಕ್ಷಣೆ ಮೊದಲಾದ ಪ್ರಾತ್ಯಕ್ಷಿಕೆಗಳನ್ನು ನಡೆಸುತ್ತಿದ್ದಾರೆ. ಶಾಲಾ ಶಿಕ್ಷಕರನ್ನು ತೊಡಗಿಸಿಕೊಂಡಿರುವ ಇವರು, ಮಕ್ಕಳ ಪೋಷಕರನ್ನು ಶಾಲೆಯತ್ತ ಆಕರ್ಷಿಸಿದರೆ ಅದು ಮಕ್ಕಳ ಕಲಿಕಾಗುಣಮಟ್ಟವನ್ನು ಹೆಚ್ಚಿಸುವ ಸಾಧ್ಯತೆಯ ಬಗ್ಗೆಯ ಶಿಕ್ಷಕರಿಗೆ ಮನವರಿಕೆ ಮಾಡಿದ್ದು, ಪೂರಕ ಯೋಜನೆ ಹಾಕಿಕೊಂಡಿದ್ದಾರೆ.

ತಿಂಗಳನಿಂದ ತರಗತಿಯ ಕಡೆಗೆ

ಸಂತೋಷ್ ದಿಂಡಗೂರು
ರಂಗಭೂಮಿ ಕಲಾವಿದರು
7259868690

ಆಧುನಿಕತೆಯ ಧಾವಂತದಲ್ಲಿ ಮೂಲಸಂಸ್ಕೃತಿ ಆಚರಣೆ ನಶಿಸುತ್ತಿರುವ ಈ ಕಾಲಘಟ್ಟದಲ್ಲಿ ಪ್ರತಿಯೊಂದು ಜನಪದ ಆಚರಣೆಗಳೂ ಪರಿಸರಕ್ಕೆ ಪೂರಕ ಮತ್ತು ಪ್ರೇರಕ ಎನ್ನುವುದನ್ನು "ತಿಂಗಳನಿಂದ ತರಗತಿಯ ಕಡೆಗೆ" ಯೋಜನೆ ಎಚ್ಚರಿಸುತ್ತಿದೆ.

ನೀನಾಸಂ ಪದವೀಧರನಾಗಿರುವ ಹಾಸನ ಚಿನ್ನರಾಯಪಟ್ಟಣ ನಿವಾಸಿಯಾಗಿರುವ ಸಂತೋಷ್ ದಿಂಡಗೂರು ರವರು ಕಲ್ಕೆರೆ ಸರ್ಕಾರಿ ಹಿ.ಪ್ರಾ.ಶಾಲೆಯ ಮಕ್ಕಳಿಗಾಗಿ ಈ ಯೋಜನೆಯನ್ನು ಕಾರ್ಯಗತಗೊಳಿಸಿದವರು. ಹಿರಿಯರು ಚಂದ್ರನನ್ನು ಕೇಂದ್ರವಾಗಿರಿಸಿಕೊಂಡು ಆಚರಿಸುತ್ತಿದ್ದ ಜನಪದ ಆಚರಣೆಯೇ "ತಿಂಗಳು ಮಾವನ ಹಬ್ಬ ಅಥವಾ ಮಳೆ ಕರೆಯುವ ಹಬ್ಬ". ಸರಿಯಾದ ಕಾಲಕ್ಕೆ ಮಳೆಬರಲಿ, ಒಳ್ಳೆ ಬೆಳೆಬರಲಿ

ಮಕ್ಕಳು ಕೇವಲ ಪಠ್ಯಕ್ಕೆ ಸೀಮಿತವಾಗದೆ ಹೊರಗಿನ ಕಲೆ, ಆಚರಣೆಗಳೂ ಕೂಡ ಮಕ್ಕಳ ಅಧ್ಯಯನದ ವಿಷಯಗಳು ಎಂಬುದನ್ನು ನಮ್ಮ ಯೋಜನೆ ಸಾರಿ ಹೇಳುತ್ತಿದೆ
– ಸಂತೋಷ್ ದಿಂಡಗೂರು

ಎಂದು ಎಲ್ಲಾ ಸಮುದಾಯದವರು ಸೇರಿ ಆಚರಿಸುವ ಹಬ್ಬ ಇದಾಗಿದೆ. ಉತ್ತಮ ಸಂದೇಶ ನೀಡುವ ಈ ಆಚರಣೆಯನ್ನು ಸ್ಥಳೀಯ ಆಟ, ಕತೆ, ಹಾಡುಗಳ ಮುಖೇನ ಮಕ್ಕಳಿಗೆ ಹತ್ತಿರವಾಗಿಸಿದರು ಮಾತ್ರವಲ್ಲದೆ ಗ್ರಾಮೀಣ ಆಟಗಳ ಮೂಲಕ ಆಟಗಳಿಂದ ಪಾಠವೂ ಪರಿಣಾಮಕಾರಿ ಎನ್ನುವ ಪರಿಕಲ್ಪನೆಯನ್ನು ನಿಜಗೊಳಿಸುತ್ತಾ ಸಾಗುತ್ತಿದ್ದಾರೆ. ಇದರ ಜೊತೆಯಲ್ಲಿ ಸ್ಥಳೀಯ ಜನಪದ ಕಲೆಗಳಾದ ಸೋಮನ ಕುಣಿತ, ವೀರಗಾಸೆ, ಕೋಲಾಟ, ಸೋಬಾನೆ, ರಾಗಿ ಬೀಸೋಪದ ಇತ್ಯಾದಿಗಳನ್ನು ಮಕ್ಕಳಿಗೆ ತಿಳಿಸಿಕೊಡುವ ಉದ್ದೇಶ ಇವರದು. ಆ ಆಚರಣೆಗಳ ಜೊತೆಗೆ ಮಣ್ಣಿನನಂಟು, ಪ್ರಾಕೃತಿಕ ಬಣ್ಣದ ಜ್ಞಾನ, ಗಣಿತದ ಆಸಕ್ತಿ, ಬಾಹ್ಯಾಕಾಶದ ಹಲವು ಸಂಗತಿಗಳನ್ನು ಮಕ್ಕಳಿಗೆ ತಲುಪಿಸುವ ದೃಷ್ಟಿಕೋನ ಇವರದಾಗಿದೆ.

ತಿಂಗಳು ಮಾವನ ಹಬ್ಬದಲ್ಲಿ ಇಡೀ ಸಮುದಾಯದ ಎಲ್ಲಾ ಅಂದರೆ ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲಾ ವಯೋಮಾನದವರು ಭಾಗಿಯಾಗುವುದರಿಂದ ಶಿಕ್ಷಕರು, ಮಕ್ಕಳ ಪೋಷಕರು ಸಹಿತ ಇಡೀ ಸಮುದಾಯವನ್ನು ಯೋಜನೆಯ ಜೊತೆಗೆ ಕೊಂಡೊಯ್ಯುವ ಉತ್ಸಾಹ ಇವರಲ್ಲಿದೆ.

ಚಿಂದಿ ಆಯುವ ಸಮುದಾಯದ ಕಥೆಗಳು

ಶಿವಕ್ಕ ಕುರುವತ್ತಿ
ರಂಗಭೂಮಿ ಕಲಾವಿದರು
7019537653

ಯಾವುದೇ ಸಮುದಾಯ ಮೂಲಜನಪದಗಳನ್ನು ಮರೆತಾಗ ಆ ಸಮುದಾಯವೂ ನಶಿಸುವ ಸಾಧ್ಯತೆ ಹೆಚ್ಚು, ಹಾಗಾಗ ಬಾರದು ಎನ್ನುತ್ತದೆ "ಚಿಂದಿ ಆಯುವ ಸಮುದಾಯದ ಕಥೆಗಳು"

ರಂಗಭೂಮಿ ಕಲಾವಿದೆಯಾಗಿರುವ ಶಿವಕ್ಕ ಕುರುವತ್ತಿ ಯವರು, ಮೈಸೂರು ಜಿಲ್ಲೆಯ ಯಾದವಗಿರಿ ಸರ್ಕಾರಿಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗಾಗಿ ಈ ಚಟುವಟಿಕೆಯನ್ನು ನಡೆಸುತ್ತಿದ್ದು, ಆ ಸಮುದಾಯದ ನಶಿಸಿ ಹೋಗುತ್ತಿರುವ ಮೂಲ ಜನಪದ ಕಲೆಯನ್ನು ನೆನಪಿಸುವ ಮತ್ತು

ಸ್ಥಳೀಯರಲ್ಲಿ ಯಾವ ಕಲೆಯಲ್ಲಿ ಆಸಕ್ತಿಗಳಿಲ್ಲ ಎನ್ನುವುದಕ್ಕಿಂತ ನಿತ್ಯ ಬದುಕಿನ ಹೋರಾಟದ ಭರದಲ್ಲಿ ಕಲೆ ಮಾಯವಾಗಿದೆ ಎನ್ನುವುದನ್ನು ತನ್ನ ಪ್ರಯೋಗದ ಮೂಲಕ ಕಂಡುಕೊಂಡೆ
– ಶಿವಕ್ಕ ಕುರುವತ್ತಿ

ಉಳಿಸುವ ಪ್ರಯತ್ನದಲ್ಲಿದ್ದಾರೆ.

ಆ ಸಮುದಾಯದ ಹಬ್ಬಗಳ ಆಚರಣೆ, ಸಾಂಸ್ಕೃತಿಕ ಚಟುವಟಿಕೆ, ಬದುಕಿನ ಶೈಲಿಗಳ ಬಗ್ಗೆ ಮಾಹಿತಿ ಕ್ರೋಢೀಕರಣ, ಮಕ್ಕಳ ಜೊತೆಗೆ ಚರ್ಚೆ, ಚಿತ್ರರಚನೆ ,ಕಿರುನಾಟಕಗಳ ಪ್ರದರ್ಶನದ ಜೊತೆಗೆ, ಒಂದು ಪಠ್ಯದ ವಿಷಯವನ್ನು ಜನಪದೀಯವಾಗಿ ಅಥವಾ ಒಂದು ಕಲಾರೂಪದ ಜೊತೆ ಅರ್ಥೈಸಿದಾಗ ಪಠ್ಯ ಮಕ್ಕಳಿಗೆ ಬೇಗ ಹತ್ತಿರವಾಗುತ್ತದೆ ಎನ್ನುವ ಕಲಾ ಅಂತರ್ಗತ ಶಿಕ್ಷಣದ ಪ್ರಯೋಗ ಇಲ್ಲಿ ಸಾಕಾರಗೊಳ್ಳುತ್ತಿದೆ. ಒಟ್ಟು 38 ಮಕ್ಕಳನ್ನು ತಮ್ಮ ಯೋಜನಾ ವ್ಯಾಪ್ತಿಗೆ ಸೇರಿಸಿಕೊಂಡಿದ್ದು, ಯೋಜನೆಯ ವಿಚಾರ ಮಾತ್ರವಲ್ಲದೆ ,ಪಠ್ಯಪುಸ್ತಕದಲ್ಲಿನ ವಿಷಯಗಳನ್ನು ವಿಮರ್ಶೆಗೆ ಒಳಪಡಿಸುವುದು ಮತ್ತು ಅದನ್ನು ತಮ್ಮ ಶಾಲಾ ಶಿಕ್ಷಕರೊಂದಿಗೆ ಹೆಚ್ಚು ಚರ್ಚಿಸಿ ತಮ್ಮದೇ ಆದ ರೀತಿಯಲ್ಲಿ ಉತ್ತರಗಳನ್ನು ಕಂಡುಕೊಳ್ಳುವ ಪ್ರಕ್ರಿಯೆ ಮಕ್ಕಳ ಸಕಾರಾತ್ಮಕ ಪ್ರಗತಿಗೆ ಸಾಕ್ಷಿಯಾಗಿದೆ.

ಶಾಲಾ ಶಿಕ್ಷಕರ ಒಡನಾಟದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಿದರೆ ಹೆಚ್ಚು ಪರಿಣಾಮ ಎನ್ನುವ ಅಭಿಲಾಷೆಯೊಂದಿಗೆ ಚರ್ಚಾಕೂಟಗಳು, ಆಟಗಳ ಮುಖೇನ ಶಿಕ್ಷಕರು ಮತ್ತು ಮಕ್ಕಳ ಮುಖಾಮುಖಿಯಾಗಿಸುವ ಯೋಜನೆ ಇವರದಾಗಿದ್ದು,

ಮಕ್ಕಳು–ಶಿಕ್ಷಕರು ಹಾಗೂ ಸಮುದಾಯದ ನಡುವೆ ಸೃಜನಶೀಲ ಚಿಂತನೆ ಹುಟ್ಟುಹಾಕುವ ತವಕದಲ್ಲಿದ್ದಾರೆ.

ಕಿಡ್ಡಿ ಕಿಂಗ್ಡಮ್ ಅಕಾಡೆಮಿ ಲಕ್ನೋ

k.k.academy2012@gmail.com

ಲಕ್ನೋ ನಗರವು ದೀರ್ಘ ಇತಿಹಾಸವನ್ನು ಹೊಂದಿರುವ ಆಕರ್ಷಕ ನಗರ. ಅದರ ಬೀದಿಗಳು, ಜನರ ಕಥೆಗಳು, ಭವ್ಯವಾದ ಕಟ್ಟಡಗಳು ಮತ್ತು ಸ್ಮಾರಕಗಳು, ದೇವಾಲಯದ ಘಂಟೆಗಳ ನಾದ, ತುಮ್ರಿಯ ಮಾಂತ್ರಿಕ ರಿಂಗಣಗಳು ಮತ್ತು ಕಥಕ್‌ನ ನೃತ್ಯಗಳಿಂದ ತುಂಬಿವೆ. ಇಲ್ಲಿನ ಕರಕುಶಲ ಕಲೆಗಳು ಹೇಗೆ ಪ್ರಸಿದ್ಧವೋ ಹಾಗೆಯೇ ಅತ್ಯಂತ ವಿಶಿಷ್ಟವಾದ ವಿಶ್ವ–ಪ್ರಸಿದ್ಧ ಪಾಕಪದ್ಧತಿಯ ಘಮಲು, ಲಕ್ನೋವಿ ಉರ್ದು ಎಂದು ಸಾಮಾನ್ಯವಾಗಿ ಉಲ್ಲೇಖಿಸಲ್ಪಡುವ ಭಾಷೆ, ವಿಶೇಷ ಉಚ್ಚಾರಣೆಗಳು, ಇದರಿಂದ ಪ್ರೇರಿತರಾದ ಅಸಂಖ್ಯ ಸಾಹಿತಿಗಳ ಬರಹಗಳು ಈ ನಗರದ ಹೃದಯ ಮಿಡಿತಗಳು. 'ಚಿಲ್ಡ್ರನ್ ಆಸ್ ಸಿಟಿಜನ್ಸ್' ಎಂಬ ಈ ಯೋಜನೆಯು ವಿದ್ಯಾರ್ಥಿಗಳನ್ನು ಲಕ್ನೋ ನಗರದ ಇತಿಹಾಸ, ಪರಂಪರೆ ಮತ್ತು ಅಲ್ಲಿನ ಶ್ರೀಮಂತ ಸಂಸ್ಕೃತಿಯನ್ನು ಹೆಮ್ಮೆಯಿಂದ ಅರ್ಥೈಸಿಕೊಳ್ಳುವ ಪ್ರಯತ್ನವೇ ಈ ಯೋಜನೆಯ ಮುಖ್ಯ ಉದ್ದೇಶ.

> ಶಾಲಾ ಶಿಕ್ಷಣದ ಸಹಾಯದಿಂದ ಮಕ್ಕಳು ಬೆಳೆದಾಗ ಅವರಿಗೆ ಪ್ರಜಾಪ್ರಭುತ್ವದಲ್ಲಿ ಭಾಗವಹಿಸುವ ಮತ್ತು ಹೇಗೆ ಭಾಗವಹಿಸಬೇಕೆನ್ನುವ ಅರಿವು ಮೂಡುತ್ತದೆ. ಮಕ್ಕಳು ಭವಿಷ್ಯದ ಪ್ರಜೆಗಳಷ್ಟೇ ಅಲ್ಲ, ನಮ್ಮ ಸಮಾಜದ ಆಸ್ತಿ
> – ರಾಹುಲ್ ಅಗರ್ವಾಲ್

ನಾವುಗಳು ವಾಸಿಸುವ ಸ್ಥಳಗಳ ಸಾಂಸ್ಕೃತಿಕ ಪರಂಪರೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಇತ್ತೀಚಿನ ದಿನಗಳಲ್ಲಿ, ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಮಕ್ಕಳು ಮತ್ತು ಯುವಜನರಿಗೆ ಸಾಂಸ್ಕೃತಿಕ ಪರಂಪರೆಯ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿ ಸುವ ಪ್ರಯತ್ನಗಳನ್ನು ನಡೆದಿವೆ. ಆದಾಗ್ಯೂ ರಚನಾತ್ಮಕ ಮತ್ತು ಪಠ್ಯಕ್ರಮ-ಕೇಂದ್ರಿತ ಶಾಲಾ ಶಿಕ್ಷಣದಲ್ಲಿ ಇದನ್ನು ಹೆಚ್ಚಾಗಿ ಪ್ರಶಂಸಿಸಲಾಗುವುದಿಲ್ಲ. ಆ ಕೊರತೆಯನ್ನು ನೀಗಿಸುವ ಪ್ರಯತ್ನವೇ ಈ ಯೋಜನೆ. ಇತಿಹಾಸದೊಂದಿಗೆ ಭವಿಷ್ಯದ ಕನಸುಗಳ ಅನುಸಂಧಾನ.

'ದಿ ಮ್ಯಾಚ್‌ಬಾಕ್ಸ್ ಡೈರಿ' ಕಥೆ ನನಗೆ ಬಾಲ್ಯದ ಕಥೆಗಳನ್ನು ನೆನಪಿಸಿತು, ಕಲಿಕೆಯ ಸಾಧ್ಯತೆಗಳು ಹೊಸ ಅನುಭವ ತಂದುಕೊಟ್ಟಿದೆ
–ಆರಾಧ್ಯ

ಯೋಜನೆಯ ಆಳವು ಅದರ ಎರಡು ಪ್ರಮುಖ ಅಂಶಗಳಲ್ಲಿದೆ: ಎ) ಮಕ್ಕಳ ದೃಷ್ಟಿಕೋನದಿಂದ ನಗರದ ಸಾಂಸ್ಕೃತಿಕ ಜೀವನವನ್ನು ಅರ್ಥಮಾಡಿಕೊಳ್ಳುವುದು; ಮತ್ತು ಬಿ) ನಗರದ ನಾಗರಿಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದು. ಇವುಗಳನ್ನು – ಮಕ್ಕಳ ದೃಷ್ಟಿಯಲ್ಲಿ ಲಕ್ನೋ ನಗರ, ನಗರದ ವಿನ್ಯಾಸ ರಚನೆ, ಮುಖ್ಯ ಘಟನಾವಳಿಗಳು, ಅಲ್ಲಿನ ಕಲೆ ಮತ್ತು ಸಂಸ್ಕೃತಿ, ಪ್ರವಾಸ ಮತ್ತು ಸ್ಮಾರಕಗಳು – ಅನ್ನುವಂತಹ ಆರು ಚಟುವಟಿಕೆಗಳ ವ್ಯಾಪ್ತಿಯಲ್ಲಿ ಯೋಜನೆಯ ಕಾರ್ಯ ಚಟುವಟಿಕೆಗಳು ನಡೆದು ಮಕ್ಕಳನ್ನು ಪ್ರಜ್ಞಾವಂತ ನಾಗರೀಕರನ್ನಾಗಿಸುವ ಆಶಯವನ್ನು ಹೊಂದಿದೆ. ಸಾರ್ವಜನಿಕ ಪ್ರದರ್ಶನಗಳು ಮತ್ತು ಮಕ್ಕಳ ಬರಹಗಳ ಪ್ರಕಟಣೆಯೊಂದಿಗೆ ಯೋಜನೆಯು ಮುಕ್ತಾಯವಾಗುತ್ತದೆ.

ಮಕ್ಕಳ ಮಸೂರದಲ್ಲಿ ಡಿನೋಟಿಫೈಡ್ ಸಮುದಾಯಗಳು

– ಮುಸ್ಕಾನ್ ಸಂಸ್ಥೆ, ಭೋಪಾಲ್
shivani@muskaan.org

ಒಂದು ಮಾತಿನಲ್ಲಿ ಹೇಳುವುದಾದರೆ ಮುಸ್ಕಾನ್ ಸಂಸ್ಥೆಯು ನಡೆಸುವ 'ಜೀವನ್ ಶಿಕ್ಷಾ ಪಹಲ್' ಶಾಲೆಯ ಡಿನೋಟಿಫೈಡ್ ಸಮುದಾಯಗಳಾದ ಪಾರ್ಧಿ ಮತ್ತು ಕಂಜರ್ ಮಕ್ಕಳಲ್ಲಿ 'ಸಮಾಜದಲ್ಲಿ ನಾವೂ ಇದ್ದೇವೆ' ಎನ್ನುವ ಧೃಡತೆಯನ್ನು ಹಾಗು ಮುಖ್ಯವಾಹಿನಿಯ ಚರ್ಚೆಗಳಲ್ಲಿ ಭಾಗವಹಿಸಲು ಸ್ವಾಭಿಮಾನವನ್ನು ಮೂಡಿಸುವುದಾಗಿದೆ. ಸಂಸ್ಥೆಯು ಪಾರ್ಧಿ ಮತ್ತು ಕಂಜರ್ ಸಮುದಾಯಗಳ ಪ್ರತಿನಿಧಿಗಳನ್ನೇ ಯೋಜನೆಯ ಸುಗಮಕಾರರೆಂದು ಗುರುತಿಸಿದೆ. ಈ ನಡೆಯು ಬುಡಕಟ್ಟು ಮಕ್ಕಳ ಸ್ವಾಯತ್ತತೆಯನ್ನು ಸಂರಕ್ಷಿಸುವುದರ ಜೊತೆಯಲ್ಲೇ ಆ ಮಕ್ಕಳು ಯೋಜನೆಯಲ್ಲಿ ಹೆಚ್ಚು ಸಕಾರಾತ್ಮಕ ರೀತಿಯಲ್ಲಿ ಭಾಗವಹಿಸಲು ಅವಕಾಶವನ್ನು ಒದಗಿಸುತ್ತದೆ.

ಮಕ್ಕಳ ಶಿಕ್ಷಣದ ಹಕ್ಕಿಗಾಗಿ ನಿರಂತರ ಹೋರಾಟ, ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ನಿರೀಕ್ಷೆಗಳು, ಮತ್ತು ಮುಖ್ಯವಾಹಿನಿಯಲ್ಲಿ ಎದುರಾಗುವ ನಿರಾಶೆಗಳಂತಹ ಅಂಶಗಳನ್ನು ಎದುರಿಸುವ ಮನೋಬಲವನ್ನು ಪ್ರೋತ್ಸಾಹಿಸುವ ಮುಸ್ಕಾನ್, ಡಿನೋಟಿಫೈಡ್ ಸಮುದಾಯಗಳಿಗೆ ಒಂದು ದೊಡ್ಡ ಬೆಂಬಲ ವ್ಯವಸ್ಥೆಯಾಗಿದೆ. ಆದುದರಿಂದ ಸಮುದಾಯಗಳೊಂದಿಗೆ ಸಂಸ್ಥೆಯು ಬಲವಾದ ಸಂಬಂಧವನ್ನು ಹೊಂದಿದೆ.

ಈ 18 ತಿಂಗಳ ಯೋಜನೆಯು ಎರಡು ಪ್ರಾಥಮಿಕ ಉದ್ದೇಶಗಳನ್ನು ಹೊಂದಿದೆ. ಮೊದಲನೆಯದಾಗಿ ಪಾರ್ಧಿ ಮತ್ತು ಕಂಜರ್ ಬುಡಕಟ್ಟುಗಳ ಶಬ್ದಕೋಶ, ಕಥೆಗಳು, ಹಾಡುಗಳು ಮತ್ತು ಪ್ರಾದೇಶಿಕ ಸಂಗೀತವನ್ನು ದಾಖಲಿಸುವುದಾದರೆ, ಎರಡನೆಯದಾಗಿ ಕ್ರಿಮಿನಲ್ ಟ್ರೈಬಲ್ ಆಕ್ಟ್ ಕಾಯಿದೆಯ ಬಗ್ಗೆ ಮಕ್ಕಳ ಲ್ಲಿ ಜಾಗೃತಿಯನ್ನು ತರುವುದು. ಯೋಜನೆಯಲ್ಲಿ ಆಲೋಚಿಸಿರುವ ಕಾರ್ಯ ಚಟುವಟಿಕೆಗಳಂತೆ ಮಕ್ಕಳು ತಮ್ಮ ಹಿನ್ನೆಲೆಗಳನ್ನು ಅರಿತುಕೊಳ್ಳುವ ಸಲುವಾಗಿ ಸಮುದಾಯದ ಪ್ರತಿನಿಧಿಗಳಲ್ಲಿ ಹೋಗಿ ಅವರಿಂದ ಸಂಬಂಧಿಸಿದ ಮೌಖಿಕ ಇತಿಹಾಸಗಳನ್ನು, ಮತ್ತು ಹಾಡುಗಳನ್ನು ಸಂದರ್ಶನಗಳ ಮೂಲಕ ದಾಖಲಿಸುತ್ತಾರೆ. ನಂತರ ಆ ಅನುಭವಗಳ ಹೂರಣವೆನ್ನುವಂತೆ ತಮ್ಮ ಸಮುದಾಯದ ವಿಶಿಷ್ಟ ಶಬ್ದಕೋಶವನ್ನು ಸಿದ್ಧಪಡಿಸುವ ಮಹತ್ವಾಕಾಂಕ್ಷೆಗೆ ಮಕ್ಕಳು ತೊಡಗಿಸಿಕೊಳ್ಳುತ್ತಾರೆ. ಇದಲ್ಲದೆ, ನೇರವಾಗಿ ಅಥವಾ ಪರೋಕ್ಷವಾಗಿ ಪ್ರಭಾವಿತವಾಗಿರುವ ತಮ್ಮ ಜೀವನ ಸಂಗತಿಗಳನ್ನು ರೇಖಾಚಿತ್ರಗಳಿಂದಲೂ ಮತ್ತು ಕಥಾ ರಚನೆಗಳಿಂದಲೂ ತಮ್ಮ ಅಸ್ತಿತ್ವವನ್ನು ಯೋಜನಾವಧಿಯಲ್ಲಿ ನಿರಂತರವಾಗಿ ಅಭಿವ್ಯಕ್ತಿಗೊಳಿಸುತ್ತಾರೆ. ಈ ಪ್ರಯಾಣದಲ್ಲಿ, ಅವರು ತಮ್ಮಂತೆಯೇ ಅನುಭವವುಳ್ಳ ಇನ್ನು ಕೆಲವು ಸಮುದಾಯಗಳ ಮಕ್ಕಳ ಅಥವಾ ಜೀವನವನ್ನು ಪ್ರತಿಬಿಂಬಿಸುವ ಇತರ ಕೆಲವು ಕಥೆಗಳನ್ನು ಒಟ್ಟಾಗಿ ಓದುತ್ತಾ ತಮ್ಮ ಆತ್ಮಸ್ಥೈರ್ಯವನ್ನು ಹೆಚ್ಚಿಸಿಕೊಳ್ಳುತ್ತಾರೆ.

ಮೀರಜ್ ಕುಶಲಕರ್ಮಿಗಳು ಮತ್ತು ಕೊಡುಗೆಗಳು

ಕಲಕೇರಿ ಸಂಗೀತ ವಿದ್ಯಾಲಯ
ಕಲಕೇರಿ ಗ್ರಾಮ, ಧಾರವಾಡ
info@ksv.org.in

ಧಾರವಾಡ ಜಿಲ್ಲೆಯ ಕಲಕೇರಿ ಗ್ರಾಮದಲ್ಲಿ ಕಲಕೇರಿ ಸಂಗೀತ ವಿದ್ಯಾಲಯವಿದೆ. ಆರಂಭದಲ್ಲಿ ಇಲ್ಲಿ ಅನೌಪಚಾರಿಕವಾಗಿ ಸಂಗೀತ ಶಾಲೆಯನ್ನು ಪ್ರಾರಂಭಿಸಲಾಗಿತ್ತು. ಆದರೀಗ ಕಲಕೇರಿ ಸಂಗೀತ ವಿದ್ಯಾಲಯ ವಿದ್ಯಾರ್ಥಿಗಳಿಗೆ ಹತ್ತನೇ ತರಗತಿವರೆಗೂ ಔಪಚಾರಿಕ ಶಿಕ್ಷಣ ನೀಡುತ್ತಿದೆ. ಜೊತೆಗೆ ಕಲಕೇರಿಯ ಸುತ್ತಮುತ್ತವಿರುವ ಬಡ ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ, ವಿಶೇಷವಾಗಿ ಸಂಗೀತ ಕ್ಷೇತ್ರದಲ್ಲಿ ಭವಿಷ್ಯ ರೂಪಿಸಿಕೊಳ್ಳಲು ಅನುಕೂಲವಾಗುವಂತೆ ಕೆಲಸ ಮಾಡುತ್ತಿದೆ. ಶೈಕ್ಷಣಿಕವಾಗಿ 100% ರಷ್ಟು ಫಲಿತಾಂಶ ಪಡೆಯುವುದರ ಮೂಲಕ ಮಕ್ಕಳಿಗೆ ಉತ್ತಮ ಶೈಕ್ಷಣಿಕ ವ್ಯವಸ್ಥೆ, ವಸತಿ, ಊಟ ನೀಡುತ್ತಾ, ಹಿಂದುಸ್ತಾನಿ ಸಂಗೀತ, ಕಥಕ್ ನೃತ್ಯ, ನಾಟಕ ಶಿಕ್ಷಣ ಮತ್ತು ವಾದ್ಯ ನಿಪುಣತೆಯನ್ನು ಸಾಧಿಸುತ್ತಾ ಪ್ರತಿವರ್ಷ ಯಶಸ್ಸಿನ ಮಟ್ಟವನ್ನು ಏರುತ್ತಿದೆ.

ಪ್ರಸ್ತುತ ಐ.ಎಫ್.ಎ ನೆರವಿನಿಂದ ಆರನೇ ತರಗತಿಯಿಂದ ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ, ಮಿರಜ್ ಸಂಗೀತ ವಾದ್ಯಗಳು ಮತ್ತು ತಯಾರಿಕೆಯ ಬಗ್ಗೆ ತಿಳಿಸಲು ಯೋಜನೆಯನ್ನು ಹಾಕಿಕೊಂಡಿದೆ. ಭಾರತೀಯ ಶಾಸ್ತ್ರೀಯ ಕಲೆಗಳ ತರಬೇತಿಯ ಜೊತೆಗೆ ಶಿಕ್ಷಣ ಶಾಸ್ತ್ರಕ್ಕೆ ಸಾಂಪ್ರದಾಯಿಕ ಮತ್ತು ಆಧುನಿಕ ವಿಧಾನಗಳನ್ನು ಸಂಯೋಜಿಸುವುದು ಈ ಯೋಜನೆಯ ಆಶಯವಾಗಿದೆ. ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಮೀರಜ್ ಪಟ್ಟಣ ತಾನ್‌ಪುರ ಮತ್ತು ಸಿತಾರ್ ಸಂಗೀತ ವಾದ್ಯಗಳಿಗೆ ಹೆಸರುವಾಸಿಯಾಗಿದೆ. ಈ ವಾದ್ಯಗಳನ್ನು ಸಂಪೂರ್ಣ ಕೈಯಿಂದ ತಯಾರಿಸಲಾಗುತ್ತದೆ. ಅದಕ್ಕಾಗಿ ವಿಶೇಷ ಕುಶಲಕರ್ಮಿಗಳೇ ಬೇಕು. ದುರ್ದೈವವೆಂದರೆ, ಸಂಗೀತ ಅಭ್ಯಾಸ ಮಾಡುವ ಅನೇಕರು ಆಪ್ಲಿಕೇಶನ್ ಅಥವಾ ತಾಂತ್ರಿಕ ಯಂತ್ರಗಳನ್ನೇ ಅವಲಂಬಿಸಿಕೊಂಡಿದ್ದಾರೆ.

ಇಂತಹ ಸಾಧನಗಳ ಬಳಕೆಯಿಂದಾಗಿ ಈ ಪರಂಪರಾಗತ ವಾದ್ಯಗಳು ಈಗ ಕಣ್ಮರೆಯಾಗುತ್ತಿರುವುದು ಬೇಸರದ ಸಂಗತಿ.

ವಿದ್ಯಾರ್ಥಿಗಳ ಸಂಗೀತಾಸಕ್ತಿಯನ್ನು ವಾದ್ಯ ತಯಾರಿಕೆಯೊಂದಿಗೆ ಸಂಯೋಜಿಸಿ ವಾದ್ಯ ತಯಾರಿಕೆ ಕೌಶಲ್ಯ ಮತ್ತು ವಾದನಗಳನ್ನು ಅಧ್ಯಯನ ಮಾಡುತ್ತಿದೆ. ಅಲ್ಲದೇ ಮೀರಜ್ ಕಲಾ ಸಮುದಾಯದ ಸದಸ್ಯರು ಮಕ್ಕಳ ಕಲಿಕೆಯೊಂದಿಗೆ ಅಂತರ್ಗತಗೊಳಿಸಿ ಸಮುದಾಯದೊಂದಿಗೆ ಒಂದು ಸಂಪರ್ಕವನ್ನು ಬೆಳೆಸುತ್ತಿದ್ದಾರೆ.

ಸಂಗೀತ ಗೋಷ್ಠಿಗಳಲ್ಲಿ ವಾದ್ಯ ತಯಾರಿಕರ ಸ್ಥಾನವನ್ನು ಅರ್ಥಮಾಡಿಕೊಳ್ಳುವುದು ಮತ್ತು ಅವರ ಕೆಲಸ ಹಾಗೂ ಕೊಡುಗೆಗಳನ್ನು ಗುರುತಿಸುವುದು ಈ ಯೋಜನೆಯ ಮತ್ತೊಂದು ಗುರಿಯಾಗಿದೆ. ವಿದ್ಯಾರ್ಥಿಗಳ ಮಿರಜ್ ಕಲೆಯ ಕಲಿಕೆಯನ್ನು ಆಡಿಯೋ ವಿಡಿಯೋ ಮೂಲಕ ದಾಖಲಿಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ.

ಕರ್ನಾಟಕದ ಸರ್ಕಾರೀ ಶಾಲೆಗಳ ಶಿಕ್ಷಕ/ ಶಿಕ್ಷಕಿಯರಿಂದ ಕಲಾ ಸಂಯೋಜಿತ ಯೋಜನಾ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ

ಕಲಿ ಕಲಿಸು ಅನ್ನುವುದು ಪಠ್ಯಬೋಧನಾ ಕಾರ್ಯದಲ್ಲಿ ಶಿಕ್ಷಕರು ಕಲಾ ಮಾಧ್ಯಮವನ್ನು ಅಳವಡಿಸಿಕೊಳ್ಳುವುದರ ಜೊತೆಯಲ್ಲೇ ವಿದ್ಯಾರ್ಥಿಗಳಲ್ಲಿ ಕಲಿಕೆ ಎಂಬುದನ್ನು ನಿರಂತರ ಕ್ರಿಯೆಯನ್ನಾಗಿಸುವ ಪ್ರಯತ್ನ. ಕತೆ, ಹಾಡು, ನಾಟಕ, ಚಿತ್ರಕಲೆ ಮತ್ತು ಯಾವುದೇ ಸ್ಥಳೀಯ ಕಲಾಪ್ರಕಾರಗಳ ಮುಖಾಂತರ ಶಾಲಾ ಕೊಠಡಿಯನ್ನು ದಾಟಿ ಹೊರಜಗತ್ತಿನೊಂದಿಗೆ ವಿಶೇಷವಾದ ಸಂಬಂಧವನ್ನು ಗಟ್ಟಿಯಾಗಿ ಕಟ್ಟಿಕೊಡುವ ಸೃಜನಶೀಲ ನಡೆ ಹಾಗೂ ಪಠ್ಯಕ್ರಮಗಳ ಸಂಯೋಜಿತ ಪ್ರಯತ್ನಗಳಿಂದ ವಿದ್ಯಾರ್ಥಿ ಕೇಂದ್ರೀಕೃತ ಕಲಿಕಾ ವ್ಯವಸ್ಥೆಯನ್ನು ತರುವ ಆಸೆ.

ಮೇಲಿನ ಉದ್ದೇಶಗಳನ್ನು ಆಧರಿಸಿ, ಐಎಫ್ಎ ಯು ಯೋಜನೆಯ ಪ್ರಸ್ತಾವನೆಗಳನ್ನು ಕೋರುತ್ತಿದೆ. ಶಾಲಾ ಪಠ್ಯಕ್ರಮಗಳಿಗೆ ಪೂರಕವಾಗಿ ಕಾರ್ಯಗೊಳ್ಳುವ ಈ ಯೋಜನೆಗಳು ಕಲಾ ಸಂಯೋಜಿತ ಬೋಧನಾಕ್ರಮಗಳಿಗೆ ಭದ್ರವಾದ ಬುನಾದಿಯನ್ನು ನಿರ್ಮಿಸಿಕೊಡಬೇಕು. ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ಸಂಶೋಧನಾ ಗುಣವನ್ನು ಪ್ರೋತ್ಸಾಹಿಸುವ ಕಲಾ ಸಂಯೋಜಿತ ಕಾರ್ಯಯೋಜನೆಗಳನ್ನು ತಮ್ಮ ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ತಿಳಿಸುವುದು ಅಪೇಕ್ಷಣೀಯ. ಕಲಿ ಕಲಿಸು NEP 2020ರ ಉದ್ದೇಶಗಳನ್ನು ಸಹ ಆಧರಿಸಿರುತ್ತದೆ.

ಯೋಜನೆಗಳ ಪ್ರಸ್ತಾವನೆಗಳನ್ನು ಯಾರು ಸಲ್ಲಿಸಬಹುದು

ಕಲಾ ಶಿಕ್ಷಣದಲ್ಲಿ ಪೂರ್ವಾನುಭವ ಅಥವಾ ಸಂಬಂಧಿತ ತರಬೇತಿ ಹೊಂದಿರುವ ಸರಕಾರಿ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು, ಮತ್ತು ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು.

ಯೋಜನೆಯ ವ್ಯಾಪ್ತಿ

ಕಾರ್ಯಗತಗೊಳಿಸಲು ಬಯಸುವ ಯೋಜನೆಗಳು ಕೆಳಕಂಡ ಯಾವುದಾದರು ಅಂಶಗಳನ್ನು ಸ್ಪಷ್ಟವಾಗಿ ಒಳಗೊಂಡಿರಬೇಕು.

- ಯೋಜನೆಯ ಪರಿಧಿಯಲ್ಲಿ ಪೋಷಕರು, ವಿದ್ಯಾರ್ಥಿಗಳು, ಶಿಕ್ಷಕರು, ಕಲಾಸೇವೆಯಲ್ಲಿ ತೊಡಗಿರುವವರು ಹೀಗೆ ಇನ್ನೂ ಹಲವು ಪಾಲುದಾರು ಭಾಗವಹಿಸುವಂತಿರಬೇಕು.
- ತರಗತಿಯ ಬೋಧನಾ ಕ್ರಮಗಳಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಅಥವಾ ಕಲಾ ಪ್ರಕಾರಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನಗಳಾಗಿರಬೇಕು.
- ಯೋಜನೆಯು ವಿದ್ಯಾರ್ಥಿ ಕೇಂದ್ರಿತ ಕಲಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಂಗಕಲೆ, ಸಂಗೀತ, ಜಾನಪದ, ದೃಶ್ಯಕಲೆ, ಛಾಯಾಚಿತ್ರ ಕಲೆ, ಚಲನಚಿತ್ರ, ಸಾಹಿತ್ಯ ಕಲೆಯಲ್ಲದೆ ಯಾವುದಾದರೂ ಒಂದು ಕಲೆಯನ್ನು ವಿಶೇಷವಾಗಿ ಅಭ್ಯಸಿಸುವಂಥದ್ದಾಗಿರಬೇಕು.
- ಯೋಜನೆಯು ಸಾಮಾಜಿಕ ನ್ಯಾಯ ಮತ್ತು ಪರಿಸರ ಸಂಬಂಧಿ ಅರಿವು ಮೂಡಿಸಲು ಶಾಲಾ ಸಮುದಾಯವನ್ನು ಪ್ರೇರೇಪಿಸುವಲ್ಲಿ ಸಹಕಾರಿಯಾಗಬೇಕು.

ಇದಲ್ಲದೆ ಇನ್ನಿತರ ಅಲ್ಪಾವಧಿ ಅಥವಾ ದೀರ್ಘಾವಧಿಯ ನೂತನ ಮತ್ತು ಸೃಜನಶೀಲ ಕಲಾಶಿಕ್ಷಣ ಯೋಜನೆಗಳನ್ನು ಸಹ ಪರಿಗಣಿಸಲಾಗುವುದು.

ಯೋಜನಾ ಪ್ರಸ್ತಾವನೆ ಸಲ್ಲಿಸುವ ವಿಧಾನ

- ಯೋಜನೆಯನ್ನು ಕನ್ನಡ, ಉರ್ದು, ಹಿಂದಿ, ಮರಾಠಿ, ತೆಲುಗು ಹಾಗು ಇಂಗ್ಲಿಷ್ ಭಾಷೆಯಲ್ಲಿ ಬರೆಯಬಹುದು.
- ಯೋಜನೆಯು ಒಂದು ವರ್ಷದ ಕಾಲಾವಧಿಯನ್ನು ಹೊಂದಿರ ಬೇಕು.
- ಯೋಜನೆಗೆ ಸಂಬಂಧಪಟ್ಟ ಪ್ರಶ್ನೆಗಳಿದ್ದಲ್ಲಿ ನಿಮ್ಮ ಹೊಳಹುಗಳ ಬಗ್ಗೆ ಚರ್ಚಿಸಲು ಬಯಸಿದಲ್ಲಿ ಅಥವಾ ನಿಮ್ಮ ಕರಡು ಪ್ರಸ್ತಾವನೆಯನ್ನು ನಮಗೆ ಕಳುಹಿಸ ಬಯಸಿದಲ್ಲಿ, ನಮ್ಮನ್ನು ಸಂಪರ್ಕಿಸಿ.
- ನಿಮ್ಮ ಅಂತಿಮ ಪ್ರಸ್ತಾವನೆಯು ಇಮೇಲ್ ಮೂಲಕ ನಮಗೆ ಸೇರಬೇಕು.
- ಕೊನೆಯ ಸುತ್ತಿಗೆ ಆಯ್ಕೆಯಾದ ಪ್ರಸ್ತಾವನೆಗಳನ್ನು ಬಾಹ್ಯ ತಜ್ಞರ ಆಯ್ಕೆ ಸಮಿತಿ ಮೌಲ್ಯಮಾಪನ ಮಾಡುತ್ತದೆ. ಇದಕ್ಕಾಗಿ ಅರ್ಜಿದಾರರು ತಮ್ಮ ಯೋಜನೆಯ ಪರಿಕಲ್ಪನೆಯನ್ನು ಈ ಸಮಿತಿಯ ಮುಂದೆ ಪ್ರತಿಪಾದಿಸಬೇಕಾಗುತ್ತದೆ.
- ಒಂದು ತಿಂಗಳ ಅವಧಿಯಲ್ಲಿ ಆಯ್ಕೆಯಾದ ಯೋಜನೆಗಳ ಪಟ್ಟಿಯನ್ನು ನಿರೀಕ್ಷಿಸಬಹುದು.

ನಿಮ್ಮ ಅಂತಿಮ ಪ್ರಸ್ತಾವನೆಯು ಈ ಕೆಳಕಂಡ ಕನಿಷ್ಠ ವಿಷಯಗಳ ವಿವರಗಳನ್ನು ಒಳಗೊಂಡಿರಬೇಕು.

- ಯೋಜನೆಯನ್ನು ಕೈಗೊಳ್ಳಲು ವಿನಂತಿ ಪತ್ರ.
- ನಿಮ್ಮ ವೈಯಕ್ತಿಕ ಪರಿಚಯ.
- ವೈಯಕ್ತಿಕ ಹಿನ್ನೆಲೆ, ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಜೊತೆಗೆ ಶಾಲೆಯ ಹೆಸರು, ವಿಳಾಸ, ಸಹಶಿಕ್ಷಕರ ಸಾಮರ್ಥ್ಯಗಳ ವಿವರಗಳು
- ಶಾಲೆಯ ಪ್ರಸ್ತುತ ಕಲಾ ಶಿಕ್ಷಣ ಚಟುವಟಿಕೆಗಳು ಯಾವುದಾದರೂ ಇದ್ದರೆ ಅವುಗಳ ಸಂಕ್ಷಿಪ್ತ ಮಾಹಿತಿ
- ಯೋಜನೆಯ ಉದ್ದೇಶಗಳು.
- ಕಾರ್ಯ ಯೋಜನೆಗಳ ವಿವರ.
- ಯೋಜನೆಯಲ್ಲಿ ಶಾಲೆಯ ಸಹೋದ್ಯೋಗಿಗಳ ಪಾತ್ರ.
- ಯೋಜನಾವಧಿಯಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳ ವಿವರ.
- ಯೋಜನೆಯಿಂದ ಬರಬಹುದಾದ ಅಪೇಕ್ಷಿತ ಫಲಿತಾಂಶಗಳು.
- ಖರ್ಚು – ವೆಚ್ಚಗಳ ವಿವರ.

ಬಜೆಟ್

- ಗರಿಷ್ಠ ರೂ. 1,00,000/– ವರೆಗೆ.
- ಪ್ರಸ್ತಾವನೆಯನ್ನು ಸಲ್ಲಿಸುವವರು ಗರಿಷ್ಠ ರೂ. 35,000/– ವರೆಗೆ ಸ್ವಯಂ ಶುಲ್ಕವನ್ನಾಗಿ ಪರಿಗಣಿಸಬಹುದು..

ಪ್ರಸ್ತಾವನೆಗಳನ್ನು ಹಾಗೂ ಸಂದೇಹಗಳನ್ನು krishna@indiaifa.org ಗೆ ಕಳುಹಿಸಿಕೊಡಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಸಂಪರ್ಕಜಾಲಕ್ಕೆ ಭೇಟಿ ನೀಡಿ:

https://indiaifa.org/programmes/arts-education.html

ಕರ್ನಾಟಕ ಸರ್ಕಾರಿ ಶಾಲೆಗಳಲ್ಲಿ ಕಲಾ ಸಂಯೋಜಿತ ಯೋಜನೆಗಳನ್ನು ನಡೆಸಲು ಕಲಾವಿದರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ

ಕಲಿ ಕಲಿಸು ಅನ್ನುವುದು ಪಠ್ಯಬೋಧನಾ ಕಾರ್ಯದಲ್ಲಿ ಕಲಾವಿದರು ಕಲಾ ಮಾಧ್ಯಮವನ್ನು ಅಳವಡಿಸಿಕೊಳ್ಳುವುದರ ಜೊತೆಯಲ್ಲಿ ವಿದ್ಯಾರ್ಥಿಗಳಿಗೆ ಕಲಿಕೆ ಎಂಬುದನ್ನು ನಿರಂತರ ಕ್ರಿಯೆಯನ್ನಾಗಿಸುವ ಪ್ರಯತ್ನ. ಕತೆ, ಹಾಡು, ನಾಟಕ, ಚಿತ್ರಕಲೆ ಮತ್ತು ಯಾವುದೇ ಸ್ಥಳೀಯ ಕಲಾಪ್ರಕಾರಗಳ ಮುಖಾಂತರ ಶಾಲಾ ಕೊಠಡಿಯನ್ನು ದಾಟಿ ಹೊರಜಗತ್ತಿನೊಂದಿಗೆ ವಿಶೇಷವಾದ ಸಂಬಂಧವಂದನ್ನು ಗಟ್ಟಿಯಾಗಿ ಕಟ್ಟಿಕೊಡುವ ಸೃಜನಶೀಲ ನಡೆ, ಹಾಗೂ ಪಠ್ಯಕ್ರಮಗಳ ಸಂಯೋಜಿತ ಪ್ರಯತ್ನಗಳಿಂದ ವಿದ್ಯಾರ್ಥಿ ಕೇಂದ್ರೀಕೃತ ಕಲಿಕಾ ವ್ಯವಸ್ಥೆಯನ್ನು ತರುವ ಆಸೆ.

ಮೇಲಿನ ಉದ್ದೇಶಗಳನ್ನು ಆಧರಿಸಿ, ಐಎಫ್ಎ ಯು ಯೋಜನೆಯ ಪ್ರಸ್ತಾವನೆಗಳನ್ನು ಕೋರುತ್ತಿದೆ. ಶಾಲಾ ಪಠ್ಯಕ್ರಮಗಳಿಗೆ ಪೂರಕವಾಗಿ ಕಾರ್ಯಗೊಳ್ಳುವ ಈ ಯೋಜನೆಗಳು ಕಲಾಸಂಯೋಜಿತ ಬೋಧನಾ ಕ್ರಮಗಳಿಗೆ ಭದ್ರವಾದ ಬುನಾದಿಯನ್ನು ನಿರ್ಮಿಸಿಕೊಡಬೇಕು. ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ಸಂಶೋಧನಾ ಗುಣವನ್ನು ಪ್ರೋತ್ಸಾಹಿಸುವ ಕಲಾ ಸಂಯೋಜಿತ ಕಾರ್ಯಯೋಜನೆಗಳನ್ನು ತಮ್ಮ ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ತಿಳಿಸುವುದು ಅಪೇಕ್ಷಣೀಯ. ಕಲಿ ಕಲಿಸು NEP 2020ರ ಉದ್ದೇಶಗಳನ್ನೂ ಸಹ ಆಧರಿಸಿರುತ್ತವೆ.

ಯೋಜನೆಗಳ ಪ್ರಸ್ತಾವನೆಗಳನ್ನು ಯಾರು ಸಲ್ಲಿಸಬಹುದು

- ಕಲಾ ಶಿಕ್ಷಣದಲ್ಲಿ ಪೂರ್ವಾನುಭವ ಇರುವ ಕಲಾವಿದರು ಅಥವಾ ಕಲಾಶಿಕ್ಷಣದಲ್ಲಿ ಸೂಕ್ತವಾದ ತರಬೇತಿ ಪಡೆದವರು ಪ್ರಸ್ತಾವನೆಗಳನ್ನು ಸಲ್ಲಿಸಬಹುದು.
- ಸ್ಥಳೀಯ ಭಾಷೆಯನ್ನು ಬಲ್ಲವರಾಗಿರಬೇಕು.
- ಭಾರತೀಯ ಪ್ರಜೆಗಳಾಗಿರಬೇಕು.

ಯೋಜನೆಯ ವ್ಯಾಪ್ತಿ

ಕಾರ್ಯಗತಗೊಳಿಸಲು ಬಯಸುವ ಯೋಜನೆಗಳು ಕೆಳಕಂಡ ಯಾವುದಾದರು ಅಂಶಗಳನ್ನು ಸ್ಪಷ್ಟವಾಗಿ ಒಳಗೊಂಡಿರಬೇಕು.

- ಯೋಜನೆಯ ಪರಿಧಿಯಲ್ಲಿ ಪೋಷಕರು, ವಿದ್ಯಾರ್ಥಿಗಳು, ಶಿಕ್ಷಕರು, ಕಲಾಸೇವೆಯಲ್ಲಿ ತೊಡಗಿರುವವರು ಹೀಗೆ ಇನ್ನೂ ಹಲವು ಪಾಲುದಾರರು ಭಾಗವಹಿಸುವಂತಿರಬೇಕು.
- ತರಗತಿಯ ಬೋಧನಾ ಕ್ರಮಗಳಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಅಥವಾ ಕಲಾಪ್ರಕಾರಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನಗಳಾಗಿರಬೇಕು.
- ಯೋಜನೆಯು ವಿದ್ಯಾರ್ಥಿ ಕೇಂದ್ರಿತ ಕಲಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಂಗಕಲೆ, ಸಂಗೀತ, ಜಾನಪದ, ದೃಶ್ಯಕಲೆ, ಛಾಯಾಚಿತ್ರ ಕಲೆ, ಚಲನಚಿತ್ರ, ಸಾಹಿತ್ಯ ಕಲೆಯಲ್ಲದೆ ಯಾವುದಾದರೂ ಒಂದು ಕಲೆಯನ್ನು ವಿಶೇಷವಾಗಿ ಅಭ್ಯಸಿಸುವಂಥದ್ದಾಗಿರಬೇಕು.
- ಯೋಜನೆಯು ಸಾಮಾಜಿಕ ನ್ಯಾಯ ಮತ್ತು ಪರಿಸರ ಸಂಬಂಧಿ ಅರಿವು ಮೂಡಿಸಲು ಶಾಲಾ ಸಮುದಾಯವನ್ನು ಪ್ರೇರೇಪಿಸುವಲ್ಲಿ ಸಹಕಾರಿಯಾಗಬೇಕು.

ಇದಲ್ಲದೆ ಇನ್ನಿತರ ಅಲ್ಪಾವಧಿ ಅಥವಾ ದೀರ್ಘಾವಧಿಯ ನೂತನ ಮತ್ತು ಸೃಜನಶೀಲ ಕಲಾಶಿಕ್ಷಣ ಯೋಜನೆಗಳನ್ನು ಸಹ ಪರಿಗಣಿಸಲಾಗುವುದು.

ಯೋಜನಾ ಪ್ರಸ್ತಾವನೆ ಸಲ್ಲಿಸುವ ವಿಧಾನ

- ನಿಮ್ಮ ಯೋಜನೆಯನ್ನು ಕನ್ನಡ, ಉರ್ದು, ಹಿಂದಿ, ಮರಾಠಿ, ತೆಲುಗು ಹಾಗು ಇಂಗ್ಲಿಷ್ ಭಾಷೆಯಲ್ಲಿ ಬರೆಯಬಹುದು.
- ಯೋಜನೆಯು ಒಂದು ವರ್ಷದ ಕಾಲಾವಧಿಯನ್ನು ಹೊಂದಿರಬೇಕು.
- ಯೋಜನೆಗೆ ಸಂಬಂಧಪಟ್ಟ ಪ್ರಶ್ನೆಗಳಿದ್ದಲ್ಲಿ, ನಿಮ್ಮ ಹೊಳಹುಗಳ ಬಗ್ಗೆ ಚರ್ಚಿಸ ಬಯಸಿದಲ್ಲಿ ಅಥವಾ ನಿಮ್ಮ ಕರಡು ಪ್ರಸ್ತಾವನೆಯನ್ನು ನಮಗೆ ಕಳುಹಿಸ ಬಯಸಿದಲ್ಲಿ ನಮ್ಮನ್ನು ಸಂಪರ್ಕಿಸಿ.
- ನಿಮ್ಮ ಅಂತಿಮ ಪ್ರಸ್ತಾವನೆಯು ಇಮೇಲ್ ಮೂಲಕ ನಮಗೆ ಸೇರಬೇಕು.
- ಕೊನೆಯ ಸುತ್ತಿಗೆ ಆಯ್ಕೆಯಾದ ಪ್ರಸ್ತಾವನೆಗಳನ್ನು ಬಾಹ್ಯ ತಜ್ಞರ ಆಯ್ಕೆ ಸಮಿತಿ ಮೌಲ್ಯಮಾಪನ ಮಾಡುತ್ತದೆ. ಇದಕ್ಕಾಗಿ ಅರ್ಜಿದಾದರು ತಮ್ಮ ಯೋಜನೆಯ ಪರಿಕಲ್ಪನೆಯನ್ನು ಈ ಸಮಿತಿಯ ಮುಂದೆ ಪ್ರತಿಪಾದಿಸಬೇಕಾಗುತ್ತದೆ.
- ಒಂದು ತಿಂಗಳ ಅವಧಿಯಲ್ಲಿ ಕಾರ್ಯಗತಗೊಳಿಸಲು ಆಯ್ಕೆಯಾದ ಯೋಜನೆಗಳ ಪಟ್ಟಿಯನ್ನು ನಿರೀಕ್ಷಿಸಬಹುದು.

ನಿಮ್ಮ ಅಂತಿಮ ಪ್ರಸ್ತಾವನೆಯು ಈ ಕೆಳಕಂಡ ಕನಿಷ್ಠ ವಿಷಯಗಳ ವಿವರಗಳನ್ನು ಒಳಗೊಂಡಿರಬೇಕು

- ಯೋಜನೆಯನ್ನು ಕೈಗೊಳ್ಳಲು ವಿನಂತಿ ಪತ್ರ
- ನಿಮ್ಮ ವೈಯಕ್ತಿಕ ಪರಿಚಯದ ಜೊತೆಗೆ ಮಕ್ಕಳೊಂದಿಗೆ ಕೆಲಸ ಮಾಡಿದ ನಿಮ್ಮ ಅನುಭವ.
- ನೀವು ಆಯ್ಕೆ ಮಾಡಿಕೊಂಡ ಶಾಲೆಯ ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಜೊತೆಗೆ ಶಾಲೆಯ ಹೆಸರು, ವಿಳಾಸ, ಹಿನ್ನೆಲೆ, ಸಹಶಿಕ್ಷಕರ ಸಾಮರ್ಥ್ಯಗಳ ವಿವರಗಳು.
- ನೀವು ಆಯ್ಕೆ ಮಾಡಿಕೊಂಡ ಶಾಲೆಯ ಪ್ರಸ್ತುತ ಕಲಾ ಶಿಕ್ಷಣ ಚಟುವಟಿಕೆಗಳು ಯಾವುದಾದರೂ ಇದ್ದರೆ ಅವುಗಳ ಸಂಕ್ಷಿಪ್ತ ಮಾಹಿತಿ.
- ಆಯ್ಕೆ ಮಾಡಿಕೊಂಡ ಶಾಲೆಯ ಮುಖ್ಯೋಪಾಧ್ಯಾಯರ ಒಪ್ಪಿಗೆ ಪತ್ರದ ಜೊತೆಗೆ ಶಾಲೆಯ ಸಂಪರ್ಕ ಬಿಂದುವಿನ ಹೆಸರು ಮತ್ತು ದೂರವಾಣಿ ಸಂಖ್ಯೆ.
- ಯೋಜನೆಯ ಉದ್ದೇಶಗಳು.
- ಕಾರ್ಯ ಯೋಜನೆಗಳ ವಿವರ.
- ಯೋಜನಾವಧಿಯಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳ/ಸಮುದಾಯದವರ ವಿವರ
- ಯೋಜನೆಯಿಂದ ಬರಬಹುದಾದ ಅಪೇಕ್ಷಿತ ಫಲಿತಾಂಶಗಳು.
- ಖರ್ಚು – ವೆಚ್ಚಗಳ ವಿವರ.

ಬಜೆಟ್:

ಗರಿಷ್ಠ ರೂ. 2,00,000/– ವರೆಗೆ.

ಪ್ರಸ್ತಾವನೆಯನ್ನು ಸಲ್ಲಿಸುವವರು ಗರಿಷ್ಠ ರೂ. 75,000/– ವರೆಗೆ ಸ್ವಯಂ ಶುಲ್ಕವನ್ನಾಗಿ ಪರಿಗಣಿಸಬಹುದು.

ಪ್ರಸ್ತಾವನೆಗಳನ್ನು ಹಾಗೂ ಸಂದೇಹಗಳನ್ನು radhika@indiaifa.org ಗೆ ಕಳುಹಿಸಿಕೊಡಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಸಂಪರ್ಕಜಾಲಕ್ಕೆ ಭೇಟಿ ನೀಡಿ:

https://indiaifa.org/programmes/arts-education.html

SIFF YOUNG ARTISTE
We Nurture The Artiste In You

SIFF ವೆಂಚರ್ಸ್ ಬಗ್ಗೆ...

SIFF ವೆಂಚರ್ಸ್ ಪ್ರೈ. Ltd. ಭಾರತದಲ್ಲಿ ಕಲೆ ಮತ್ತು ಶಿಕ್ಷಣದ ಕ್ಷೇತ್ರವನ್ನು ಉತ್ತೇಜಿಸಲು ಕಾರ್ಯನಿರ್ವಹಿಸುವ ಸಂಸ್ಥೆಯಾಗಿದೆ. ಬಾಹ್ಯ ಯೋಜನೆಗಳನ್ನು ಬೆಂಬಲಿಸುವುದರ ಹೊರತಾಗಿ, ಇದು ಯುವ ಕಲಾವಿದ ಮತ್ತು ಪರೀಕ್ಷೆಯಂತಹ ತನ್ನದೇ ಆದ ಉಪಕ್ರಮಗಳನ್ನು ನಿರ್ದೇಶಿಸುತ್ತದೆ.

ಯುವ ಕಲಾವಿದರ ಬಗ್ಗೆ...

ಯಂಗ್ ಆರ್ಟಿಸ್ಟ್ ಪ್ರಗತಿಶೀಲ ಪಠ್ಯಕ್ರಮ ಮತ್ತು ನಿಪುಣ ಅಧ್ಯಾಪಕರ ಮೂಲಕ ಶಾಸ್ತ್ರೀಯ ಮತ್ತು ಸಮಕಾಲೀನ ಸಂಗೀತ ಮತ್ತು ನೃತ್ಯದಲ್ಲಿ ಆನ್‌ಲೈನ್ ಕಲಿಕೆಯ ಕಾರ್ಯಕ್ರಮ ಗಳನ್ನು ಒದಗಿಸುತ್ತದೆ. ನಮ್ಮ YouTube ಚಾನಲ್‌ಗಳ ಪುಷ್ಪಗುಚ್ಛದ ಮೂಲಕ ನಾವು ಉತ್ತಮ

ತರಗತಿ ನೋಂದಾವಣೆಗಾಗಿ ಈ ಲಿಂಕ್‌ಗೆ ಲಾಗ್ ಆನ್ ಆಗಿರಿ..

https://www.youngartiste.com/www.siff.in

ವೀಡಿಯೋ ತರಗತಿಗಳಿಗಾಗಿ ಈ ಕೆಳಗಿನ QR Code ಅನ್ನು Scan ಮಾಡಿ Subscribe ಆಗಿರಿ

Learn Now!
BOLLYWOOD DANCE

Learn Now!
GUITAR

Learn Now!
HINDUSTANI VOCALS

Learn Now!
INDIAN VOCALS

SIFF YOUNG ARTISTE
We Nurture The Artiste In You

ಗುಣಮಟ್ಟದ ಕಲಿಕೆಯನ್ನು ನೀಡುತ್ತೇವೆ, ವೀಡಿಯೊ ಟ್ಯುಟೋರಿಯಲ್‌ಗಳು, ಲೈವ್ ತರಗತಿಗಳು, ಕಾರ್ಯಾಗಾರಗಳು, ಕಲಿಕಾ ಸಾಮಗ್ರಿಗಳು ಮತ್ತು ಮಾನ್ಯತೆಗಳನ್ನು ಮುಕ್ತ ಮತ್ತು ಎಲ್ಲರಿಗೂ ಕೈಗೆಟುಕುವಂತೆ ನೀಡುತ್ತೇವೆ.

ಪರೀಕ್ಷೆ ಬಗ್ಗೆ...

ಕರ್ನಾಟಕ ಸ್ಟೇಟ್ ಬೋರ್ಡ್ SSLC ಪರೀಕ್ಷೆಗೆ (KSEEB/KSEAB) ತಯಾರಿ ನಡೆಸುತ್ತಿರುವ ಯಾವುದೇ ವಿದ್ಯಾರ್ಥಿಗೆ ಒಂದು-ನಿಲುಗಡೆ ಪರಿಹಾರವನ್ನು ಕಲ್ಪಿಸಲಾಗಿದೆ. ಸಮರ್ಪಿತ ಚಾನಲ್‌ನಲ್ಲಿ ಸಮಗ್ರ ವಿಷಯವಾರು ವೀಡಿಯೊ ಉಪನ್ಯಾಸಗಳನ್ನು ನೀಡುತ್ತದೆ. ಕೋರ್ಸ್‌ಗಳು ಟಿಪ್ಪಣಿಗಳು, ಪರಿಷ್ಕರಣೆಗಳು, ಲೈವ್ ಪರಿಷ್ಕರಣೆ ತರಗತಿಗಳು, WhatsApp ಮತ್ತು ಟೆಲಿಗ್ರಾಮ್‌ನಲ್ಲಿ ಸಂದೇಹ ಪರಿಹಾರ ದೊಂದಿಗೆ ಪೂರಕವಾಗಿವೆ.

ವೀಡಿಯೋ ತರಗತಿಗಳಿಗಾಗಿ ಈ ಕೆಳಗಿನ QR Code ಅನ್ನು Scan ಮಾಡಿ Subscribe ಆಗಿರಿ

Learn Now! KATHAK

Learn Now! KEYBOARD

Learn Now! WESTERN VOCALS

ಕಲಿ-ಕಲಿಸು

AN ARTS EDUCATION TEACHER INITIATIVE

KALI-KALISU

Over 25 Years of Celebrating the Arts

I F A

India Foundation for the Arts

ಹೆಜ್ಜೆಗಳು

ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಪ್ರಯೋಗಗಳು
2019–20 : 2022–23

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್
ಅಪೂರ್ವ, ನೆಲಮಹಡಿ, ನಂ.259, 4ನೇ ಕ್ರಾಸ್,
ರಾಜಮಹಲ್ ವಿಲಾಸ್, 2ನೇ ಹಂತ
2ನೇ ಬ್ಲಾಕ್, ಬೆಂಗಳೂರು – 5600094
ದೂರವಾಣಿ : 8762954080 । 080 2341 4681/82